10) ಶ್ರೀರಾಮರಡ್ಡಿ : ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು

11) ಮಂಜುನಾಥ್ ಸಿ. ಕುನ್ನೂರು: ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು

ನಿಯಮಾವಳಿ ರೀತ್ಯಾ ಮಾನ್ಯ ಸಭಾಧ್ಯಕ್ಷರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

11.10 ಪಿ.ಎಂ.

: ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಚರ್ಚೆ ಮುಕ್ತಾಯವಾಗಿದೆ. ನಾಯಕರು ತಮ್ಮ ಉತ್ತರವನ್ನು ಪ್ರಾರಂಭಿಸಬಹುದು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಚರ್ಚೆಗೆ ಸರ್ಕಾರದಿಂದ ಉತ್ತರ

+ ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 19-2-1996 ಸೋಮವಾರದಂದು ಜಂಟೀ ಸದನವನ್ನು ಉದ್ದೇಶಿಸಿ ಗೌರವಾನ್ವಿತ ರಾಜ್ಯಪಾಲರು ಮಾಡಿದಂತಹ ಭಾಷಣದ ಮೇಲೆ ಅನೇಕ ಜನ ವಿರೋಧಪಕ್ಷದ ನಾಯಕರು ಸೇರಿದಂತೆ ಗೌರವಾನ್ವಿತ ಸದಸ್ಯರುಗಳು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ರಾಜ್ಯಪಾಲರ ಭಾಷಣದ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಂತಹ ಕಾಲದಲ್ಲಿ ಕಳೆದ ಒಂದು ವರ್ಷದಲ್ಲಿ ಸರ್ಕಾರ ನಡೆದು ಬಂದಿರುವಂತಹ ದಾರಿಯ ಬಗ್ಗೆ ಸರ್ಕಾರದ ತಪ್ಪು ಒಪ್ಪುಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ, ಅನೇಕ ಅಮೂಲ್ಯವಾದಂತಹ ಸಲಹೆಗಳನ್ನು ಸಹ ಕೊಟ್ಟಿದ್ದಾರೆ, ಅವರೆಲ್ಲರಿಗೂ ಪ್ರಥಮವಾಗಿ ವಂದಿಸುತ್ತೇನೆ. ರಾಜ್ಯಪಾಲರು ಮಾಡಿದಂತಹ ಭಾಷಣದಲ್ಲಿ ಸಾಮಾನ್ಯವಾಗಿ ಮುಂದಿನ ವರ್ಷದ ಸರ್ಕಾರದ ನೀತಿಯ ಬಗ್ಗೆ ಮುಂದಿನ ವರ್ಷದಲ್ಲಿ ನಾವೇನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ. ಪ್ರಾಮುಕ್ಯವಾಗಿ ಅವರ ಭಾಷಣ ರೂಪಿತವಾಗಿರುತ್ತದೆ. ಸಾಮಾನ್ಯವಾಗಿ ನನ್ನ ಅಲ್ಪ ಅನುಭವದಲ್ಲಿ ನೀತಿಯ ಬಗ್ಗೆ ನಾವು ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತೇವೆ. ಬಾಕಿ ಎಲ್ಲಾ ವಿಷಯಗಳನ್ನು ಸರ್ವೆಸಾಮಾನ್ಯವಾಗಿ ಬಜೆಟ್ ಭಾಷಣದಲ್ಲಿ ಸನ್ಮಾನ್ಯ ಅರ್ಥ ಸಚಿವರು ರಾಜ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ ಮತ್ತು ರಾಜ್ಯದ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ನಾವು ಏನು ಮಾಡುತ್ತೇನೆಂಬುದನ್ನು ಅರ್ಥ ಸಚಿವರು ಬಜೆಟ್ ಭಾಷಣದಲ್ಲಿ ಮಂಡನೆ ಮಾಡುತ್ತಾರೆ. ನಾನು ಪ್ರಥಮವಾಗಿ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಈ ಸರ್ಕಾರದ ಗುರಿ, ಈ ಸರ್ಕಾರದ ನೀತಿ, ಇವೆರಡನ್ನು ನಾನು ಪ್ರಾಮುಖ್ಯವಾಗಿ ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಈ ಸರ್ಕಾರದ ಗುರಿ ಈ ರಾಜ್ಯ ಬೇರೆ ಎಲ್ಲಾ ರಾಜ್ಯಗಳಿಗಿಂತ ನಮ್ಮ ಅಭಿವೃದ್ಧಿಯ ವೇಗ ಹೆಚ್ಚಾಗಬೇಕು, ನಮ್ಮ ಕೈಗಾರಿಕಾ ಬೆಳವಣಿಗೆ ಹೆಚ್ಚಾಗಬೇಕು. ನಮ್ಮ ವ್ಯವಸಾಯ ರಂಗದಲ್ಲಿ ನಮ್ಮ ಸಾಧನೆ ಹೆಚ್ಚಾಗಬೇಕು. ರಾಜ್ಯದಲ್ಲಿರುವಂತಹ ನಿರುದ್ಯೋಗ ಸಮಸ್ಯೆಗೆ ತಕ್ಕಂತೆ ಸ್ಪಂಧಿಸುವ ಹಾಗೆ ನಮ್ಮ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಇದು ನಮ್ಮ ಮುಖ್ಯ ಗುರಿಯಾಗಿದೆ. ಸಾಮಾನ್ಯವಾಗಿ ರತಕ್ಕಂಥ ನಾಗರಿಕ ಸೌಲಭ್ಯಗಳನನು ಜನಸಾಮಾನ್ಯರಿಗೆ ಒದಗಿಸುವಂಥಾದ್ದಕ್ಕೆ ಅವಶ್ಯಕವಾದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂಥಾದ್ದು. ನಮ್ಮ ಸರ್ಕಾರದ

ಗುರಿಯಾಗಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷ ಎರಡು ತಿಂಗಳಾಗಿದೆ. ಈ ಅವಧಿಯಲ್ಲಿ ಹಲವಾರು ಸಮಸ್ಯೆಗಳು ಬಂದಂತಹ ಕಾಲದಲ್ಲಿ ಜನತೆಯ ಸಹಕಾರದಿಂದ ಮತ್ತು ವಿರೋಧ ಪಕ್ಷದ ಮುಖಂಡರುಗಳ ಸಹಕಾರದಿಂದ ಅದನ್ನು ಎದುರಿಸುವಂಥ ಪ್ರಯತ್ನವನ್ನು ಮಾಡಿದ್ದೇವೆ. ಅದರಲ್ಲಿ ಸ್ವಲ್ಪಮಟ್ಟಿಗೆ ಸಫಲತೆಯನ್ನು ಕಂಡಿದ್ದೇವೆಂದು ನಾನು ಭಾವಿಸುತ್ತೇನೆ. ಇದಕ್ಕೆ ಕೇಂದ್ರಸರ್ಕಾರವು ಸಹಕಾರವನ್ನು ನೀಡಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ನಾನು ಈ ಮಾತುಗಳನ್ನು ಆಡುವಂತಹ ಸಂದರ್ಭದಲ್ಲಿ ಈ ಸರ್ಕಾರ ತನ್ನ ಗುರಿಯನ್ನು ಮುಟ್ಟಬೇಕಾದರೆ, ಈ ರಾಜ್ಯವನ್ನು ಬೇರೆಲ್ಲಾ ರಾಜ್ಯಗಳಿಗಿಂತ ಮೊದಲನೆಯ ಸ್ಥಾನಕ್ಕೆ ತರಬೇಕೆಂಬ ನಮ್ಮ ಹವಣಿಕೆ ಇದ್ದರೆ, ಅದಕ್ಕೆ ಪೂರಕವಾಗಿ ಅವಶ್ಯಕವಾದಂತಹ ಸಂಪನ್ಮೂಲಗಳನ್ನು ನಾವು ರೂಢಿಸಿಕೊಳ್ಳಬೇಕಾಗುತ್ತದೆ. ಈ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವಂತಹ ಕಾಲದಲ್ಲಿ ಒಂದು ಹೊಸ ಅರ್ಥ ನೀತಿಯ ವ್ಯಾಪ್ತಿಯಲ್ಲಿ ಖಾಸಗಿ ಬಂಡವಾಳ ಈ ದೇಶದಲ್ಲಿ ಯಾವ ಯಾವ ರಂಗಗಳಲ್ಲಿ ತೊಡಗಿಸುವುದಕ್ಕೆ ಸಾಧ್ಯವೆನ್ನುವುದಕ್ಕೆ ನನ್ನ ಒಂದು ನಿರ್ಣಯವಷ್ಟೆ ಅಲ್ಲ. ನಮ್ಮ ಸಚಿವರ ಸಂಪುಟದ ಎಲ್ಲಾ ಸಹದ್ಯೋಗಿಗಳ ಒಟ್ಟು ನಿರ್ಣಯದ ಆಧಾರದ ಮೇಲೆ ನಾವು ಕೆಲವು ರಂಗಗಳಲ್ಲಿ ಖಾಸಗಿ ಬಂಡವಾಳವನ್ನು ಸ್ವಾಗತ ಮಾಡಬೇಕು. ಖಾಸಗಿ ಬಂಡವಾಳವನ್ನು ಹೂಡಲು ಸಾಧ್ಯವಾಗುವುದಿಲ್ಲವೊ ಅಲ್ಲಿ ನಾವು ನಮ್ಮ ಸಂಪನ್ಮೂಲಗಳನ್ನು ಹೆಚ್ಚು ರೂಢಿಸುವ ಮುಖೇನಾ ಆ ಒಂದು ರಂಗಗಳಿಗೆ ಆ ಒಂದು ಕಾರ್ಯಕ್ರಮಗಳಿಗೆ ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚು ತೊಡಗಿಸುವಂಥಾದ್ದು ಇವೆರಡು ನಮ್ಮ ಕಾರ್ಯಕ್ರಮದ ಒಂದು ವೈಶಿಷ್ಟ್ಯ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಎಲ್ಲಿ ಖಾಸಗಿ ಬಂಡವಾಳ ಬರುತ್ತದೆಯೋ, ಯಾವ ರಂಗಗಳಲ್ಲಿ ಖಾಸಗಿ ಬಂಡವಾಳವನ್ನು ಹೂಡುತ್ತಾರೋ, ಅದು ವಿದೇಶ ಬಂಡವಾಳವಾಗಬಹುದು, ಸ್ವದೇಶಿ ಬಂಡವಾಳವಾಗಬಹುದು. ಆ ಬಂಡವಾಳವನ್ನು ನಾವು ಬಳಕೆ ಮಾಡಿಕೊಳ್ಳಬೇಕು. ಅದರ ಉಪಯುಕ್ತತೆಯನ್ನು ರಾಜ್ಯದ ಶ್ರೇಯೋಭಿವೃದ್ಧಿಗೆ ಬಳಸಿಕೊಳ್ಳಬೇಕೆಂಬುದು ಒಂದು ಕಡೆಯಾದರೆ, ಮತ್ತೊಂದು ಕಡೆ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚು ಮಾಡಿ ಯಾವ ಯಾವ ರಂಗಗಳಲ್ಲಿ ನಾವು ಖಾಸಗಿ ಬಂಡವಾಳವನ್ನು ತೊಡಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೊ, ಆ ರಂಗಗಳಲ್ಲಿ ನಾವು ಖಾಸಗಿ ಬಂಡವಾಳವನ್ನು ತೊಡಗಿಸತಕ್ಕಂಥ ಬಾಬುಗಳಿಗೆ ಏನು ನಾವು ಹಿಂದೆ ನಮ್ಮ ಸಂಪನ್ಮೂಲಗಳನ್ನು ಖರ್ಚು ಮಾಡುತ್ತಿದ್ದೆವೋ, ಅದನ್ನು ಉಳಿಕೆ ಮಾಡಿ ಎಲ್ಲಿ ಖಾಸಗಿ ಬಂಡವಾಳ ಬರುವುದಿಲ್ಲವೋ ಆ ರಂಗಗಳಿಗೆ ಹೆಚ್ಚು ಹೊತ್ತು ಕೊಡತಕ್ಕಂಥದ್ದು ಈ ಸರ್ಕಾರದ ಗುರಿ ಎಂದು ನಾನು ಪೂರ್ವಭಾವಿಯಾಗಿ ಈ ಮಾತನ್ನು ಹೇಳಲಿಚ್ಛಿಸುತ್ತೇನೆ. ನಾವು ಪದೇ ಪದೇ ಮಾತನಾಡುತ್ತಿರುತ್ತೇವೆ. ಈ ರಾಷ್ಟ್ರದಲ್ಲಿ ಗ್ರಾಮೀಣ ಪ್ರದೇಶಗಳಿಗೆ ಹೆಚ್ಚು ಹೊತ್ತು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಗ್ರಾಮೀಣ ಪ್ರದೇಶದ ಜನಜೀವನ ಸಾಕಷ್ಟು ಸುಗಮವಾಗಿ ಇವತ್ತು ಅವರು ನೆಮ್ಮದಿಯಿಂದ ಬಾಳತಕ್ಕಂಥ ಅಥವಾ ಕನಿಷ್ಠ ಪ್ರಮಾಣದ ನಾಗರಿಕ ಸೌಲಭ್ಯವನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲವೆಂಬ ಮಾತನ್ನು ಬಹುಶಃ ಸದನದ ಎಲ್ಲಾ ಕಡೆಯ ಸದಸ್ಯರು ಅದನ್ನು ಟೀಕೆ ಮಾಡಬಹುದು ಅಥವಾ ಅವರ ಮಾತು ಸ್ವಲ್ಪ ಅರ್ಥಹಿತವಾಗಿರಬಹುದು. ಅವರ ಅವರ ಭಾವನೆಗಳು ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿ ಅದರಲ್ಲೂ ಹಳ್ಳಿಯ ಜನ ಗ್ರಾಮೀಣ ಜನ,

ಅವರು ವ್ಯವಸಾಯ ರಂಗದಲ್ಲಿರತಕ್ಕಂಥವರು ಇರಬಹುದು. ಅಥವಾ ವ್ಯವಸಾಯ ಕೂಲಿಕಾರರು ಆಗಿರಬಹುದು, ಅಥವಾ ಸಣ್ಣ ಸಣ್ಣ ವೃತ್ತಿಯನ್ನು ಮಾಡಿಕೊಂಡು ಹಳ್ಳಿಯಲ್ಲಿ ವಾಸ ಮಾಡತಕ್ಕಂಥವರು ಇರಬಹುದು. ಅವರ ಜೀವನ ಮಟ್ಟ ಸುಧಾರಣೆಯಾಗಬೇಕೆಂಬ ಮಟ್ಟದಲ್ಲಿ ಬಹುಶಃ ಇವರಲ್ಲಿ ಯಾರದು ಭಿನ್ನಾಭಿಪ್ರಾಯವಿಲ್ಲವೆಂದು ನಾನು ಭಾವಿಸುತ್ತೇನೆ. ಆ ದಿಕ್ಕಿನಲ್ಲಿ ನಾವು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ನಮ್ಮ ಸರ್ಕಾರ ಕಳೆದ ಒಂದು ವರ್ಷದಲ್ಲಿ ಮೊದಲ ಬಾರಿಗೆ ವ್ಯವಸಾಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾವು ತೀರ್ಮಾನ ಮಾಡಿಕೊಂಡಿದ್ದೇವೆ. ಆ ದೃಷ್ಟಿಯಲ್ಲಿ ಮೊದಲನೆ ಬಾರಿಗೆ ಹಿಂದೂಸ್ಥಾನದಲ್ಲಿ ಒಂದು ರಾಜ್ಯಸರ್ಕಾರ ವ್ಯವಸಾಯದ ನೀತಿಯನ್ನು ನಿರೂಪಣೆ ಮಾಡಿದ್ದು ಕರ್ನಾಟಕ ಸರ್ಕಾರವೆಂದು ನಾನು ಭಾವಿಸಿಕೊಳ್ಳುತ್ತೇನೆ. ಇದು ನಾನು ಹೇಳುವಂತಹ ಮಾತಲ್ಲ, ಅನೇಕ ಜನ ತಜ್ಞರು ತಮ್ಮ ಅಭಿಪ್ರಾಯವನ್ನು ಬರೆದಿದ್ದಾರೆ. ರಾಷ್ಟ್ರಮಟ್ಟದಲ್ಲಿರುವಂತಹ ದೊಡ್ಡ ದೊಡ್ಡ ಖ್ಯಾತ ವಿಜ್ಞಾನಿಗಳು ವ್ಯವಸಾಯ ರಂಗದಲ್ಲಿ ಹೆಚ್ಚು ಅನುಭವವುಳ್ಳತಕ್ಕಂಥವರು ಆರ್ಥಿಕ ತಜ್ಞರು ನಮ್ಮ ಕರ್ನಾಟಕದ ಕೃಷಿ ನೀತಿಯ ಬಗ್ಗೆ ತುಂಬಾ ಪ್ರಶಂಸೆ ಮಾಡಿ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ನಾನು ಅವೆಲ್ಲವನ್ನು ಓದುವುದಕ್ಕೆ ಹೋಗುವುದಿಲ್ಲ. ನಾವು ಅವುಗಳನ್ನು ಸಂಗ್ರಹಣೆ ಮಾಡಿದ್ದೇವೆ. ನಮ್ಮ ಕೃಷಿ ನೀತಿ ಹೊರ ಹೊಮ್ಮಿಬಂದ ಮೇಲೆ ಅದರ ಬಗ್ಗೆ ಅನೇಕ ಪತ್ರಿಕೆಗಳು ಅಗ್ರ ಲೇಖನಗಳನ್ನು ಬರೆದಿವೆ. ನಮ್ಮ ಸರ್ಕಾರವು ಅವೆಲ್ಲ ಜವಾಬ್ದಾರಿಯನ್ನು ಹೊತ್ತು ನಮ್ಮ ಪ್ಲಾನಿಂಗ್ ಬೋರ್ಡ್ ಉಪಾಧ್ಯಕ್ಷರು ಏನು ಇದ್ದಾರೆ. ಅವೆಲ್ಲವನ್ನು ಕ್ರೋಢಿಕರಿಸಿ ಒಂದು ಸಣ್ಣ ಕಿರುಹೊತ್ತಿಗೆಯನ್ನು ಮಾಡಿದ್ದಾರೆ. ಅವೆಲ್ಲವನ್ನು ನಾನು ಓದಲಿಕ್ಕೆ ಹೋದರೆ ಸಮಯ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ನಾನು ಒಂದು ಮಾತನ್ನು ಅಷ್ಟೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಈ ಒಂದು ಕೃಷಿ ನೀತಿಯನ್ನು ಕೇಂದ್ರ ಸರ್ಕಾರ ಅಳವಡಿಸಿ ಕೊಳ್ಳತಕ್ಕಂಥದ್ದು ಬಹಳ ಸೂಕ್ತವೆನ್ನುವ ಮಾತನ್ನು ಅವರು ಒಂದು ಕಡೆ ಹೇಳಿದರು. ಕೇಂದ್ರ ಸರ್ಕಾರ ಕರ್ನಾಟಕದ ಕೃಷಿ ನೀತಿಯನ್ನು ಇವತ್ತು ಒಂದು ಮಾದರಿಯಾದ ನೀತಿಯನ್ನಾಗಿ ತೆಗೆದುಕೊಳ್ಳತಕ್ಕಂಥದ್ದು ಅನಿವಾರ್ಯ. ಈಗಲಾದರೂ ಕೇಂದ್ರ ಸರ್ಕಾರ ಈ ಕಡೆ ಗಮನ ಹರಿಸತಕ್ಕಂಥದ್ದು ಸೂಕ್ತವೆನ್ನುವ ಮಾತನ್ನು ಬಲರಾಂ ಜಾಕಡರವರು ಹೇಳಿದ್ದಾರೆ. 'Sri Balram Jakhad Lauds State's new Agricultural policy'. ಎನ್ನುವ ಮಾತನ್ನು ಬಲರಾಂ ಜಾಕಡರವರು ಹೇಳಿರತಕ್ಕಂಥದ್ದು. ಹೀಗೆ ಬೇರೆಯವರ ಹೆಸರನ್ನು ಹೇಳಿದರೆ ನಾನು ಒಂದೊಂದು ಸಾರಿ ಅವರು ಎಕನಾಮಿಕ್ ಎಕ್ಸ್‌ಪರ್ಟ್ ಅಲ್ಲ, ಅಗ್ರಿಕಲ್ಚರ್ ಎಕ್ಸ್‌ಪರ್ಟ್ ಅಲ್ಲವೆಂದು ನಾನೇ ಟೀಕೆ ಮಾಡುತ್ತೇನೆ. Sri Balram Jakhad who was the Agriculture Minister, Government of India, he himself has complimented the Agricultural policy formulated by Karnataka Government. ನಾನು ಏತಕ್ಕೆ ಈ ವಿಷಯವನ್ನು ಪ್ರಥಮದಲ್ಲೇ ಕೈಗೆತ್ತಿಕೊಂಡೆ ಎಂದರೆ, ನಲ್ವತ್ತೇರಡು ವರ್ಷದಲ್ಲಿ ಈ ಸರ್ಕಾರ ಒಂದು ವ್ಯವಸಾಯದ ನೀತಿಯನ್ನು ಈ ರಾಷ್ಟ್ರದಲ್ಲಿ ನಿರೂಪಣೆ ಮಾಡುವುದಕ್ಕೆ ಸಾಧ್ಯವಾಗದೇ ಇದ್ದಂಥ ಕಾಲದಲ್ಲಿ ಪ್ರಥಮ ಬಾರಿಗೆ ಈ ಒಂದು ಡಾಕ್ಯುಮೆಂಟನ್ನು ರೂಪಿಸುವುದಕ್ಕೆ ನಾವು ಪ್ರಯತ್ನ ಮಾಡಿದೆವು. ಸನ್ಮಾನ್ಯ ಅಧ್ಯಕ್ಷರೆ, ಈ ದೃಷ್ಟಿಯಲ್ಲಿ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ,

ಇದಕ್ಕೆ ಪೂರಕವಾದಂತಹ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾದ್ದು ಅನಿವಾರ್ಯವಾಗಿತ್ತು. ಇವತ್ತು ನಾವು ವಿದೇಶದಿಂದ ಬರೀ ಹಣವನ್ನು ಅಥವಾ ಬಂಡವಾಳವನ್ನು ಶೇಖರಣೆ ಮಾಡುವುದಷ್ಟೆ ಅಲ್ಲ, ಇವತ್ತು ವಿದೇಶಿ ತಂತ್ರಜ್ಞಾನವನ್ನು ನಮ್ಮ ವ್ಯವಸಾಯ ರಂಗದಲ್ಲಿ ಅಳವಡಿಸಿಕೊಳ್ಳತಕ್ಕಂಥದ್ದು. ಅದರ ಮುಖೇನ ಸಾಮಾನ್ಯ ಕುಟುಂಬದ ಬಡ್ಡ ಸಣ್ಣ ಸಣ್ಣ ರೈತರುಗಳ ಆರ್ಥಿಕ ಶಕ್ತಿಯನ್ನು ಹೆಚ್ಚು ಮಾಡುವುದಕ್ಕೆ, ನಾವು ಅದರ ಮುಖೇನ ಹೊಸ ತಂತ್ರಜ್ಞಾನದ ಬಳಕೆಯಿಂದ ಮತ್ತು ಅವರು ಬೆಳೆದಂತ ಪದಾರ್ಥಗಳನ್ನು ಇವತ್ತು ಅವರಿಗೆ ಎಲ್ಲಿ ಮಾರುಕಟ್ಟೆ ಹೆಚ್ಚು ಲಾಭದಾಯಕವಾಗುತ್ತಿಲ್ಲ, ಅಂತಹ ಮಾರುಕಟ್ಟೆಗಳಿಗೆ ಆ ಒಂದು ಬೆಳೆದಂಥ ಪದಾರ್ಥಗಳನ್ನು ರಫ್ತು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆನ್ನುವ ಹಿನ್ನೆಲೆಯಲ್ಲಿ ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಈ ಸರ್ಕಾರ ಕೆಲವು ಈ ರೀತಿಯಾದ ಕ್ರಮಗಳನ್ನು ತೆಗೆದುಕೊಂಡಿದೆ. ಇವತ್ತು ಅನೇಕ ಬೇರೆ ಬೇರೆ ಆರ್ಟಿಕಲ್‌ಗಳನ್ನೆಲ್ಲಾ ಓದುವುದಕ್ಕೆ ಈ ಸಂದರ್ಭದಲ್ಲಿ ಹೋಗುವುದಿಲ್ಲವೆಂದು ನಾನು ಮೊದಲೇ ಹೇಳಿದ್ದೇನೆ. ಕಾರಣವಿಷ್ಟೆ, ನಾನು ಈ ಸದನದ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲವೆಂದು ತಿಳಿಸಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಈಗ ಈ ಹಿನ್ನೆಲೆಯಲ್ಲಿ ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ನಿರ್ಣಯಗಳನ್ನು ಮಾಡಿದ್ದೇವೆ. ನಮ್ಮ ಈ ಸರ್ಕಾರ ಕಳೆದ ಒಂದು ವರ್ಷದಲ್ಲಿ ಕೃಷಿ ಇಲಾಖೆಯನ್ನು ರೀಆರ್ಗನೈಸ್ ಮಾಡತಕ್ಕಂಥ ಮೊದಲನೆ ಒಂದು ನಿರ್ಣಯಕ್ಕೆ ನಾವು ಬಂದೆವು. ಆ ಪ್ರಸ್ತಾವನೆಯನ್ನು ನನ್ನ ಸಹೋದ್ಯೋಗಿಗಳಾದ ಶ್ರೀಮಾನ್ ಬೈರೇಗೌಡರು ತಂದಂತ ಕಾಲದಲ್ಲಿ ನಾವು ಈ ಇಲಾಖೆಯನ್ನು ರೀ ಆರ್ಗನೈಸ್ ಮಾಡುವ ನಿರ್ಣಯಕ್ಕೆ ಬದ್ಧರಾಗಿ, ಈ ಒಂದು ತೀರ್ಮಾನವನ್ನು ತೆಗೆದುಕೊಂಡೆವು. ಹಾಗೆ ಹಲವಾರು ಕೆಲವು ಸವಲತ್ತುಗಳನನು ಕೊಟ್ಟಿದ್ದೇವೆ. ಸುಮ್ಮನೆ ಒಂದೊಂದಾಗಿ ಸೂಕ್ಷ್ಮವಾಗಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಮಗೇನು ವಿದ್ಯುಚ್ಛಕ್ತಿಯ ಕೊರತೆ ಬಂದಿದೆಯೋ, ಇವತ್ತು ರೈತರು ವಿದ್ಯುತಚ್ಛಕ್ತಿಯ ಕೊರತೆಯಿಂದ ಸಂಕಟಕ್ಕೆ ಸಿಕ್ಕಿದ್ದಾರೋ ಆ ಹಿನ್ನಲೆಯಲ್ಲಿ ಅವರು ಡಿಸೇಲ್ ಜನರೇಟರ್ಸ್ ಅನ್ನು ಕೊಂಡುಕೊಳ್ಳುವುದಕ್ಕೆ ಶೇಕಡ ಹತ್ತರಷ್ಟು ಸಬ್ಸಿಡಿ ಕೊಡಬೇಕೆನ್ನುವ ಒಂದು ನಿರ್ಣಯವನ್ನು ತೆಗೆದುಕೊಂಡೆವು. ಈಗಾಗಲೇ ಸುಮಾರು ಮೂರು ಸಾವಿರ ರೈತ ಸಮುದಾಯ ಈ ಡಿಸೇಲ್ ಪಂಪುಸೇಟಗಳನ್ನು ಕೊಂಡುಕೊಳ್ಳುವುದಕ್ಕೆ, ನಾವು ಕೊಟ್ಟಿರುವ ರಿಯಾಯಿತಿ ಏನಿದೆಯೋ ಅದರ ಲಾಭವನ್ನು ಪಡೆದುಕೊಳ್ಳುವುದಕ್ಕೆ ಮುಂದೆ ಬಂದಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಅಷ್ಟೆ ಅಲ್ಲ, ಇವತ್ತು ಏನು ಪವರ್ ಟಿಲ್ಲರ್ಸ್ ಮೇಲೆ ಹನ್ನೆರಡು ಸಾವಿರ ರೂಪಾಯಿಗಳ ಸಬ್ಸಿಡಿ ಕೊಡುತ್ತಿದ್ದೇವೆ, ಅದನ್ನು ಸಾವಿರ ಒಂಬೈನೂರು ತೊಂಬತ್ತಾಲ್ಕರಲ್ಲಿ ಕೇಂದ್ರ ಸರ್ಕಾರ ತೆಗೆದುಹಾಕಿ ಬಿಟ್ಟಿತು. ಅದನು ತೆಗೆದು ಹಾಕಿದ ಮೇಲೆ ರಾಜ್ಯ ಸರ್ಕಾರ, ನಾವು ಆ ಸಬ್ಸಿಡಿಯನ್ನು ಕೊಡುವುದನ್ನು ಮುಂದುವರೆಸಬೇಕೆಂದು ತೀರ್ಮಾನ ಮಾಡಿ, ಇವತ್ತು ಹದಿನೈದು ಸಹಸ್ರ ರೂಪಾಯಿಗಳವರೆಗೆ ರಾಜ್ಯ ಸರ್ಕಾರ ಇವತ್ತು ಪವರ್ ಟಿಲ್ಲರ್ಸ್ ಮೇಲಿನ ಸಬ್ಸಿಡಿ ದುಡ್ಡನ್ನು ನಮ್ಮ ಸರ್ಕಾರದ ಒಂದು ವೆಚ್ಚದಲ್ಲಿ ಭರ್ತಿ ಮಾಡಿಕೊಡುತ್ತಿದ್ದೇವೆ. ಅದೇ ರೀತಿ ಇವತ್ತು ನಮ್ಮ ಬಯಲು ಸೀಮೆ ಅಭಿವೃದ್ಧಿಯ ಒಂದು ನಿಗಮದ ಬಗ್ಗೆ ನನ್ನ ಸಹೋದ್ಯೋಗಿಗಳು ನಿನ್ನೆ ನನ್ನ ಮುಂದೆ ಅದಕ್ಕೆ ಸ್ವಲ್ಪ ಹಣ ಹೆಚ್ಚು ಮಾಡಬೇಕೆಂದು ಹೇಳುತ್ತಿದ್ದರು. ಅದರಲ್ಲಿ ಯಾವುದೇ ಸಂಶಯಬೇಕಾಗಿಲ್ಲ ಹಣವನ್ನು

ಹೆಚ್ಚು ಮಾಡುತ್ತೇವೆ, ನಾನು ಈ ಸದನದಲ್ಲೇ ವಾಗ್ದಾನ ಕೊಡುತ್ತೇನೆ. ಬಹುಶಃ ನಾವು ಆಯವ್ಯಯದಲ್ಲಿ ಐದು ಕೋಟಿ ರೂಪಾಯಿಗಳನ್ನು ಇಟ್ಟಿರಬಹುದು, ಅದು ಸಮಸ್ಯೆಯಲ್ಲ. ನಾನು ಈ ಮಾತನ್ನು ಬಹಳ ಖಂಡತುಂಡವಾಗಿ ಹೇಳುತ್ತೇನೆ, ಮುಂಬರುವ ದಿನಗಳಲ್ಲಿ ಅದಕ್ಕೆ ಬೇಕಾಗಿರುವ ಹಣವನ್ನು ರೂಢಿಸುವುದರಲ್ಲಿ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ, ಅದರಲ್ಲಿ ಯಾವುದೇ ಸಂಶಯಬೇಕಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೊದಲು ಬಯಲು ಸೀಮೆ ಅಭಿವೃದ್ಧಿಯ ಒಂದು ನಿಗಮವನ್ನು ತರುವುದರ ಬಗ್ಗೆ ಕೃಷಿ ಸಚಿವರು ಬಹಳ ತೀವ್ರವಾದ ಕಾಳಜಿಯನ್ನು ವ್ಯಕ್ತಪಡಿಸಿ, ನಾವು ಈ ವ್ಯವಸಾಯದ ನೀತಿಯನ್ನು ರೂಪಿಸಿದ ಮೇಲೆ, ಏನು ಈ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೋ ಅದಕ್ಕೆ ಸಂಪೂರ್ಣವಾಗಿ ಬೆಂಬಲ ಕೊಡುವುದಕ್ಕೆ ಈ ಸರ್ಕಾರ ಸಿದ್ಧವಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರ ಹೀಗೆ ಒಂದೊಂದು ಇಲಾಖೆಯಲ್ಲಿ ಕಳೆದ ಒಂದು ವರ್ಷದಲ್ಲಿ ಏನೇನು. The performance of this Government is very poor in the last one year. This is one of the criticism held by some friends. I have no regrets. ನಾವು ಕೆಲವು ಸಾಧನೆಗಳನ್ನು ಮಾಡಿದ್ದೇವೆಂದು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾವು ಏನು ಮಾಡಿದ್ದೇವೆ ಎನ್ನುವುದನ್ನು ಇವತ್ತು ಸದನದ ಮುಂದೆ ಇಡಬೇಕಾಗುತ್ತದೆ, ನಾವು ಜನರಿಗೆ ಸದನದ ಮುಖೇನ ತಿಳಿಸಬೇಕಾಗುತ್ತದೆ. ಅದರಿಂದ ಈ ಕೆಲವು ವಿಷಯಗಳನ್ನು ಅನಿವಾರ್ಯವಾಗಿ ತಮ್ಮ ಅನುಮತಿಯಿಂದ ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಅದೊಂದು ಮುಳುಗಿ ಹೋಗಿದ್ದಂಥ ಸಂಸ್ಥೆ. ಮುಳುಗಿಹೋಗಿದ್ದು ಅಷ್ಟೆ ಅಲ್ಲ ಸಂಪೂರ್ಣವಾಗಿ ಅದಕ್ಕೆ ತೊಡಗಿಸಿದಂಥ ಬಂಡವಾಳವೆಲ್ಲಾ ಸೇರಿದಂತೆ ಅದು ನಷ್ಟ ಅನುಭವಿಸಿತ್ತು. ಅದಕ್ಕೆ ಕಾರಣ ಬೇರೆಯವರೆಂದು ದೂರತಕ್ಕಂಥ ಅವಶ್ಯಕತೆ ಇಲ್ಲ. ನಾವು ಸರ್ಕಾರದವರು ಮತ್ತೆ ಅದಕ್ಕೆ ಬಂಡವಾಳವನ್ನು ತೊಡಗಿಸಿ, ಈ ವರ್ಷ ಯಾವ ಒಂದು ಸಂಸ್ಥೆ ಅತ್ಯಂತ ನಷ್ಟದಲ್ಲಿ ಕೆಲಸ ಮಾಡುತ್ತಿತ್ತು ಆ ಸಂಸ್ಥೆ ಈ ವರ್ಷ ದೊಡ್ಡ ಲಾಭವನ್ನು ಮಾಡಿದೆ ಎಂದು ಹೇಳುವುದಕ್ಕೆ ಬದಲಾಗಿ, ಮೊದಲನೆಯ ಕ್ವಾರ್ಟರ್‌ನಲ್ಲಿ ಹತ್ತೊಂಭತ್ತು ಲಕ್ಷ ರೂಪಾಯಿಗಳನ್ನು ಆ ಸಂಸ್ಥೆ ಈ ಸಾರಿ ಆದಾಯ ಮಾಡಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಅದೇ ಹಿಂದಿನ ವರ್ಷ ಒಂದು ವರ್ಷದಲ್ಲಿ ನೂರಅರವತ್ತೊಂದು ಲಕ್ಷ ರೂಪಾಯಿಗಳ ನಷ್ಟವಾಗಿತ್ತು. ಕ್ಯುಮಿಲೇಟಿವ್ ಲಾಸ್ ಅದರ ಅದು ಹತ್ತಾರು ಕೋಟಿ ರೂಪಾಯಿಗಳ ನಷ್ಟವಾಗುತ್ತದೆ, ನಾನು ಒಂದು ವರ್ಷದ ಹೋಲಿಕೆಯನ್ನು ಮಾತ್ರ ಈ ಸಭೆಯಲ್ಲಿ ಇಡುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಇವತ್ತ ನಮ್ಮಿಂದ ಜೋಳ, ಅಕ್ಕಿ ಮೊಲಾಸಿಸ್, ಜಾಗರಿ ಇವೆಲ್ಲವನ್ನೂ ನಾವು ರಫ್ತು ಮಾಡುವುದರ ಬಗ್ಗೆ ನಮಗೆ ಅಧಿಕಾರವಿಲ್ಲದೆ ಇರುವುದರಿಂದ, ಕೇಂದ್ರ ಸರ್ಕಾರದ ಅನುಮತಿಯನ್ನು ಕೇಳಿದ್ದೇವೆ. ಸುಮಾರು ಇಪ್ಪತ್ತು ಕೋಟಿ ರೂಪಾಯಿಯಷ್ಟು ವ್ಯವಸಾಯದ ದಾಸ್ತಾನನ್ನು ನಾವು ರಫ್ತು ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನಾನು ಸೂಕ್ಷ್ಮವಾಗಿ ತಿಳಿಸಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಈ ದಿನ ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಹೆಚ್ಚು ಪ್ರಸ್ತಾಪ ಮಾಡದೆ, ಬೇರೆ ವಿಷಯಗಳ ಕಡೆಗೆ ಹೋಗುತ್ತೇನೆ. ಸನ್ಮಾನ್ಯ ಅಧ್ಯಕ್ಷರು, ನಮ್ಮ ತೋಟಗಾರಿಕೆ ಇಲಾಖೆ, ಇವತ್ತು ಈ ರಾಜ್ಯದಲ್ಲೇ, ಬಹುಶಃ ಹಿಂದೂಸ್ಥಾನದಲ್ಲೇ

ಮಹಾರಾಷ್ಟ್ರ ಮತ್ತು ಪಂಜಾಬ್, ಹರಿಯಾಣ, ಪಶ್ಚಿಮ ಉತ್ತರ ಪ್ರದೇಶ ಇವುಗಳನ್ನು ಬಿಟ್ಟರೆ, ಇವತ್ತು ನಮ್ಮದು ಅತ್ಯಂತ ಗಣನೀಯ ಪ್ರಗತಿಯನ್ನು ಸಾಧಿಸಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇದು ನಮ್ಮ ರಾಷ್ಟ್ರದಲ್ಲೇ ಮೊದಲ ಸ್ಥಾನಕ್ಕೆ ಬರಬೇಕೆನ್ನುವ ಒಂದು ಸನ್ನಿವೇಶ ನಮ್ಮಲ್ಲಿದೆ, ಆ ದಿಕ್ಕಿನಲ್ಲೇ ನಾವು ಕೆಲಸ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವರ್ಷದಲ್ಲಿ ಒಂದು ಲಕ್ಷ ಎಕರೆ ಹೆಚ್ಚುವರಿ ಭೂಮಿಯನ್ನು ಫ್ರೂಟ್ ಕಲ್ಚರ್‌ನಲ್ಲಿ ಫ್ರೂಟ್ಸ್, ಫ್ಲವರ್ಸ್ ಇವನ್ನು ಬೆಳೆಯುತಕ್ಕಂಥ ಪ್ರದೇಶದ ವಿಸ್ತೀರ್ಣ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದರ ಜೊತೆಗೆ ಇವತ್ತು ನಮ್ಮ floriculture and sericulture has registered an increased growth of 22% in the year 1995-96. The Horitculture and Floriculture up by 25% upto January 96. ಇನ್ನು ನಾನು ಈ ಫೆಬ್ರವರಿ ಹಾಗೂ ಮಾರ್ಚ್ ಈ ಎರಡು ತಿಂಗಳುಗಳನ್ನು ನಾನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಅದರ ಜೊತೆಗೆ ಇವತ್ತು ಹಾಪಕಾಮ್ಸ್‌ನಿಂದ ಕಳೆದ ಸಾರಿ ಇಪ್ಪತ್ತೈದು ಪರ್ಸೆಂಟ್ ಟರ್ನ್‌ಓವರ್ ಕೂಡ ಹೆಚ್ಚಾಗಿದೆ. ಹೋದ ಸಾರಿ ಸಾವಿರದ ಒಂಭೈನೂರತ್ತೊಂಭತ್ತು ನಾಲ್ಕು ತೊಂಭತ್ತೈದಕ್ಕಿಂತ ಶೇಕಡ ಇಪ್ಪತ್ತೈದರಷ್ಟು ಟರ್ನ್‌ಓವರ್ ಕೂಡ ಹೆಚ್ಚಾಗಿದೆ. ಅಷ್ಟೆ ಅಲ್ಲ, ಕರ್ನಾಟಕ ಅಗ್ರಿಕಲ್ಚರ್ ಫೆಡರೇಷನ್ ನಿಂದ ಸುಮಾರು ಅರವತ್ತಾರು ಕೋಟಿ ರೂಪಾಯಿಗಳ ಒಂದು ಆರ್ಥಿಕ ನೆರವನ್ನು ನಾವು ಎನ್‌ಸಿಡಿಸಿಯಿಂದ ಪಡೆದುಕೊಂಡು ಅಗ್ರಿಕಲ್ಚರ್ ಫಾರ್ಮರ್ಸ್ ಪ್ರೊಡಕ್ಷನ್‌ಗೆ ಮಾರ್ಕೆಟಿಂಗ್‌ಗೆ, ಪ್ರೊಸೆಸಿಂಗ್‌ಗೆ ಮತ್ತೆ ರಫ್ತು ಮಾಡುವುದು ಸೇರಿದಂತೆ, ಇವುಗಳನ್ನು ಮಾಡುವುದಕ್ಕೆ ನಾವು ಈಗಾಗಲೇ ಎನ್‌ಸಿಡಿಸಿಯಿಂದ ಒಂದು ಪ್ರಾಜೆಕ್ಟನ್ನು ಕ್ಲಿಯರ್ ಮಾಡಿಕೊಂಡಿದ್ದೇವೆ. ಆ ಕೆಲಸ ತ್ವರಿತವಾಗಿ ಪ್ರಾರಂಭವಾಗುತ್ತದೆ. ನಮ್ಮಲ್ಲಿ ಫ್ಲವರ್ ಆಕ್ಷನ್ ಯಾರ್ಡ್ ಅನ್ನು ಈ ಸಾರಿ ಮಾಡಿದ್ದೇವೆ.

ಇದು ನಾನು ಸಾಧನೆ ಎಂದು ಕರೆಯಬಹುದು, ಸಾಧನೆ ಅಲ್ಲ ಎಂದು ಕೆಲವರು ಹೇಳಬಹುದು. ನಾನು ಅದರ ಬಗ್ಗೆ ಚರ್ಚೆಗೆ ಹೋಗುವುದಿಲ್ಲ. ನಾನು ವ್ಯಾಖ್ಯಾನ ಮಾಡಲಿಕ್ಕೆ ಸಿದ್ಧವಿಲ್ಲ. ಆದರೆ ಏನು ಮಾಡಿದ್ದೇನೆ ಎನ್ನುವುದನ್ನು ಈ ರಾಜ್ಯದ ಮಹಾಜನತೆಗೆ ಈ ವೇದಿಕೆ ಮುಖೇನ ತಿಳಿಸಬೇಕಾಗುತ್ತದೆ. ಪ್ರಥಮ ಬಾರಿಗೆ ಹಿಂದೂಸ್ಥಾನದಲ್ಲಿ ಫ್ಲವರ್ ಆಕ್ಷನ್ ಯಾರ್ಡನ್ನು ನಾವು ರಾಜ್ಯದಲ್ಲಿ ಮಾಡಿದ್ದೇವೆ. ಇವತ್ತು ಪ್ರಪಂಚದ ಯಾವುದೇ ಭಾಗದಿಂದ ಬಂದು ಈ ಆಕ್ಷನ್ ಯಾರ್ಡಿನಲ್ಲಿ ಪಾರ್ಟಿಸಿಪೇಟ್ ಮಾಡುತ್ತಾರೆ. 10 ಗುಂಟೆ, 5 ಗುಂಟೆ ಇಟ್ಟುಕೊಂಡು ಇವತ್ತು ಸಣ್ಣ ಸಣ್ಣ ರೈತರು ಯಾರಿದ್ದಾರೆ, ಅಂಥವರು ತಮ್ಮ ಆದಾಯ ಮೂಲವನ್ನು ನಾಲ್ಕು ಪಟ್ಟು, ಐದು ಪಟ್ಟು, ಹತ್ತು ಪಟ್ಟು ಹೆಚ್ಚು ಮಾಡಿಕೊಳ್ಳುವಂಥಾದ್ದಕ್ಕೆ ಸಾಧ್ಯತೆ ಆ ದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳನ್ನು ನಾವು ಏನು ರೂಪಿಸಿದ್ದೇವೆಂದು ನಾನು ಈ ಸಂದರ್ಭದಲ್ಲಿ ತಿಳಿಸಿಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇದರ ಜೊತೆಗೆ ಕರ್ನಾಟಕ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಪ್ರೊಸೆಸಿಂಗ್ ಅಂಡ್ ಎಕ್ಸ್‌ಪೋರ್ಟ್ ಕಾರ್ಪೋರೇಷನ್ ಕೂಡ ಮಾಡಿದ್ದೇವೆ. ಇದರ ಕಾರಣ ಇಷ್ಟೇ. ನನ್ನ ಆಸೆ ಇದೆ. ಏಕೆಂದರೆ ನಾನು ವ್ಯವಸಾಯಗಾರನ ಮಗನಾಗಿ ಈ ಸ್ಥಾನಕ್ಕೆ ಬಂದಂಥ ಸಂದರ್ಭದಲ್ಲಿ ಇದಕ್ಕೆ ಹೆಚ್ಚು ಆದ್ಯತೆ ಕೊಡಬೇಕು ಎನ್ನತಕ್ಕಂಥಾದ್ದು ನಿರ್ವಿವಾ. ಇದರ ಬಗ್ಗೆ ಯಾರು ಏನೇ ಹೇಳಿಕೊಳ್ಳಲಿ. ನಾನು ಟೀಕೆಯನ್ನು ಸ್ವಾಗತ ಮಾಡಬೇಕಾಗುತ್ತದೆ.

ಇದರ ಬಗ್ಗೆ ನನಗೇನೂ ಬೇಸರವಿಲ್ಲ. ನನ್ನ ಕರ್ತವ್ಯ ಇದೆ. ಈ ರಾಜ್ಯದ ರೈತ ಇಂದಲ್ಲ ನಾಳೆ ಅವನು ನಾಲ್ಕು ಕಾಸನ್ನು ಮಾಡಿ ಕೊಳ್ಳತಕ್ಕಂಥ ಶಕ್ತಿ ಬಂದಾಗ ಮಾತ್ರ ನನ್ನ ಮನಸ್ಸಿಗೆ ಸಮಾಧಾನವೇ ಪರಂತು ಬಾಕಿ ಏನು ಮಾಡಿದರೂ ಅದು ನನಗೆ ಹೆಚ್ಚು ಸಮಾಧಾನವಿಲ್ಲ ಎನ್ನುವ ಹಿನ್ನೆಲೆಯಲ್ಲಿ ಇವತ್ತು ಪ್ರಥಮವಾಗಿ ಕರ್ನಾಟಕದಲ್ಲಿ ಅಗ್ರಿಕಲ್ಚರಲ್ ಪ್ರಾಡ್ಯೂಸ್ ಪ್ರೋಸೆಸ್ ಅಂಡ್ ಎಕ್ಸಪೋರ್ಟ್ ಕಾರ್ಪೋರೇಷನ್ ಮಾಡಿದ್ದೇವೆ. ಇದರಿಂದ ನಮ್ಮ ರಾಜ್ಯದಲ್ಲಿ ಬೆಳೆದಂಥ ಬರೀ ಹೂವು, ಹಣ್ಣು ಅಷ್ಟೇ ಅಲ್ಲ, ಬೇರೆ ಬೇರೆ ಎಲ್ಲಾ ಪದಾರ್ಥಗಳನ್ನು ನಮ್ಮ ರಾಜ್ಯದಲ್ಲಿ ನಾವು ಏನು ಬೆಳೆಯುತ್ತೇವೆ, ಅದನ್ನು ರಫ್ತು ಮಾಡತಕ್ಕಂಥಾದ್ದಕ್ಕೆ, ವಿದೇಶೀ ಮಾರುಕಟ್ಟೆಗೆ ನಾವೇ ಅದರ ಜವಾಬ್ದಾರಿಯನ್ನು ತೆಗೆದುಕೊಂಡು ಕೆಲಸ ಮಾಡಬೇಕು ಎನ್ನುವುದಕ್ಕೋಸ್ಕರವಾಗಿ ಈ ಒಂದು ನಿಗಮ ಸ್ಥಾಪನೆ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಹೀಗೆ ನನ್ನ ಮನಸ್ಸಿನಲ್ಲಿರತಕ್ಕಂಥಾದ್ದು, ಇಲ್ಲೇ ಬೆಂಗಳೂರಿನ ಏರಪೋರ್ಟ್ ಪಕ್ಕದಲ್ಲೇ ಈಗಾಗಲೇ ಒಂದು ಸ್ಥಳವನ್ನು ನಿಗದಿ ಮಾಡಿದ್ದೆವು. ಮೊನ್ನೆ ಅದನ್ನು ಬದಲಾವಣೆ ಮಾಡಿ ದೇವನಹಳ್ಳಿಯಲ್ಲಿರತಕ್ಕಂಥ ಇಂಟರನ್ಯಾಷನಲ್ ಏರಪೋರ್ಟ್ ಏನಿದೆ, ಅದರ ಪಕ್ಕದಲ್ಲಿ ನಾವು ಸುಮಾರು 100 ಎಕರೆ ಭೂಮಿಯನ್ನು ವಶಪಡಿಸಿಕೊಂಡು ಅಲ್ಲಿ ಸರ್ಕಾರದ ಸ್ವಾಮ್ಯದಿಂದ ಈ ಒಂದು ಸಂಸ್ಥೆಯ ಆಶ್ರಯದಲ್ಲಿ ಅಲ್ಲಿ ಕೋಲ್ಡ್ ಸ್ಟೋರೇಜ್ ಇರಬಹುದು, ಗ್ರೇಡಿಂಗ್, ಪ್ಯಾಕಿಂಗ್, ರೈತ ಏನೆಲ್ಲಾ ತರುತ್ತಾನೆ, ಆ ಪದಾರ್ಥಗಳನ್ನು ನಾವು ಸ್ವತಃ ಆ ಸಂಸ್ಥೆಯ ಮುಖೇನ ಇವತ್ತು ಹೊರ ದೇಶಗಳಿಗೆ ಕಳುಹಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಎನ್ನುವಂಥ ದೃಷ್ಟಿಯಿಂದಲೇ, ಇಂಟರನ್ಯಾಷನಲ್ ಏರಪೋರ್ಟ್ ಏನು ಈಗ ಬರತಕ್ಕಾಂಥಾದ್ದಿದೆ ಅಲ್ಲಿ ಮಾಡಬೇಕೆಂದು ಈಗಾಗಲೇ ನಿರ್ಣಯ ಮಾಡಿದ್ದೇವೆ. ಇಲ್ಲಿಂದ ಅಲ್ಲಿಗೆ ಹೋಗಲಿಕ್ಕೆ ಸ್ವಲ್ಪ ದೂರ ಆಗಬಹುದು, ಎಂದು ಹೇಳಿ ಇಲ್ಲಿ ಗೊತ್ತು ಮಾಡಿದಂಥ ಜಾಗವನ್ನು ಬದಲಾವಣೆ ಮಾಡತಕ್ಕಂಥ ನಿರ್ಣಯವನ್ನು ಕೂಡ ಮಾಡಿ ಅದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ರಾಜ್ಯದಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟಂತೆ 3-4 ಐಟಂಗಳು ಇವೆ, ಅದನ್ನು ಹೇಳಿ ನಾನು ಬೇರೆ ವಿಷಯಕ್ಕೆ ಹೋಗುತ್ತೇನೆ. ವ್ಯವಸಾಯದ ಜೊತೆಗೆ ಪಶುಸಂಗೋಪನೆ ಬಹಳ ಮುಖ್ಯವಾದುದು. ಇವತ್ತು ಪಶುಸಂಗೋಪನೆ, ಹಾಲು ಉತ್ಪಾದನೆ, ಇವೆಲ್ಲವೂ ಈ ದೇಶದ 100ಕ್ಕ 70 ಜನ ಏನು ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ಗ್ರಾಮೀಣ ಪ್ರದೇಶದ ಜನ, ಅನ್-ಆರ್ಗನೈಸ್ಡ್ ಸೆಕ್ಟಾರ್ ಎಂದು ನಾವು ಹೇಳುತ್ತೇವೆ. ಅವರದು ಒಂದು ಸಂಘಟನೆ ಇಲ್ಲ. ಅವರಿಗೆ ಶಕ್ತಿ ಇಲ್ಲ. ಅವರಿಗೆ ಯಾವಾಗಲಾದರೂ ಒಂದು ಸಾರಿ ಸಿಟ್ಟು ಬಂದಾಗ ಅವರ ಮನಸ್ಸಿನ ಆಕ್ರೋಷವನ್ನು ತೋಡಿಕೊಳ್ಳಬಹುದೇ ಹೊರತು ಸಂಘಟನೆಯಿಂದ ತಮ್ಮ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿದು ಕೊಳ್ಳತಕ್ಕಂಥ ಒಂದು ಶಕ್ತಿ ಇನ್ನೂ ಅವರ ಪಾಲಿಗೆ ಬಂದಿಲ್ಲ ಎನ್ನತಕ್ಕಂಥಾದ್ದರ ಅರಿವು ನನಗೆ ಇದೆ. ಆದ್ದರಿಂದಲೇ ಈ ವರ್ಗದ ಜನತೆಗೆ ಶಕ್ತಿಯನ್ನು ತುಂಬಬೇಕು ಎನ್ನುವ ಒಂದು ಕಾರಣದಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಇವತ್ತ 310 ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನು, ಅದು ಜಿಲ್ಲಾ ಪಂಚಾಯಿತಿಯಲ್ಲಿ ಕೆಲವರು ಮಾಡಿದ್ದರು, ಅದಕ್ಕೆ ಸರ್ಕಾರದ ಮಂಜೂರಾತಿ ಇಲ್ಲ, ಅದಕ್ಕೆ ಯಾವುದೇ ಮಾನ್ಯತ ಇಲ್ಲ, ಡಾಕ್ಟರುಗಳಿಲ್ಲ. ಹೀಗ ಅನೇಕ ದುರ್ವ್ಯವಸ್ಥೆಯಿಂದ ಇದ್ದಂಥ ಒಂದು

ಪರಿಸ್ಥಿತಿಯಲ್ಲಿ 310 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಸಕ್ರಮಗೊಳಿಸತಕ್ಕಂಥಾದ್ದು ಒಂದು. ಅದಕ್ಕೆ 250 ಲಕ್ಷ ರೂಪಾಯಿ ಈ ವರ್ಷ, ಅಂದರೆ ಹೋದ ಸಾಲಿನಲ್ಲಿ, 1995-96ನೇ ಸಾಲಿನಲ್ಲಿ ಸರ್ಕಾರ ಆ ಭಾರ ಹೊತ್ತುಕೊಳ್ಳಬೇಕಾಗಿ ಬಂತು. ಅದನ್ನು ಹೊತ್ತುಕೊಂಡಿದ್ದೇವೆ, ಸಕ್ರಮಗೊಳಿಸಿದ್ದೇವೆ. ಅದರ ಜೊತೆಗೆ 130 ಶುದ್ಧ ಹೋಲಸ್ಟೇಜ್, ಫ್ರೀಜಿಯನ್ ಹಾಗೂ ಜರ್ಸಿ ಹೋರಿಗಳನ್ನು ಆಸ್ಟ್ರೇಲಿಯಾದಿಂದ 1 ಕೋಟಿ ರೂಪಾಯಿ ವೆಚ್ಚದಲ್ಲಿ ಅದನ್ನು ತರಿಸಿಕೊಂಡಿದ್ದೇವೆ, ತಳಿಗಳನ್ನು ಇಂಪ್ರೂವ್ ಮಾಡತಕ್ಕಂಥಾದ್ದಕ್ಕೆ . ಹಾಗೂ 2,390 ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಜಾನುವಾರುಗಳನ್ನು ನೀಡಲಾಗಿದೆ. ಅದಕ್ಕೆ 2 ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡಿದ್ದೇವೆ. 1,387 ಗಿರಿಜನ ಫಲಾನುಭವಿಗಳಿಗೆ ಸುಮಾರು 1 ಕೋಟಿ ಎಂದು ಹೇಳಬಹುದು, ಸುಮಾರು 94 ಲಕ್ಷ 50 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಗಿರಿಜನರ ಉಪಯೋಗಕ್ಕಾಗಿ ಹಣವನ್ನು ಒದಗಿಸಿದ್ದೇವೆ. ಇಲಾಖೆಯಲ್ಲಿ ಖಾಲಿ ಹುದ್ದೆಗಳನ್ನು ತುಂಬುವ ಕೆಲಸದ ಬಗ್ಗೆ ಈಗಾಗಲೇ ಸರ್ಕಾರ ನಿರ್ಣಯ ಮಾಡಿದೆ. 238 ಪಶು ವೈದ್ಯ ಅಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸತಕ್ಕಂಥಾದ್ದು, 937 'ಡಿ' ದರ್ಜೆಯ ನೌಕರರ ಖಾಲಿ ಹುದ್ದೆಗಳ್ನು ತುಂಬತಕ್ಕಂಥಾದ್ದು, 1,200 ಪಶು ವೈದ್ಯಕೀಯ ಸಹಾಯಕರ ಹುದ್ದೆಗಳನ್ನು ತುಂಬಲು ಅಭ್ಯರ್ಥಿಗಳ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಾನು ಒಂದು ಮಾತನ್ನು ಹಿಂದಿನ ಸಭೆಯಲ್ಲಿ 50 ಸಾವಿರ ಹುದ್ದೆಗಳನ್ನು ನಾವು ಮಾರ್ಚ 31 ರೊಳಗ ಭರ್ತಿ ಮಾಡಲಿಕ್ಕೆ ಎಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಇದೇ ಸದನದಲ್ಲಿ ಹೇಳಿದ್ದೆ. ಅದಕ್ಕೆ ಪೂರಕವಾಗಿ ಇವತ್ತು, ಪಶುಸಂಗೋಪನಾ ಇಲಾಖೆ ಇರಬಹುದು, ವ್ಯವಸಾಯ ಇಲಾಖೆ ಇರಬಹುದು, ಪೋಲೀಸ್ ಇಲಾಖೆ ಇರಬಹುದು, ವಿದ್ಯಾ ಇಲಾಖೆ ಇರಬಹುದು. ಇದಕ್ಕೆ ಸಂಬಂಧಪಟ್ಟಂತೆ ನಾವು ಈ 50 ಸಾವಿರ ಹುದ್ದೆಗಳನ್ನು ತುಂಬತಕ್ಕಂಥ ನಿರ್ಣಯದಲ್ಲಿ ಈ ಕೆಲವು ಹುದ್ದೆಗಳನ್ನೂ ಕೂಡ ಪಶುಸಂಗೋಪನಾ ಇಲಾಖೆಗೆ ನಾವು ಶಕ್ತಿಯನ್ನು ಕೊಡಬೇಕು ನಮ್ಮ ರೈತರಿಗೆ ಎಂದು ಮಾಡಿದ್ದೇವೆ. ಅದು ಉಪಕಸುಬು. ಎಲ್ಲಾ ಕಾಲದಲ್ಲೂ ವ್ಯವಸಾಯ ಮಾಡಲಿಕ್ಕೆ ಆಗುವುದಿಲ್ಲ. ಅದರಲ್ಲೂ ಎಲ್ಲಿ ಒಣ ಭೂಮಿ ಪ್ರದೇಶ ಇದೆಯೋ, ಮಳೆಯ ಆಧಾರದ ಮೇಲೆ ಜೀವನ ಮಾಡತಕ್ಕಂಥದ ಜನ ಯಾರಿದ್ದಾರೆ, ಅಲ್ಲಿ ಎರಡು ಹಸುಗಳನ್ನು ಕಟ್ಟಿಕೊಳ್ಳುವುದಾದರ ಅವನ ಶಕ್ತಿ ಹೆಚ್ಚಾಗುತ್ತದೆ, ಅವನ ಆರ್ಥಿಕ ಶಕ್ತಿ ಹೆಚ್ಚಾಗುತ್ತದೆ ದಿವಂಗತ ಎಂ.ವಿ. ಕೃಷ್ಣಪ್ಪನವರ, ಈ ಮಾತನ್ನು ಬೆಂಗಳೂರಿನ ಡೈರಿಯನ್ನು ಉದ್ಘಾಟನೆ ಮಾಡಿದಂಥ ಕಾಲದಲ್ಲಿ ದಿವಂಗತ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಆ ಒಂದು ಕಾರ್ಯಕ್ರಮವನ್ನು ಉದ್ಘಾಟನೆ ಹೇಳಿದರು.ಮಾಡಿದಂಥ ಸಂದರ್ಭದಲ್ಲಿ ಹೇಳಿದ್ದರು, ಈ ದೇಶದಲ್ಲಿ ರೈತ ಬದುಕಬೇಕಾಗಿದ್ದರೆ, ಅವನನ್ನು ನಗರ ಪ್ರದೇಶಕ್ಕೆ ಕರೆದುಕೊಂಡು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ಅವನಿಗೆ ಪರ್ಯಾಯವಾದಂಥ ಒಂದು ವೃತ್ತಿಯನ್ನು ನಾವು ರೂಪಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಹಳ್ಳಿಯಲ್ಲೇ ಅವನಿಗೆ ಶಕ್ತಿಯನ್ನು ಕೊಡತಕ್ಕಂಥ ಉಪಕಸುಬುಗಳನ್ನು ಮಾಡಬೇಕಾಗಿದ್ದರೆ, ಅದು ಡೈರಿಯಿಂಗ್ ಇರಬಹುದು, ಸಿರಿಕಲ್ಚರ್ ಇರಬಹುದು, ಹಾರ್ಟಿಕಲ್ಚರ್ ಇರಬಹುದು, ಹೀಗೆ ನಾನಾ ರೀತಿಯಿಂದ ಅವನ ಆರ್ಥಿಕ ಶಕ್ತಿ ಹೆಚ್ಚಾಗಲಿಕ್ಕೆ ನಾವು ಕಾರ್ಯಕ್ರಮಗಳನ್ನು ಹಾಕಬೇಕಾಗುತ್ತದೆ ಅನ್ನತಕ್ಕಂಥ ಮಾತನ್ನು ಏನು ಹೇಳಿದ್ದರು, ಅದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತೇನೆ. ಇದರ

ಜೊತಗ 370 ವಿದೇಶೀ ಶುದ್ಧ ರ‍್ಯಾಂಬುಲ್ ಕುರಿಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಅದನ್ನೂ ಕೂಡ ವಿತರಿಸತಕ್ಕ ವ್ಯವಸ್ಥೆ ನಡೆಯುತ್ತಿದೆ. ಅದರ ಜೊತೆಗೆ, ಸನ್ಮಾನ್ಯ ಅಧ್ಯಕ್ಷರೆ, ಮೊದಲನೇ ಬಾರಿಗೆ, ಈ ಮಾತು ಹೇಳುತ್ತಿದ್ದೇನೆ. ಸರ್ಕಾರ ಈಗ ಏನು ಮಾಡಿದೆ, ಏನ್ನತಕ್ಕಂಥಾದ್ದನ್ನು ನಾವು ಹೇಳಬೇಕಾಗುತ್ತದೆ ಎಂದರೆ ಮೊದಲನೆಯ ಬಾರಿಗೆ ಎನ್ನುವ ಶಬ್ದಕ್ಕೆ ಒತ್ತುಕೊಟ್ಟು ಹೇಳಿದೆ. ಸುಮಾರು 40 ಕೋಟಿ ರೂಪಾಯಿಗಳ ವೆಚ್ಚದಲ್ಲಿ 20 ಸಾವಿರ ಫಲಾನುಭವಿಗಳಿಗೆ, ಪರಿಶಿಷ್ಟ ವರ್ಗದವರಿಗೆ ಎರಡು ಕರೆಯುವ ಹಸುಗಳನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಈ ವರ್ಷ ಹಮ್ಮಿಕೊಂಡಿದ್ದೇವೆ, ಮಾರ್ಚ 31 ರೊಳಗೆ 40 ಸಾವಿರಗಳನ್ನು ಈ ಒಂದು ಬಾಬಿಗೇ ನೀಡಲು ಈ ಸಲ ಸರ್ಕಾರ ಕಾರ್ಯಕ್ರಮವನ್ನು ರೂಪಿಸಿಕೊಂಡಿದೆ. ಈಗಾಗಲೇ ಆ ಕಾರ್ಯಕ್ರಮ ಅನುಷ್ಠಾನದಲ್ಲಿ ಜಾರಿಗೆ ಬಂದು ಅನೇಕ ಫಲಾನುಭವಿಗಳಿಗೆ ಇದರ ಫಲ ಆಗಲೇ ದೊರಕಿದೆ ಎನ್ನತಕ್ಕಂಥ ಮಾತನ್ನು ಹೇಳಿ, ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೆ 60 ಪರ್ಸೆಂಟ್ ಸಬ್ಸಿಡಿ, 40 ಪರ್ಸೆಂಟ್ ಸಾಲ. ಅದಕ್ಕೆ ಹಾಕಿರತಕ್ಕಂಥಾದ್ದು 4 ಪರ್ಸೆಂಟ್ ಬಡ್ಡಿ ಮಾತ್ರ. Only 4% nominal interest. 60% is subsidy, for 40% 4 ಪರ್ಸೆಂಟ್ ಮಾತ್ರ ಬಡ್ಡಿಯನ್ನು ಅವರು ಕೊಡಬೇಕು ಎನ್ನತಕ್ಕಂಥ ಈ ಯೋಜನೆಯನ್ನು ರೂಪಿಸಿ 40 ಕೋಟಿ ರೂಪಾಯಿಯನ್ನು ಒಂದು ಬಾಬಿಗೇ ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಕೊಡತಕ್ಕಂಥ ನಿರ್ಣಯವನ್ನು 1995-96ನೇ ಸಾಲಿನಲ್ಲಿ ಮಾಡಿದ್ದೇವೆ. ಮಾರ್ಚ 31 ರೊಳಗೆ ಈ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಜಾರಿಗೆ ತರತಕ್ಕಂಥಾದ್ದಕ್ಕೆ ಸರ್ಕಾರ ಬದ್ಧವಾಗಿದೆ ಎನ್ನುವಂಥ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಹಿಂದುಳಿದ ಸಮಾಜಕ್ಕೆ ಈ ಡೈರಿಯಿಂಗ್ ಒಂದಕ್ಕೇ 20 ಕೋಟಿ ರೂಪಾಯಿಗಳನ್ನು ಕೊಡತಕ್ಕಂಥಾದ್ದು ಇದ್ದು, 10 ಸಾವಿರ ಹಿಂದುಳಿದ ವರ್ಗದವರ ಫಲಾನುಭವಿಗಳಿಗೆ ಇದರ ಒಂದು ಲಾಭ ಅಥವಾ ಸವಲತ್ತು ಹೋಗಬೇಕು ಅನ್ನತಕ್ಕಂಥ ತೀರ್ಮಾನ ಮಾಡಿದ್ದೇವೆ. ಆ ವರ್ಗದವರಿಗೆ 20 ಕೋಟಿ ರೂಪಾಯಿಯ ಹಣವನ್ನು ಈ ಒಂದು ಬಾಬಿನಲ್ಲಿ ಮೀಸಲಿಟ್ಟು ಈಗಾಗಲೇ ಆ ಕಾರ್ಯಕ್ರಮ ಪ್ರಾರಂಭವಾಗಿದೆ ಅನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದರ ಜೊತೆಗೆ ಸುಮಾರು 3 ಸಾವಿರ ಅಲ್ಪಸಂಖ್ಯಾತರು ಯಾರಿದ್ದಾರೆ, ಅವರಿಗೂ ಕೂಡ ಇವತ್ತು 6 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಾವು ಈ ಕಾರ್ಯಕ್ರಮವನ್ನು ಅವರಿಗೂ ಕೂಡ ರೂಪಿಸಿದ್ದೇವೆ. ಒಟ್ಟು 66 ಕೋಟಿ ರೂಪಾಯಿಗಳನ್ನು ಎಸ್.ಸಿ, ಎಸ್.ಟಿ,ಗಳಿಗೆ, ಬ್ಯಾಕವರ್ಡ ಕ್ಲಾಸಗೆ ಮತ್ತು ಮೈನಾರಿಟೀಸಗೆ ಇಟ್ಟಿದ್ದೇವೆ. ಒಟ್ಟು 66 ಕೋಟಿ ರೂಪಾಯಿಗಳನ್ನು ಈ ಒಂದು ವರ್ಷ ಈ ಬಾಬಿಗೇ ಖರ್ಚು ಮಾಡಬೇಕು ಅನ್ನತಕ್ಕಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಅನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕಳೆದ ವರ್ಷ ಸುಮಾರು 12 ಲಕ್ಷ ಕೆ.ಜಿ. ಹಾಲು ಬರುತ್ತಿದ್ದರೆ, ಈ ವರ್ಷ ಅದು 14.15 ಲಕ್ಷ ಆಗಿದೆ. ಅಂದರೆ 2.15 ಲಕ್ಷ ಕೆ.ಜಿ. ಹಾಲಿನ ಉತ್ಪಾದನೆ ಈ ವರ್ಷ ಜಾಸ್ತಿ ಆಗಿರತಕ್ಕಂಥಾದ್ದು ಸಾಧನೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

11.40 ಪಿ.ಎಂ.

ಹಾಸನದ ಪಶು ಆಹಾರ ಉತ್ಪಾದನಾ ಕಾರ್ಖಾನೆಯಲ್ಲಿ 3ಟನ್ ಉತ್ಪಾದನೆ ಮಾಡುವುದಕ್ಕೆ 6.40 ಕೋಟಿ ರೂಪಾಯಿ ಖರ್ಚು ಮಾಡಲಾಗುವುದು. ಕೆಲಸ ಪ್ರಾರಂಭವಾಗಿದೆ. ಕೆಲಸ ನಡೆಯುತ್ತಾ

ಇದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಂದಿನಿ ಪ್ಯಾಕೆಟ್ ಸಂಕೀರ್ಣಕ್ಕೆ 4.3 ಕೋಟಿ ರೂಪಾಯಿಗಳು, ಬೆಂಗಳೂರಿನಲ್ಲಿಯೇ ಈ ಹಿಂದೆ ಬಂದಂಥ ಕಾಲದಲ್ಲಿ ಸುಮಾರು 70 ಕೋಟಿ ರೂಪಾಯಿಗಳ ವಿವಿಧ ಎನ್.ಸಿ.ಡಿ.ಸಿ ಮತ್ತು ಬೇರ ಬೇರೆ ಕಾರ್ಯಕ್ರಮಗಳ ಅಡಿಯಲ್ಲಿ 70 ಕೋಟಿ ರೂಪಾಯಿಗಳ ವಿವಿಧ ಯೋಜನೆಗೆ ಈ ಕೆ.ಎಂ.ಎಫ್.ನಿಂದ ಇವತ್ತು ಹಣವನ್ನು ದೊರಕಿಸತಕ್ಕಂಥದಕ್ಕೆ ಅವರು ಈ ಸಾರಿ ಈ ರಾಜ್ಯಕ್ಕೆ ವಿವಿಧ ಯೋಜನೆಗಳ ಅಡಿಯಲ್ಲಿ, ನಿಡಗುಂಜಿ, ಇರ್ವಾಣಿ, ಕೊಳ್ಳೆಗಾಲ, ಷಹಪುರ, ಗೋಕಾಕ ಕುಮಟ, ಶಿರ್ಸಿ, ಮಧುಗಿರಿ, ಹೊಳೆನರಸೀಪುರ, ಧಡೆಸಗೂರು ಇಲ್ಲಿ ಹೊಸ. ಶಿಥಲೀಕರಣಕ್ಕೆ ಮಂಜೂರಾತಿ ಕೊಟ್ಟಿದ್ದೇವೆ. ಅಷ್ಟೇ ಅಲ್ಲದೆ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ, ಮತ್ತು ಅದಕ್ಕೆ ಹಣವನ್ನು ಕೂಡ ಎನ್.ಸಿ.ಡಿ.ಸಿ.ಯವರು ಒದಗಿಸಿದ್ದಾರೆ, ಮತ್ತು ಅವರ ಕ್ಲಿಯರೆನ್ಸ್ ಸಿಕ್ಕಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಸದನಕ್ಕೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಾವು ರೈತರ ಬಗ್ಗೆ ಕಳಕಳಿಯಿಂದ ಮಾತನಾಡುತ್ತೇವೆ. ನನ್ನ ಸ್ನೇಹಿತರಾದ ಶ್ರೀಮಾನ್ ಬಚ್ಚೇಗೌಡರು ಮತ್ತೊಂದು ವಿಷಯವನ್ನು ಹೇಳುವುದಕ್ಕೆ ಹೊರಟಿದ್ದಾರೆ. ನಾನು ಇಲ್ಲಿ ಹೇಳಿರಲಿಲ್ಲ. ಫೌಲ್ಟ್ರಿ ಒಂದು ಭಾಗಕ್ಕೆ ನಾವು ಒಂದು ಕೋಟಿ ರೂಪಾಯಿ ಕೊಟ್ಟಿದ್ದೇವೆ, ಇದಕ್ಕೆ ಸಂಬಂಧಪಟ್ಟಂತೆ ಎನ್.ಸಿ.ಡಿ.ಸಿ.ಯವರು 25 ಕೋಟಿ ರೂಪಾಯಿಗಳ ಪ್ರಾಜೆಕ್ಟನ್ನು ಕ್ಲಿಯರ್ ಮಾಡಿದ್ದಾರ. ಅದೂ ಕೂಡ ಈ ವರ್ಷ ಜಾರಿಗೆ ಬರುತ್ತದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸಕ್ಕರೆ ಬಗ್ಗೆ. ಈ ಸಾರಿ ಈ ಸದನದ ಎಲ್ಲಾ ಸದಸ್ಯರಿಗೂ ರೈತರ ಬಗ್ಗೆ ಕಳಕಳಿ ಇದೆ. ಆದರೆ ಸರ್ಕಾರದ ಇತಿಮಿತಿಯ ಚೌಕಟ್ಟಿನೊಳಗೆ ಏನು ಮಾಡುವುದಕ್ಕೆ ಸಾಧ್ಯವಿತ್ತೋ ಅದನ್ನೆಲ್ಲ ಮಾಡಲಿಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೇವೆ. ಇದರಲ್ಲಿ ಯಾವುದೇ ರೀತಿಯ ಅಲಕ್ಷ್ಯ ಮನೋಭಾವನೆಯಿಂದ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ. ಬಹುಶಃ ಕೇಂದ್ರ ಸರ್ಕಾರದ ಮಂತ್ರಿಗಳನ್ನು ಭೇಟಿ ಮಾಡಿದ್ದೇನೆ. ಪ್ರಧಾನಿಗಳನ್ನು ಭೇಟಿ ಮಾಡಿದ್ದೇನೆ. ಸಾಕಷ್ಟು ಮಟ್ಟಿಗೆ ನನಗೆ ಇರತಕ್ಕಂಥ ಎಲ್ಲಾ ಒತ್ತಡವನ್ನು ಅವರ ಮೇಲೆ ತಂದು ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕೆಂದು ಪ್ರಯತ್ನ ಮಾಡಿದ್ದೇನೆ. ಆದರೆ ಇದರ ನೀತಿಯ ಬಗ್ಗೆ ಇನ್ನೂ ಕೇಂದ್ರ ಸರ್ಕಾರದಲ್ಲೆ ಒಂದು ಅಂತಿಮ ತೀರ್ಪಿಗೆ ಬರಲಿಕ್ಕೆ ಸಾಧ್ಯವಾಗಿಲ್ಲ. ಕಾಲದಲ್ಲಿ ಫ್ರೀ ಎಕ್ಸಪೋರ್ಟ ಮಾಡಲಿಕ್ಕೆ ನೀವು ಅವಕಾಶ ಮಾಡಿಕೊಡಿ ಎಂದು ಕೇಳಿದೆ. ಇವತ್ತು ಹೆಚ್ಚುಕಡಿಮೆ 26 ಲಕ್ಷ ಟನ್ ಶುಗರ್ ಕರ್ನಾಟಕದಲ್ಲಿ ಇದೆ. 6.7 ಲಕ್ಷ ಮೆಟ್ರಿಕ್ ಟನ್ನ ನಮ್ಮ ಗೋಡೌನನಲ್ಲಿ ಇದೆ. ಅದರ ವಾಲ್ಯೂ 700 ಕೋಟಿ ರೂಪಾಯಿ ಆಗುತ್ತದೆ. ಈ ಶುಗರ್ ಬಗ್ಗೆ ತಾವು ಏನಾದರೂ ಮಾಡಬೇಕೆಂದು ಪ್ರಧಾನಮಂತ್ರಿಗಳ ಜೊತೆಯಲ್ಲಿ ಮೊನ್ನೆ ಕೂಡ ಮಾತನಾಡಿದ್ದೇನೆ. ನಾವು ಎಕ್ಸಪೋರ್ಟ ಮಾಡುತ್ತೇವೆ ಪರ್ಮಿಷನ್ ಕೊಡಿ ಎಂದು ನಮ್ಮಲ್ಲಿಗೆ ಕೆಲವರು ಬಂದಿದ್ದರು. ಆದರೆ ಪರ್ಮಿಷನ್ ಕೊಡುವುದಕ್ಕೆ ಅನಾವಶ್ಯಕವಾಗಿ ಗೋಡೌನನಲ್ಲಿ ಇಟ್ಟುಕೊಳ್ಳುವುದಕ್ಕೆ ಜಾಗವಿಲ್ಲ, ಅನೇಕ ಕಡೆ ಕೊಳೆಯುತ್ತಾ ಇದೆ, ಇದರ ಬಿಡುಗಡೆ ಮಾಡಲಿಕ್ಕೆ ಶೇಕಡ 25 ಪರ್ಸಂಟೆ ಸ್ಟಾಕ್ ಏನಿದೆಯೋ ಅದನ್ನಾದರೂ ಒಂದು ಕಂತಿನೊಳಗೆ ಬಿಡುಗಡೆ ಮಾಡಲಿಕ್ಕೆ ನೀವು ಅವಕಾಶ ಮಾಡಿ ಕೊಟ್ಟರೆ, ವಿದೇಶಿ ಮಾರುಕಟ್ಟೆಗೆ ರಫ್ತು ಮಾಡತಕ್ಕಂಥ ಅನೇಕ ಜನ ವಾಣಿಜ್ಯೋದ್ಯಮಿಗಳು

ಮುಂದೆ ಬಂದಿದ್ದಾರೆ ಎನ್ನತಕ್ಕಂಥ ಮಾತನ್ನು ಪ್ರಧಾನ ಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಅಥವಾ ಒಂದು ವೇಳೆ ರಫ್ತು ಮಾಡುವುದಕ್ಕೆ ನೀವೇ ಪರ್ಮಿಷನ್ ಕೊಡಿ. ನಮಗೇನೂ ತೊಂದರೆ ಇಲ್ಲ, ಯಾರು ನನ್ನ ಹತ್ತಿರ ಬಂದಿದ್ದಾರೆ ಅವರನ್ನು ನಿಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ. ರಾಜ್ಯದಲ್ಲಿರತಕ್ಕಂಥ 6.7 ಲಕ್ಷ ಮೆಟ್ರಿಕ್ ಟನ್ನ ಏನು ಇದೆಯೋ ಅದರಲ್ಲಿ 2-3 ಲಕ್ಷ ಮೆಟ್ರಿಕ್ ಟನ್ನ ಜಮಾಗದೆ ಮಾಡಿದರೆ ಸ್ವಲ್ಪ ಮಟ್ಟಿಗೆ ಸುಧಾರಣೆಯಾಗುತ್ತದೆ ಎನ್ನುವ ನಮ್ಮ ಪರಿಸ್ಥಿತಿಯನ್ನು ಪ್ರಧಾನಮಂತ್ರಿಗಳಿಗೆ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೆಳಗಾಂ ಫಂಕ್ಷನನಲ್ಲಿ ಪ್ರಸ್ತಾಪ ಮಾಡಿದಾಗ ಪ್ರಧಾನ ಮಂತ್ರಿಗಳು ಹೇಳಿದರು, ಅದೇನೆಂದರೆ ಸುಮಾರು 5 ಲಕ್ಷ ಟನ್ನ ನಾವೇ ಖರೀದಿ ಮಾಡಬೇಕೆಂದಿದ್ದೇವೆ, ಮತ್ತು ಇದನ್ನು ರಫ್ತು ಕೂಡ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು ಎನ್ನುವ ತೀರ್ಮಾನವನ್ನು ನಾವು ತೆಗೆದುಕೊಳ್ಳುತ್ತಾ ಇದ್ದೇವೆ. ಅದಕ್ಕಾಗಿ ಬೇರೆ, ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಕೂಡ ಅಲ್ಲಿ ಪ್ರಸ್ತಾಪ ಮಾಡಿದರು.

ಶ್ರೀ ಹೆಚ್.ಡಿ. ದೇವೇಗೌಡ : ಇದರಲ್ಲಿ ಪಕ್ಷ ರಾಜಕಾರಣವನ್ನು ಬೆಳೆಸಬೇಕಾದ ಅವಶ್ಯಕತೆ ನನಗೆ ಇಲ್ಲ. ಅವರು ಹೇಳಿದ್ದುದು ಸರಿಯಿದೆ. ಅದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಇದರಲ್ಲಿ ಏನು ಇದೆ After all we are all here to safeguard the interest of the farming community ಅನಾವಶ್ಯಕವಾಗಿ ಪ್ರತಿಯೊಂದಕ್ಕೂ ರಾಜಕೀಯ ದೃಷ್ಟಿಕೋನವನ್ನೇ ಇಟ್ಟುಕೊಂಡು ಮಾತನಾಡತಕ್ಕಂಥ ಭಾವನೆ ನನಗೆ ಇಲ್ಲ. ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಈ ರಾಜ್ಯದಲ್ಲಿ ಕಳೆದ 1 ವರ್ಷ 2 ತಿಂಗಳಲ್ಲಿ ಹಲವಾರು ಸಮಸ್ಯೆಗಳು ನನ್ನ ಮುಂದೆ ಬಂದು ಅದನ್ನು ಎದುರಿಸತಕ್ಕಂಥ ಸನ್ನಿವೇಶ ಬಂದರೂ, ವಿರೋಧ ಪಕ್ಷದ ಸಹಕಾರ, ಕೇಂದ್ರ ಸಹಕಾರ, ಮತ್ತು ರಾಜ್ಯದ ಜನತೆಯ ಸಹಕಾರದಿಂದ ನಾನು ಈ ಸಮಸ್ಯೆಗಳನ್ನು ಬಿಡಿಸುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ಸು ಕಾಣಲಿಕ್ಕೆ ಸಾಧ್ಯವಾಗಿದೆ. ಇವರೆಲ್ಲರ ಸಹಕಾರದಿಂದ ಎನ್ನುವ ಮಾತನ್ನು ನಾನು ಪೂರ್ವದಲ್ಲಿಯೇ ಹೇಳಿದ್ದೇನೆ. ಅದರಲ್ಲಿ ಯಾವುದೇ ರೀತಿಯ ಮುಚ್ಚುಮರೆ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಇದರೊಳಗೆ ಪೊಲಿಟಿಕಲ್ ಮೈಲೇಜ್ ನನಗೆ ಸಿಗುತ್ತದೋ, ಅವರಿಗೆ ಸಿಗುತ್ತದೋ ಎನ್ನುವ ಚರ್ಚೆಯನ್ನು ಮಾಡುವುದರ ಬದಲಾಗಿ what are all our achievements they have been taken to credit collectively ಅದರಲ್ಲೇನು ಅಂತಹ ಒಂದು ಸಂಕುಚಿತ ಮನೋಭಾವನೆಯಿಂದ ನಾನು ಇದನ್ನು ಯೋಚನೆ ಮಾಡತಕ್ಕಂಥದ್ದಕ್ಕೆ ಹೋಗುವುದಿಲ್ಲ ಎನ್ನುವ ಮಾತನ್ನು ಒಂದು ಸಾರಿ ಪ್ರಧಾನ ಮಂತ್ರಿಗಳು ಹೇಳಿದರು. I want to scrap this licensing system ಎನ್ನುವಂಥ ಮಾತನ್ನು ಹೇಳಿದರು. ಆ ಮಾತನ್ನು ಬಹಳ ಬೇಸರದಿಂದ ಹೇಳಿದರು. ಇದಕ್ಕೆಲ್ಲ ಏಕೆ ನನ್ನ ಹತ್ತಿರ ಬಂದು ಅನಾವಶ್ಯಕವಾಗಿ ಕಾಲಹರಣ ಮಾಡಬೇಕು, ನನಗೆ ಇದು ಇಷ್ಟ ಇಲ್ಲ. ಅದರ ನಮ್ಮಲ್ಲಿ ಕೆಲವರು ನನಗೆ ಬಿಡುತ್ತಿಲ್ಲ. ಹಲವಾರು ರೀತಿಯಾದ ಒತ್ತಡಗಳು ಇವೆ ಎನ್ನುವ ಮಾತನ್ನು ಹೇಳಿರತಕ್ಕದ್ದನ್ನೇ ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಇಲ್ಲಿ ಇಚ್ಛೆಪಡುತ್ತೇನೆ. ಅವರು ಲೈಸನ್ಸಿಂಗ್ ಸಿಸ್ಟಮನ್ನು ದೊಡ್ಡ ದೊಡ್ಡ ಉದ್ದಿಮೆಗಳಿಗೆಲ್ಲ ತೆಗೆದುಹಾಕತಕ್ಕಂಥ ಕಾಲದಲ್ಲಿ ಅದು ಸ್ಟೀಲ್ ಇಂಡಸ್ಟ್ರೀಸ್ ಇರಬಹುದು, ಸಿಮೆಂಟ್ ಇಂಡಸ್ಟ್ರೀ

ಇರಬಹುದು, ಇವುಗಳಿಗೆಲ್ಲ ಲೈಸನ್ಸ ತೆಗೆಯತಕ್ಕಂಥ ಕಾಲದಲ್ಲಿ ರೈತ ಬೆಳೆಯತಕ್ಕಂಥ ಕಬ್ಬಿನಿಂದ ಒಂದು ಉತ್ಪಾದನೆ ಏನು ಇದೆಯೋ ಅದರ ಹಿನ್ನಲೆಯಲ್ಲಿ ಸಕ್ಕರೆ ಕಾರ್ಖಾನೆಗಳನ್ನು ತೆರೆಯುವುದಕ್ಕೆ ದೆಹಲಿಗೆ ಹೋಗಿ ಒಂದು ವರ್ಷ, 2 ವರ್ಷ, ಮೂರು ವರ್ಷದಿಂದ ಲೈಸೆನ್ಸಗೋಸ್ಕರ ಕಾಯುವುದಕ್ಕೆ ಬದಲಾಗಿ ಲೈಸೆನ್ಸ ಸಿಸ್ಟಮನ್ನು ನಾವು ಏಕೆ ತೆಗೆಯಬಾರದು ಎನ್ನುವ ಯೋಚನೆ ಮಾಡುತ್ತಾ ಇದ್ದೇವೆ ಎನ್ನುವ ಮಾತನ್ನು ಹೇಳಿದರು. ಇದರಲ್ಲಿ ವಸ್ತುಸ್ಥಿತಿ ಏನೇ ಇರಲಿ ಒಟ್ಟು 39 ಸಕ್ಕರೆ ಕಾರ್ಖಾನೆಗಳಿಗೆ ನಾವು ಇವತ್ತು ಲೈಸೆನ್ಸ ಬೇಕೆಂದು ಅರ್ಜಿ ಹಾಕಿದ್ದೇವೆ. ಇದಕ್ಕೋಸ್ಕರ ಹತ್ತಾರು ಸಾರಿ ಪ್ರಧಾನ ಮಂತ್ರಿಗಳನ್ನು ನೋಡಿದ್ದೇವೆ, ಸಕ್ಕರೆ ಮಂತ್ರಿಗಳನ್ನು ಮತ್ತು ವ್ಯವಸಾಯದ ಮಂತ್ರಿಗಳನ್ನು ನೋಡಿದ್ದೇವೆ. ನಾನು ದೆಹಲಿಗೆ ಹೋದಂಥ ಕಾಲದಲ್ಲಿ ಹೆಡಕ್ವಾರ್ಟರ್ಸನಲ್ಲಿ ಅವರನ್ನು ನೋಡದೆ ಇತ್ತಕಡೆ ಬರುವ ಪ್ರಶ್ನೆಯೇ ಇಲ್ಲ. ಎಷ್ಟು ಸಾಧ್ಯವೋ ಅಷ್ಟು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆದರೆ ಇವತ್ತು ನಮ್ಮ ನಿರೀಕ್ಷೆಗಿಂತ ಹೆಚ್ಚಿನ ರೀತಿಯಲ್ಲಿ ಕಬ್ಬನ್ನು ನಮ್ಮ ರೈತರು ಬೆಳೆಯುತ್ತಿದ್ದಾರೆ. ಇನ್ನೊಂದು ಕಡೆ ಮಹಾರಾಷ್ಟ್ರದಲ್ಲಿ ಅದು ರಾಜಕಾರಣ ಇರಬಹುದು, ಬೇರೆ ರಾಜ್ಯದ ವಿಷಯವನ್ನು ಇಲ್ಲಿ ಚರ್ಚೆಮಾಡುವುದಕ್ಕೆ ಬದಲಾಗಿ, ಹಿಂದೆ ಎಲ್ಲ ರಾಜ್ಯಗಳಿಗೆ ನಿರ್ಬಂಧ ಇಲ್ಲದೇ ಇದ್ದಂಥ ಸನ್ನಿವೇಶದಲ್ಲಿ, ಈ ಗೊಂದು ನಿರ್ಬಂಧವನ್ನು ವಿಧಿಸಿದಂಥ ಸಂದರ್ಭದಲ್ಲಿ, ನಮ್ಮ ರೈತರು ತುಂಬಾ ಸಂಕಷ್ಟ ಸನ್ನಿವೇಶಕ್ಕೆ ಸಿಕ್ಕಿದಂಥ ಹಿನ್ನಲೆಯಲ್ಲಿ ನಾವು ಹಿಂದೆ ಕೆಲವು ರಿಯಾಯಿತಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೆವು. ಪರಚೇಸ್ ಟ್ಯಾಕ್ಸ ರಡ್ಯೂಸ್ ಮಾಡಿದೆವು, ಇದು ಆದಮೇಲೆ ಪವರ್ ಜನರೇಷನ್ ಮೇಲೆ 7 ಪರ್ಸಂಟೆ ತೆರಿಗೆ ಕೊಡಬೇಕೆಂದು ಉದ್ದುದನ್ನು ತೆಗೆದುಹಾಕಿದ್ದೇವೆ. ರೈತರಿಗೆ ಕೊಡತಕ್ಕಂಥ 12 ರೂಪಾಯಿ ಅನುಧಾನದ ಬದಲಾಗಿ 15 ರೂಪಾಯಿಯನ್ನು ಕೊಡಬೇಕೆಂದು ಮಾಡಿದ್ದೇವೆ. ಬೀದರ್ ಸಕ್ಕರೆ ಕಾರ್ಖಾನೆಗೆ 4 ಕೋಟಿ ರೂಪಾಯಿ, ಆಳಂದ ಸಕ್ಕರೆ ಕಾರ್ಖಾನೆಗೆ 1 ಕೋಟಿ ರೂಪಾಯಿ, ಲಕ್ಷ್ಮಿ ಸಕ್ಕರೆ ಕಾರ್ಖಾನೆ 1 ಕೋಟಿ ರೂಪಾಯಿ, ಶ್ರೀರಾಮ ಸಕ್ಕರೆ ಕಾರ್ಖಾನೆಗೆ 1 ಕೋಟಿ ರೂಪಾಯಿ ಅದರ ಜೊತೆಗೆ ಅವತ್ತು ನಾವು ಟ್ರಾನ್ಸಪೋರ್ಟೇಷನ್ ಸಬಸಿಡಿಯನ್ನು ಕೊಟ್ಟಿದ್ದೇವೆ. ಈ ರೀತಿ ಟ್ರಾನ್ಸಪೋರ್ಟೇಷನ್ ಸಬ್ಸಿಡಿಯನ್ನು ಹಿಂದೂಸ್ಥಾನದಲ್ಲಿ ಯಾರೂ ಕೂಡ ಮಾಡಿಲ್ಲ. 150 ರೂಪಾಯಿಯನ್ನು ಟ್ರಾನ್ಸಪೋರ್ಟ ಸಬ್ಸಿಡಿ ಎಂದು ನಾವು ಕೊಡುವುದಕ್ಕೆ. ನಿರ್ಣಯ ಮಾಡಿದ್ದೇವೆ. ನಾನು ನಮ್ಮ ಎಲ್ಲಾ ಸಕ್ಕರೆ ಕಾರ್ಖಾನೆಗಳ ಮಾಲೀಕರುಗಳನ್ನು ಕರೆದು ವಿನಂತಿ ಮಾಡಿಕೊಂಡಿದ್ದೇವೆ. ನೀವು ಮುಚ್ಚತಕ್ಕಂಥ ಸಕ್ಕರೆ ಕಾರ್ಖಾನೆಗಳ ಕ್ಲೋಸಿಂಗ್ ಪಿರಿಯಡನ್ನು ಒಂದು ತಿಂಗಳು ಮುಂದುವರಿಸಬೇಕು. ಅವಶ್ಯಕತೆ ಇದ್ದಲ್ಲಿ 6 ವಾರ ಕಾರ್ಖಾನೆಯಲ್ಲಿ ಕಬ್ಬು ಅರೆಯುವುದನ್ನು ಮುಂದುವರೆಸಬೇಕು. ಅದಕ್ಕೆ ಎಷ್ಟು ಪರಚೇಸ್ ಟ್ಯಾಕ್ಸ ಲುಕ್ಸಾನು ಆಗುತ್ತದೋ, ಇಳುವರಿಗೆ ಲುಕ್ಸಾನು ಆಗುತ್ತದೋ ಅದನ್ನು ನಾನು ಪರಚೇಸ್ ಟ್ಯಾಕ್ಸನಲ್ಲಿ ತುಂಬಿಕೊಡುತ್ತೇನೆಂದು ಹೇಳಿದ್ದೆ.

MESSAGE

MR. SPEAKER : Some factual errors have crept in Para-6 and Para-13 in the Address of the Governor of Karnakaka to the State Legislature delivered on 19th February, 1996.

The Governor is pleased to approve the following corrections at paras 6 and 13 of the Address namely:-

(1) In Para-6, it has been stated "with this in view, we shall be launching a special watershed development Programme based on Israeli technology in one district of each revenue division of the State". Instead, this should read as "With this in view, we shall be launching a special Irrigation Water Management programme based on Israeli techonology in one district of each revenue division of the State".

(2) In Para-13, it has been stated "The State has also been receiving 140 million units of energy every month from Maharashtra to tide over the crisis". Instead, this should read as "The State has also received 140 million units of energy from Maharashtra from 23/9/1995 till 31/1/1996. In fact we were receiving around 1.5 to 2 Mus of energy every day during off peak night hours which has been stepped up to around 3 Mus after KEB reached a fresh agreement with MSEB recently".

(Signed)

KHURSHED ALAM KHAN
Governor of Karnataka

SRI M. MALLIKARJUN KHARGE : It this is the factula error then they should have moved official Amendment.

SRI H.D. DEVEGOWDA : I am going to reply to all those things.

SRI M. MALLIKARJUN KHARGE : The things which are not in the Address of the Governor, if later on it is brought to the notice of the House then it should come through the Official Amendment to Governor's Address.

SRI H.D. DEVEGOWDA : I am going to give convincing argument. ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಕೇಂದ್ರ ಸರ್ಕಾರಕ್ಕೆ 39 ಸಕ್ಕರೆ ಕಾರ್ಖಾನೆಯ ಲೈಸನ್ಸ್‌ಗಾಗಿ ಅರ್ಜಿಯನ್ನು ಹಾಕಿದ್ದೇವೆ ಅವು ಕೇಂದ್ರದಲ್ಲಿ ಇವೆ. ಅವುಗಳಿಗೆ ಸಾಧ್ಯವಾದ ಮಟ್ಟಿಗೆ ಲೈಸನ್ಸ್ ವ್ಯವಸ್ಥೆ ಬಗೆದ ಅದನ್ನು ಬೇಗನೆ ಸಹ ಕೊಡಬೇಕು ಎನ್ನುವುದನ್ನು ಹೊಸ್ತ ಕೂಡ ಈ ವಿಷಯದ ಬಗ್ಗೆ ಪ್ರಸ್ತಾಪ

ಮಾಡಿದ್ದೇನೆ. ಸಾಧ್ಯವಾದ ಮಟ್ಟಿಗೆ ಇನ್ನೊಂದು ಎರಡು ವಾರಗಳಲ್ಲಿ ಕ್ಲಿಯರ್ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅವರ ಜೊತೆ 4 ರಿಂದ 5 ವಾರಗಳ ಕಾಲ ನಿಮ್ಮ ಸಕ್ಕರೆ ಕಾರ್ಖಾನೆಯನ್ನು ಮುಚ್ಚಬೇಕೆಂದು ಏನು ಸ್ಟ್ಯಾಟುಟರಿ ಇದೆಯೋ ಆ ಕಾಲವನ್ನು ಸಂಪೂ 5-6 ವಾರಗಳ ಕಾಲ ಹೆಚ್ಚು ಕಬ್ಬನ್ನು ಅರೆಯಬೇಕು ಎಂದು ಹೇಳಿದಂತಹ ಕಾಲದಲ್ಲಿ, ಅವರ ಎಲ್ಲರ ಒಟ್ಟು ಅಭಿಪ್ರಾಯದ ಡಿಮಂಡ್ ನಮಗೆ ಸಕ್ಕರೆ ಇಳುವರಿ ಬಹಳ ಕಡಿಮೆಯಾಗುತ್ತದೆ. ಆರು ಪರ್ಸೆಂಟ್, ಐದೂವರೆ ಪರ್ಸೆಂಟ್ ಇಳುವರಿ ಬರುತ್ತದೆ. ಅದರಿಂದ ನಮಗೆ ತುಂಬಾ ನಷ್ಟವಾಗುತ್ತದೆ. ನೀವು ಆ ನಷ್ಟವನ್ನು ಕೊಡಿಸಿಕೊಂಡು ಎಂದು ತಮ್ಮ ವಾದವನ್ನು ಮಂಡನೆ ಮಾಡಿದರು. ಇವತ್ತು ನಾವು ಪರ್ಚೇಸ್ ಟ್ಯಾಕ್ಸ್ ಏನು ಇದೆ ಅದನ್ನು ಸಂಪೂರ್ಣವಾಗಿ 5-6 ವಾರಗಳ ಕಾಲ ಹೆಚ್ಚುವರಿಯಾಗಿ ಬೆಳೆದಿರತಕ್ಕಂತಹ ಕಬ್ಬನ್ನು ಅರೆಯಲು ಅವರು ಒಪ್ಪಿಗೆ ಕೊಟ್ಟಿದ್ದರೋ, ಆ ವೇಳೆಯಲ್ಲಿ ಅರೆಯುವಂತಹ ಕಬ್ಬಿನಿಂದ ಇಳುವರಿ ಕಡಿಮೆ ಬರುತ್ತದೆ ಎನ್ನುವ ಕಾರಣದಿಂದ : ಅದನ್ನು ಸ್ವಲ್ಪ ಮಟ್ಟಿಗೆ ತುಂಬಿ ಕೊಡುವ ದೃಷ್ಟಿಯಿಂದ 5 ವಾರ 6 ವಾರಗಳ ಕಾಲ ಹೆಚ್ಚುವರಿ ಕಬ್ಬನ್ನು ಅರೆಯತಕ್ಕಂತಹ ಕಾಲದಲ್ಲಿ ಕಡಿಮೆ ಇಳುವರಿ ಬರುವಂತಹ ಸಂದರ್ಭದಲ್ಲಿ ಪರ್ಚೇಸ್ ಟ್ಯಾಕ್ಸ್ (to make good the lose so far as the recovery is concerned) ಆದುದರಿಂದ ಪರ್ಚೇಸ್ ಟ್ಯಾಕ್ಸನ್ನು ರದ್ದು ಮಾಡಿದ್ದೇವೆ. ಇದರಿಂದ 12 ರಿಂದ 13 ಕೋಟಿ ರೂಪಾಯಿಗಳು ರಾಜ್ಯ ಸರ್ಕಾರದ ಖಜಾನೆಗೆ ಬರತಕ್ಕಂತಹ ಹಣ ಇವತ್ತು ಖೋತವಾಗುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಯನ್ನು ಪಡುತ್ತೇನೆ. ನಾನು ಅದಕ್ಕಿಂತ ಹೆಚ್ಚು ದೂರ ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ನಮ್ಮ ಇತಿಮಿತಿಯ ಒಳಗೆ ಏನು ಮಾಡಲಿಕ್ಕೆ ಸಾಧ್ಯ ಎನ್ನುವಂತದ್ದನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿ, ಆದರೂ ಸಹಿತ ನನ್ನ ಮನಸ್ಸಿನಲ್ಲಿ ಇದರ ಬಗ್ಗೆ ನೋವು ಇದೆ. ರೈತರಿಗೆ ಇದರಿಂದ ಪೂರ್ಣ ಲಾಭವಾಗುವುದಿಲ್ಲ. ಬಹಳ ನಿರೀಕ್ಷೆಗೆ ಮೀರಿ ಅವರುಗಳು ಕಬ್ಬನ್ನು ಬೆಳೆದಿದ್ದರಿಂದ ನಾವು ಏನೇ ಸಹಾಯ ಮಾಡಿದರು ಸಹಿತ ಅವನಿಗೆ ಆಗತಕ್ಕಂತಹ ನಷ್ಟವನ್ನು ತುಂಬಿಕೊಡಲಿಕ್ಕೆ ಕಷ್ಟವಾಗಬಹುದು ಎನ್ನುವ ಅರಿವು ಸಹ ಇದೆ. ಆದರೆ ಅನಿವಾರ್ಯ ಹಿಂದೆ 18 ಕೋಟಿ ರೂಪಾಯಿಗಳವರೆಗೆ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಈಗ 5ವಾರ 6ವಾರ ಹೆಚ್ಚುವರಿಯಾಗಿ ಇರತಕ್ಕಂತಹ ಕಬ್ಬನ್ನು ಅರೆಯುವಾಗ ಸಂಪೂರ್ಣವಾಗಿ ಪರ್ಚೇಸ್ ಟ್ಯಾಕ್ಸನ್ನು ಕೈಬಿಡಬೇಕೆಂದು ಒಂದು ನಿರ್ಣಯವನ್ನು ಮಾಡಿರುವುದರಿಂದ 12-13 ಕೋಟಿ ರೂಪಾಯಿಗಳು ಇದು ಸಹ ಸರ್ಕಾರಕ್ಕೆ ನಷ್ಟವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಅದಕ್ಕಿಂತ ಮತ್ತೇನು ಮುಂದೆ ಹೋಗಲಿಕ್ಕೆ ಸಾಧ್ಯವಿಲ್ಲ. ಅದನ್ನು ಸಹ ನಾನು ಆಶಿಸುತ್ತೇನೆ. ನಾನು ಅವರ ಬಗ್ಗೆ ದೂರನ್ನು ಕೊಡುವುದಿಲ್ಲ. ನಮಗೆ ಪವರ್ ಕೊಡುತ್ತಿದ್ದಾರೆ ಅವರ ಬಗ್ಗೆ ಮಧುರವಾದ ಬಾಂಧವ್ಯ ಇದೆ, ಆದರೆ ಸ್ಥಳೀಯವಾದಂತಹ ಸನ್ನಿವೇಶದಿಂದ ಒಂದು ನಿರ್ಣಯವನ್ನು ತೆಗೆದುಕೊಂಡಿರತಕ್ಕಂಥದ್ದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದರ ಬದಲಾಗಿ Sir, through this House I am going to appeal to my counterpart. Let them take early decision so far as this issue is concerned.

ಇಷ್ಟುಮಾತ್ರ ಹೇಳಿ, ಮುಂದಕ್ಕೆ ಹೋಗುತ್ತೇನೆ. ಈ ವರ್ಷ ಆಹಾರದ ಉತ್ಪಾದನೆಯನ್ನು ಹೆಚ್ಚು

ಮಾಡಿದ್ದೇವೆ ಎಂದು ಹೇಳಿದ್ದೇನೆ. ಇದರ ಬಗ್ಗೆ ನಿಮಗೆ ಎಲ್ಲಾ ಗೊತ್ತಿದೆ. ಕರ್ನಾಟಕ ರಾಜ್ಯದ ಎಲ್ಲಾ ಕಡೆ ಮಳೆಯ ಬಹಳ ಕಡಿಮೆಯಾಯಿತು. ಸರಿಯಾದ ರೀತಿಯಲ್ಲಿ ಈ ವರ್ಷ ಮಳೆಯಾಗಲಿಲ್ಲ. ಒಂದು ತಿಂಗಳು ಒಂದುವರೆ ತಿಂಗಳುಗಳ ಕಾಲ ಮಳೆ ಬಂತು ನಂತರ ಬರಲಿಲ್ಲ. ಈಗ ಎಲ್ಲಿ ನೋಡಿದರೂ ಕೆರೆಗಳಲ್ಲಿ ನೀರಿಲ್ಲ. ನಮ್ಮ ಕೆಲವು ಸಹೋದ್ಯೋಗಿಗಳಾಗಿರತಕ್ಕಂತಹ ಪಟೇಲರ ಜವಾಬ್ದಾರಿ ಏನು ಇದೆಯೋ ಅಲ್ಲಿ ಪವರ್ ಪ್ರಾಜೆಕ್ಟ್‌ಗಳಲ್ಲಿ ಒಂದು ಕಡೆ ನೀರು ಇಲ್ಲ ಎನ್ನುವುದು ಒಂದು ಕಡೆಯಾದರೆ ನಾವು ಎಲ್ಲಿ ಹೋದರೂ ಅನೇಕ ಕಡೆ ಎಲ್ಲಾ ಕೆರೆಗಳು ಬತ್ತಿಹೋಗಿವೆ. ಕೆಲವು ಕಡೆ ಮಳೆ ಬಂತು, ಕೆರೆ ತುಂಬಲಿಲ್ಲ. ಇವತ್ತು ಕುಡಿಯುವ ನೀರಿನ ಸಮಸ್ಯೆ ಅಷ್ಟೊಂದು ಭೀಕರವಾಗಿದೆ. ಅದರ ಬಗ್ಗೆ ಮುಂದೆ ಪ್ರಸ್ತಾಪವನ್ನು ಮಾಡುತ್ತೇನೆ. ಆದರೂ ಇವತ್ತು ನಾವು ಹೋದ ಸಾರಿಗಿಂತ ಆಹಾರದ ಉತ್ಪಾದನೆಯಲ್ಲಿ ಸ್ವಲ್ಪ ಮಟ್ಟಿಗೆ ಪ್ರಗತಿಯನ್ನು ಸಾಧಿಸಲಿಕ್ಕೆ ಕಾರಣ, ತಮಗೆಲ್ಲ ಗೊತ್ತಿದೆ ನಾವು ಚುನಾವಣಾ ಕಾಲದಲ್ಲಿ ಈ ರಾಜ್ಯದ ರೈತರಿಗೆ ಒಂದು ಮಾತನ್ನು ಕೊಟ್ಟಿದ್ದೇವೆ. ಅದು ಏನೆಂದರೆ ನಿಮ್ಮ ಸಾಲದ ಮೇಲೆ ಇರತಕ್ಕಂಥಹ ಬಡ್ಡಿಯನ್ನು ನಾವು ತೆಗೆದು ಹಾಕುತ್ತೇವೆಂದು. ಅದು ನಾನು ಯಾರು ಇದನ್ನು ಅನ್ಯಥಾ ಭಾವನೆಯನ್ನು ಮಾಡಿಕೊಳ್ಳಬೇಕಾಗಿಲ್ಲ. ನಾವು ಅಧಿಕಾರವನ್ನು ಪಡೆಕೊಂಡಂತಹ ಕಾಲದಲ್ಲಿ ಹಣಕಾಸಿನ ಪರಿಸ್ಥಿತಿ ಏನಿತ್ತು ಎನ್ನತಕ್ಕಂಥದ್ದನ್ನು ಮತ್ತೊಮ್ಮೆ ವಿಶ್ಲೇಷಣೆ ಮಾಡಬೇಕಾದುದು ನನಗೆ ಅವಶ್ಯಕತೆ ಇಲ್ಲ. ಅದು ನನಗೆ ಅಪ್ರಕೃತ. ಅಂತಹ ಸನ್ನಿವೇಶದಲ್ಲಿ ಕೊಟ್ಟಂತಹ ಮಾತನ್ನು ಉಳಿಸಿಕೊಳ್ಳಬೇಕು ಎನ್ನುವ ಒಂದೇ ಕಾರಣಕೋಸ್ಕರವಾಗಿ ಹೋರಾಟವನ್ನು ಮಾಡಿದ್ದೇವೆ 136 ಕೋಟಿ ರೂಪಾಯಿಗಳನ್ನು ನಾವು ಇವತ್ತು ಮರುಪಾವತಿ ಮಾಡಬೇಕಾಗಿ ಬಂತು. ಅಂದರೆ ಕೇಂದ್ರ ಸರ್ಕಾರದ ನೀತಿ ಅದು. ಅದರ ಬಗ್ಗೆ ನಾನು ನಮಗೋಸ್ಕರವಾಗಿ ಕಠಿಣವಾದಂತಹ ನಿಲುವನ್ನು ತೆಗೆದುಕೊಂಡರು ಎಂದು ಹೇಳುವುದಕ್ಕೆ ಬದಲಾಗಿ ಕೇಂದ್ರ ಸರ್ಕಾರ ತನ್ನ ನೀತಿಯನ್ನು ಹೇಳಿ ಈ ರೀತಿಯಾಗಿ ಬಡ್ಡಿಯನ್ನು ವಜಾ ಮಾಡತಕ್ಕಂಥದ್ದು, ಮನ್ನಾ ಮಾಡತಕ್ಕಂಥದ್ದು ಸರಿಯಾದುದು ಅಲ್ಲವೆಂದು ನಿರ್ಣಯವನ್ನು ಮಾಡಿದ ಮೇಲೆ ನಾನು ಮತ್ತೆ ಪ್ರಧಾನಮಂತ್ರಿಗಳನ್ನು ಮತ್ತು ಹಣಕಾಸಿನ ಮಂತ್ರಿಗಳನ್ನು ನಾನು ಭೇಟಿ ಮಾಡಿ, ಅವರ ಜೊತೆಯಲ್ಲಿ ಇದು ಒಂದು ಸಾರಿಯಾದರೂ ನೀವು ನಮಗೆ ರಿಯಾಯಿತಿಯನ್ನು ಕೊಡಬೇಕು ನಾಬರ್ಡ್‌ನಿಂದ ಹಣವನ್ನು ತೆಗೆದುಕೊಡಬೇಕು ಇಲ್ಲ ಎಂದರೆ ನಮ್ಮ ರೈತರಿಗೆ ಕಷ್ಟವಾಗುತ್ತದೆ ಎನ್ನುವಂತಹ ಒಂದು ವಾದವನ್ನು ಅವರ ಮುಂದೆ ಮಂಡನೆಯನ್ನು ಮಾಡಿದ ಮೇಲೆ, ನಮಗೆ ಅಧರ ಸಫಲತೆ ಸಿಕ್ಕಿದ್ದರಿಂದ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕೆಂದರೆ 1995-96ರಲ್ಲಿ ನಮ್ಮ ರಾಜ್ಯ ರೈತರಿಗೆ ಕೊಟ್ಟಂಥದ್ದು 510 ಕೋಟಿ ರೂಪಾಯಿಗಳು ರೈತರಿಗೆ ಅದು ಅಲ್ಪವಧಿಯ ಸಾಲವಾಗಿರಬಹುದು, ಧೀರ್ಘಾವಧಿಯ ಸಾಲವಾಗಿರಬಹುದು, ಅಥವಾ ಮಧ್ಯಮವಧಿಯ ಸಾಲವಾಗಿರಬಹುದು ಅದು ರೆಕಾರ್ಡ್‌ಬ್ರೇಕ್ ಆಗಿದೆ ಎಂದು ಹೇಳಲಿಕ್ಕೆ ಇಚ್ಛೆಯನ್ನು ಪಡುತ್ತೇನೆ. 510 ಕೋಟಿ ರೂಪಾಯಿಗಳನ್ನು ರೈತರಿಗೆ ಸಾಲವನ್ನು ಕೊಟ್ಟಿದ್ದೇವೆ. ಅದೇ ರೀತಿಯಾಗಿ ಹಿಂದಿನ ವರ್ಷದ ಲೆಕ್ಕವನ್ನು ತೆಗೆದುಕೊಳ್ಳುವುದಾದರೆ 1994-95ರಲ್ಲಿ 328 ಕೋಟಿ ರೂಪಾಯಿಗಳು, 1993-94ರಲ್ಲಿ 239 ಕೋಟಿ ರೂಪಾಯಿಗಳು. ಅದರಿಂದ ಈ ಸರ್ಕಾರದ ಉದ್ದೇಶ ರೈತರ ಸಮುದಾಯಕ್ಕೆ ಶಕ್ತಿಯನ್ನು ಕೊಡಬೇಕು ಎನ್ನತಕ್ಕಂಥದ್ದಕ್ಕೆ ನಾನು ಏನೇನು ವಿಷಯಗಳನ್ನು

ಹೇಳಿಕೊಂಡು ಬಂದೆ. ಇದರಿಂದ ಬಹುಶಃ ವಸ್ತುಸ್ಥಿತಿ ಏನು ಅಧಿಕಾರಕ್ಕೆ ಬಂದ ಮೇಲೆ ಯಾವ ರೀತಿಯಾಗಿ ಅಧಿಕಾರವನ್ನು ನಡೆಸಿಕೊಂಡು ಬಂದಿದೆ ಎನ್ನತಕ್ಕಂಥದ್ದು ಇದರ ಸಾಧನೆ ಅಥವಾ ಇದರಲ್ಲಿ ನಾವು ಏನು ಯಶಸ್ಸಿಯನ್ನು ಕಂಡಿದ್ದೇವೆ ಎನ್ನತಕ್ಕಂಥದ್ದರ ಬಗ್ಗೆ ಈ ಸದನದ ಮುಖೇನ ಸನ್ಮಾನ್ಯ ಗೌರವಾನ್ವಿತ ಸದಸ್ಯರುಗಳ ಮುಂದೆ ಇಡತಕ್ಕಂತಹ ಸನ್ನಿವೇಶದಿಂದ ಮತ್ತು ರಾಜ್ಯದ ಜನತೆಗೆ ತಿಳಿಸಲಿಕ್ಕೆ ಇಚ್ಛೆಯನ್ನು ಪಡುತ್ತೇನೆ. ಮತ್ತು ಸುಮಾರು During 1995 the NABARD has enhanced the refinance limit from Rs.200 crores to Rs. 250 crores so far as co-operative credit is concerned. ಇದರ ಜೊತೆಗೆ ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕು ಎಂದರೆ ಕೋ-ಆಪರೇಟಿವ್ ಸೊಸೈಟಿಗಳು ಯಾವ ಯಾವು ಅನಾರೋಗ್ಯಕರವಾಗಿದ್ದವೋ ಅವುಗಳನ್ನು ಸ್ವಲ್ಪಮಟ್ಟಿಗೆ ಆರೋಗ್ಯಕರವಾದಂತಹ ಪರಿಸ್ಥಿತಿಗೆ ತರುವುದಕ್ಕೆ ಆರ್ಥಿಕ ಒಂದು ನೆರವನ್ನು ತೆಗೆದುಕೊಳ್ಳಲಿಕ್ಕೆ ಒಂದು ರೀ ಸ್ಟಕ್ಚರ್ ಮಾಡತಕ್ಕಂತಹ ಕೋ ಆಪರೇಟಿವ್ ಸೊಸೈಟಿಗಳದು ಅದನ್ನು ಕೂಡ ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆ. ಪ್ರತಿಯೊಂದು ಕ್ಷೇತ್ರದಲ್ಲೂ 50-50 ಕಿ.ಮೀ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿ ಮೊದಲನೇ ಹಂತದಲ್ಲಿ 10-10 ಕಿ.ಮೀ. ರಸ್ತೆಗಳನ್ನು ಬರುವ ಮಾರ್ಚಿ 31ರೊಳಗೆ ಆಸ್ಫಾಲ್ಟ್ ಮಾಡಬೇಕೆಂದು ತೀರ್ಮಾನ ಮಾಡಿ; ಒಟ್ಟು ರಾಜ್ಯದಲ್ಲಿರತಕ್ಕ 22 ಸಾವಿರ ಹಳ್ಳಿಗಳಿಗೆ 50 ಸಾವಿರ ಕಿ.ಮೀ. ರಸ್ತೆಗಳನ್ನು ಕೇವಲ ಹಳ್ಳಿಗಳಿಗೆ ಮಾತ್ರ ಅನ್ವಯಿಸುವಂತೆ, ನಮ್ಮ ಮಾರ್ಕೆಟ್ ಯಾರ್ಡನಲ್ಲಿ ಮಾರಾಟ ಮಾಡತಕ್ಕ ಕಮಾಡಿಟೀಸ್ ಮೇಲೆ 1 ಪರ್ಸೆಂಟ್ ಟ್ಯಾಕ್ಸನ್ನು ಹೆಚ್ಚುಮಾಡಿ ಈ ಮೂಲಕ ನಮಗೆ ಸುಮಾರು 120 ಕೋಟಿ ರೂ. ಹೆಚ್ಚು ಆದಾಯ ಬರಬಹುದೆಂಬ ಅಭಿಪ್ರಾಯವನ್ನು ಇಲಾಖೆಯವರು ಕೊಟ್ಟಿದ್ದಾರೆ. ಮುಂದಿನ 4 ವರ್ಷಗಳಲ್ಲಿ ಎಲ್ಲಾ ಹಳ್ಳಿಗಳಿಗೂ ಡಾಂಬರ್ ರಸ್ತೆಯನ್ನು ಮಾಡಬೇಕೆಂಬ ಒಂದು ಕಾರ್ಯಕ್ರಮವನ್ನೂ ಕೂಡ ಅಳವಡಿಸಿಕೊಂಡಿದ್ದೇವೆ.

ಇನ್ನೊಂದು ಮಾತನ್ನು ಹೇಳುವುದಾದರೆ, ನಿನ್ನೆಯ ದಿವಸ ಮಾನ್ಯ ಹಣಕಾಸಿನ ಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯನವರು ಬಜೆಟನ್ನು ಮಂಡಿಸಿದ ಸಂದರ್ಭದಲ್ಲಿ, ಖಾಸಗಿ ಲಾರಿಗಳು, ಟೆಂಪೋ, ಟ್ರಕಗಳನ್ನು ಓಡಿಸುವವರು ಏನಾದರೂ ಅಪಘಾತದಲ್ಲಿ ಮಡಿದರೆ ಅವರ ಕುಟುಂಬದವರಿಗೆ 50 ಸಾವಿರ ರೂ.ನಂತೆ ಕೊಡಬೇಕೆಂದು “ಅಪಘಾತದ ನಿಧಿ” ಎಂದು ಏನು ಮಾಡಿದ್ದಾರೆ ಅದೇ ರೀತಿ ರೈತನೂ ಕೂಡ ತಾನು ಬೆಳೆದಂಥ ಬೆಳೆಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಬರತಕ್ಕ ಸಂದರ್ಭದಲ್ಲಿ ದಾರಿ ಮಧ್ಯದಲ್ಲಿ ಲಾರಿಗಳು ರಸ್ತೆಗಳನ್ನು ಭಾರಿ ವೇಗವಾಗಿ ಹೋಗುವಾಗ ಆ ಎತ್ತಿನ ಗಾಡಿಗಳಿಗೆ ಡಿಕ್ಕಿ ಹೊಡೆದಾಗ, ಎತ್ತುಗಳೂ ಸಾಯುತ್ತವೆ, ಅದೇರೀತಿ ಆ ಗಾಡಿಯಲ್ಲಿ ಹೋಗುತ್ತಿರುವಂಥ ರೈತನೂ ಕೂಡ ಸಾಯುತ್ತಾನೆ. ಇಂಥ ಹಲವಾರು ಘಟನೆಗಳನ್ನು ನಾವು ಪ್ರತಿದಿನ ನೋಡುತ್ತಿದ್ದೇವೆ. ಈ ಕಾರಣವನ್ನು ಗಮನದಲ್ಲಿಟ್ಟುಕೊಂಡು ಯಾವನೇ ರೈತ ತಾನು ಬೆಳೆದಂಥ ಬೆಳೆಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಬರತಕ್ಕ ಕಾಲದಲ್ಲಾಗಲೀ ಅಥವಾ ಮಾರಿಕೊಂಡು ವಾಪಸು ಹೋಗುವಂಥ ಕಾಲದಲ್ಲಾಗಲಿ, ಈ ರೀತಿ ದಾರಿಯ ಮಧ್ಯದಲ್ಲಿ ಅಪಘಾತಕ್ಕೆ ಈಡಾಗಿ ತೀರಿಕೊಂಡರೆ 25 ಸಾವಿರ

ರೂ.ನಂತ ಕೊಡಬೇಕೆಂದು ಅಪಘಾತದ ನಿಧಿಯನ್ನು ಕೂಡ ಪ್ರಾರಂಭಿಸಲೂ ನಾವು ನಿರ್ಣಯವನ್ನು ತೆಗದುಕೊಂಡಿದ್ದೇವೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಮ್ಮ ಎಲ್ಲ ವಿಷಯಗಳನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. The performance of this Government is very negligible, there is no performance ಈ ಸರ್ಕಾರ ಏನೇನೂ ಕೆಲಸಮಾಡಿಲ್ಲ ಎನ್ನತಕ್ಕಂಥ ಮಾತುಗಳನ್ನು ಹೇಳಿದ್ದಾರೆ. ಸ್ವಾಭಾವಿಕವಾದ ರಚನಾತ್ಮಕವಾದ ಟೀಕೆಗಳು ಬರಲೇಬೇಕಾಗುತ್ತದೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನಾವು ಏನು ಮಾಡಿದ್ದೇವೆ ಎಂಬುದನ್ನು ಹೇಳದೇ ಹೋದರೆ ತಪ್ಪಾಗುತ್ತದೆ; ಅಥವಾ ಸಾರ್ವಜನಿಕರ ಮನಸ್ಸಿನಲ್ಲಿ ಒಂದು ಸಂಶಯ ಮೂಡುವುದಕ್ಕೆ ಅವಕಾಶವಾಗುತ್ತದೆಂಬ ಕಾರಣದಿಂದ ಈ ಕೆಲವು ವಿಷಯಗಳನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ಹಿಂದೆ ಬಡವರಿಗೆ, ರಿಯಾಯಿತಿ ದರದಲ್ಲಿ ಅಕ್ಕಿಯನ್ನು ಕೊಡುವಂಥ ಒಂದು ಕಾರ್ಯಕ್ರಮವನ್ನು ಆಗಿನ ಮುಖ್ಯ ಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗ್ಡೆಯವರ ಕಾಲದಲ್ಲಿ ಜಾರಿಗೆ ತಂದಿದ್ದರೋ ಅದನ್ನು ನಾವು ಪುನಃ ಜಾರಿಗೆ ತಂದಿದ್ದೇವೆ. ಈ ದಿಸೆಯಲ್ಲಿ ನಮಗೆ ಬರತಕ್ಕ ಫೈನಾನ್ಷಿಯಲ್ ಬರ್ಡನ್ ಸುಮಾರು 220 ಕೋಟಿ ರೂ.ಗಳು. ಇದರ ಜೊತೆಗೆ ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇನ್ನೂ ಒಂದು ನಿರ್ಣಯವನ್ನು ತೆಗೆದುಕೊಂಡು ಈ ನಗರ ಪ್ರದೇಶದಲ್ಲಿ ಯಾರು ಬಡವರಿದ್ದಾರೆ, ಅವರಿಗೂ ಕೂಡ ಈ ರಿಯಾಯಿತಿ ವ್ಯವಸ್ಥೆಯನ್ನು ವಿಸ್ತರಣೆ ಮಾಡಬೇಕೆಂದು ಮಾಡಿದ್ದರೆ ಪರಿಣಾಮದಿಂದ ಸುಮಾರು 250 ಕೋಟಿ ರೂ.ಗಳ ಸಬ್ಸಿಡಿ ಹಣವನ್ನು ಕೇವಲ ಇದೊಂದೇ ಬಾಬಿಗೆ ಕೊಡಬೇಕಾಗಿದೆ. 15-2-96ಕ್ಕೆ ಎನ್ಯುಮರೇಷನನ್ನು ಮುಗಿಸುವುದಾಗಿ ಹೇಳಿದ್ದಾರೆ. ಬರುವ ಏಪ್ರಿಲ್ 1ನೇ ತಾರೀಖಿನಿಂದ ಈ ನಗರಪ್ರದೇಶದಲ್ಲಿರತಕ್ಕ ಬಡ ಜನರಿಗೂ ಈ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ನಿರ್ಣಯ ಮಾಡಿದ್ದೇವೆ. ಅದು ಸ್ಲಂನಲ್ಲಿರುವವರು ಇರಬಹುದು, ನೋಟಿಫೈಡ್ ಏರಿಯಾದಲ್ಲಿರುವವರು ಇರಬಹುದು, ಯಾರು ನಗರಪ್ರದೇಶದಲ್ಲಿರತಕ್ಕ ಬಡಜನರು ಯಾರಿದ್ದಾರೆ, ಅವರು ಯಾವುದೇ ಜಾಗದಲ್ಲಿ, ಯಾವುದೇ ವರ್ಗಕ್ಕೆ ಸೇರಿರಲಿ, ನಾವು ಏನು ಆದಾಯ ಮಿತಿಯನ್ನು ನಿಗದಿ ಮಾಡಿದ್ದೇವೆ, ಈ ವ್ಯಾಪ್ತಿಯಲ್ಲಿ ಬರತಕ್ಕವರೆಲ್ಲರಿಗೂ ಈ ಸವಲತ್ತನ್ನು ಒದಗಿಸಬೇಕೆಂಬ ಉದ್ದೇಶ ಹೊಂದಿದ್ದೇವೆ. ಇದರಲ್ಲಿ ನಗರ ಅಥವಾ ಹಳ್ಳಿ ಎಂಬ ಭೇದಭಾವ ಇರಬಾರದೆಂಬ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಈ ವ್ಯವಸ್ಥೆಯಲ್ಲಿ ದೋಷಗಳಿವೆ. ದೋಷ ಇಲ್ಲವೆಂದು ನಾನು ಹೇಳುವುದಿಲ್ಲ. ಮೊನ್ನೆ ಮಾನ್ಯ ಸದಸ್ಯರಾದ ಶ್ರೀ ರಾಮರೆಡ್ಡಿಯವರು ಮಾತನಾಡುತ್ತಿದ್ದಾಗ ನಾನು ಕೇಳಿದ್ದೇನೆ, ಕಾರ್ಡುಗಳನ್ನು ವಿತರಣೆಗೆ ಮಾಡುವಂಥ ಸಂದರ್ಭದಲ್ಲಿ ಕೆಲವು ಸಣ್ಣಪುಟ್ಟ ದೋಷಗಳಿರುವುದನ್ನು ಸರಿಪಡಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ರೆವಿನ್ಯೂ ಇಲಾಖೆ ಮತ್ತು ಆಹಾರ ಇಲಾಖೆಯ ಅಧಿಕಾರಿಗಳಲ್ಲಿ ಪರಸ್ಪರ ಸಹಕಾರದ ಮನೋಭಾವ ಕುಸಿಯುತ್ತಿರುವ ಕಾರಣ ಫಲಾನುಭವಿಗಳನ್ನು ಐಡೆಂಟಿಫೈ ಮಾಡುವುದರಲ್ಲಿ ಸ್ವಲ್ಪಮಟ್ಟಿಗೆ ದೋಷಗಳಾಗಿವೆ ಎಂಬುದು ನಮಗೆ ಗೊತ್ತಿದೆ, ಆ ದೋಷವನ್ನೂ ಕೂಡ ಸರಿಪಡಿಸಲು ನಾವು ಕ್ರಮ ತೆಗೆದುಕೊಂಡಿದ್ದೇವೆ. ಬರುವ ಏಪ್ರಿಲ್ 1ನೇ ತಾರೀಖಿನಿಂದ ಹಳ್ಳಿ ಪ್ರದೇಶದಲ್ಲಾಗಲಿ, ನಗರ ಪ್ರದೇಶದಲ್ಲಾಗಲಿ ಯಾರು ಕಡುಬಡವರಿದ್ದಾರೆ

ಅವರಿಗೆ ಈ ಕಾರ್ಯಕ್ರಮ ತಲುಪುವಂತೆ ಈ ಕಾರ್ಯಕ್ರಮವನ್ನು ಜಾರಿಗೆತರುತ್ತೇವೆಂದು ಹೇಳಬಯಸುತ್ತೇನೆ. ಇದರ ಜೊತೆಗೆ ಕೇಂದ್ರಸರ್ಕಾರಕ್ಕೆ ಒತ್ತಡವನ್ನು ಕಳೆದ 1 ವರ್ಷದಿಂದ ಪದೇ ಪದೇ ಏನು ತರುತ್ತಿದ್ದೇವೆ ಇದನ್ನು ನಾನು ರಾಜಕಾರಣಕ್ಕೆ ಬೆರೆಸುವ ಅವಶ್ಯಕತೆ ಇಲ್ಲ. ಇವತ್ತು ಗುಜರಾತನಂಥ ಸಣ್ಣ ರಾಜ್ಯಕ್ಕೆ ಏನು ಸೀಮೆ ಎಣ್ಣೆಯನ್ನು ಕೇಂದ್ರದಿಂದ ಕೊಡುತ್ತಿದ್ದಾರೆ ಅದರಲ್ಲಿ ಮೂರನೇ ಒಂದು ಭಾಗದಷ್ಟೂ ಕೂಡ ನಮಗೆ ಬರುವುದಿಲ್ಲ. ನಗರ ಪ್ರದೇಶದಲ್ಲಿ 7-8 ಲೀಟರ್ ಸೀಮೆ ಎಣ್ಣೆಯನ್ನು ಕೊಡುವುದಾದರೆ ಹಳ್ಳಿಪ್ರದೇಶದಲ್ಲಿ 2-3 ಲೀಟರ್ ಕೂಡ ಕೊಡುತ್ತಿಲ್ಲ. ಹಳ್ಳಿಯ ಜನರನ್ನು ಬಹಳಷ್ಟು ಸಂಕಷ್ಟಕ್ಕೆ ಈಡುಮಾಡಿದ್ದೇವೆಂಬುದು ನನಗೆ ಗೊತ್ತಿದೆ. ನಾವು ಇಷ್ಟೆಲ್ಲಾ ಒತ್ತಾಯ ಮಾಡಿದಮೇಲೆ 5 ಸಾವಿರ ಕೆ.ಎಲ್. ಸೀಮೆ ಎಣ್ಣೆಯನ್ನು ಅಡಿಷನಲ್ ಆಗಿ ಕೊಟ್ಟಿದ್ದಾರೆ ಇದು ಹೊಳೆಯಲ್ಲಿ ಹುಣುಸೇ ಹಣ್ಣನ್ನು ಕಿವುಚಿದಂತೆ ಆಗಿದೆ ಎಂದು ಹೇಳಬಯಸುತ್ತೇನೆ. ಇನ್ನೊಂದು ಮಾತನ್ನು ಹೇಳುವುದಾದರೆ, ನಮ್ಮಲ್ಲಿ ವಿದ್ಯುತ್ ಪರಿಸ್ಥಿತಿ ಸುಧಾರಣೆ ಆದರೆ ಎ.ಇ.ಹೆಚ್. ನವರಿಗೆ ಕೊಡತಕ್ಕ ಸೀಮೆ ಎಣ್ಣೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿ, ಅದು ನಗರ ಪ್ರದೇಶದಲ್ಲಿ ಇರಬಹುದು, ಅಥವಾ ಹಳ್ಳಿ ಪ್ರದೇಶದಲ್ಲಿ ಇರಬಹುದು, ಅಲ್ಲಿ ಅವರಿಗೆ ಕಡಿಮೆ ಮಾಡಿ ಎಲ್ಲಿ ಜನಸಾಮಾನ್ಯರಿಗೆ, ಬಡವರಿಗೆ ಈ ಸೀಮೆ ಎಣ್ಣೆಯ ಅವಶ್ಯಕತೆ ಇದೆ ಅಲ್ಲಿ ಈಗ ಕೊಡುತ್ತಿರುವ ಪ್ರಮಾಣವನ್ನು ಹೆಚ್ಚುಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೇವೆ. ಬಹುಶಃ ಮುಂದಿನ ಜೂನ್ ನಂತರ ಪ್ರಕೃತಿ ಸಹಕಾರವನ್ನು ಕೊಟ್ಟು ಮಳೆ ಜಾಸ್ತಿಬಂದರೆ, ಈಗಿರತಕ್ಕ ನೀತಿಯಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆಯನ್ನು ಮಾಡಬೇಕೆಂದು ಇಚ್ಛೆ ಹೊಂದಿದ್ದೇವೆ ನಾನು ಈಗಾಗಲೇ ಹೇಳಿದಂತೆ ಗುಜರಾತ್ ರಾಜ್ಯಕ್ಕೆ ಕೊಡುತ್ತಿರುವುದರಲ್ಲಿ ಮೂರನೇ ಒಂದು ಭಾಗದಷ್ಟನ್ನೂ ಕೂಡ ನಮ್ಮ ರಾಜ್ಯಕ್ಕೆ ಕೊಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾರಣ ಏನು? ಕೇವಲ ಕರ್ನಾಟಕಕ್ಕೆ ಮಾತ್ರ ಈ ತಾರತಮ್ಯವನ್ನು ಮಾಡುತ್ತಿದ್ದಾರೋ ಅಥವಾ ಇಡೀ ದೇಶದಲ್ಲಿ ಇನ್ನೂ ಎಲ್ಲಾದರೂ ಈ ತಾರತಮ್ಯ ಇದೆಯೋ?

ಶ್ರೀ ಹೆಚ್.ಡಿ. ದೇವೇಗೌಡ : ಕಾರಣ ಏನೆಂದು ಹೇಳಲಿ. ಇದು ಬೇರೆ ಕಡೆಯಲ್ಲೂ ಇದೆ. ಆದರೆ ನಮ್ಮರಾಜ್ಯದ್ದು ಏನಿದೆ ಅದನ್ನು ಮಾತ್ರ ಹೇಳುತ್ತಿದ್ದೇನೆ. ಅಲ್ಲಿ ಯಾರಿದ್ದಾರ, ಇಲ್ಲಿ ಯಾರಿದ್ದಾರೆ ಎಂದು ರಾಜಕೀಯ ಮಾಡುವುದಕ್ಕೆ ಹೋಗದೆ ಇರತಕ್ಕ ಪರಿಸ್ಥಿತಿಯನ್ನು ನಾನು ಹೇಳುತ್ತಿದ್ದೇನೆ. ನಮಗೆ 48 ಸಾವಿರ ಕೆ.ಎಲ್. ಕೊಡಬೇಕೆಂದು ನಾವು ಕೇಳಿದೆವು. ಆದರೆ ಅಷ್ಟು ಕೊಡುವುದಕ್ಕೆ ಮಗೆ ಸಾಧ್ಯವಾಗುವುದಿಲ್ಲ ಎಂದು 5 ಸಾವಿರ ಕೆ.ಎಲ್.ನ್ನು ಹೆಚ್ಚುವರಿಯಾಗಿ ನಮಗೆ ಕೊಟ್ಟರು. ನನಗೆ 12 ಸಾವಿರ ಕೆ.ಎಲ್. ಕೊಡುವುದಕ್ಕೆ ನನಗೆ ಡಿಸ್ಕ್ರಿಚನರಿ ಪವರ್ ಇದೆ ಎಂದು ಕ್ಯಾಪ್ಟನ್ ಸತೀಶ್ ಶರ್ಮಾರವರು ಹೇಳಿ ಈಗ ಸಧ್ಯಕ್ಕೆ 5 ಸಾವಿರ ಕೆ.ಎಲ್. ಕೊಡುತ್ತೇವೆ ಎಂದು ಹೇಳಿದರು. ಇನ್ನೂ ಬೇರ ಬೇರೆ ಕಡೆಗಳಿಗೆ ನಾನು ಕೊಡಬೇಕಾಗಿದೆ ಎಂದು ಅವರವರ ಕಷ್ಟವನ್ನು ಹೇಳಿಕೊಂಡರು. ಹಿಂದೆ ಈ ಕೋಟಾವನ್ನು ನಿಗದಿ ಮಾಡುವಾಗಲೇ ತಪ್ಪು ಮಾಡಿದ್ದಾರೋ ಏನೋ, ಗೊತ್ತಿಲ್ಲ. ಯಾವ ಯಾವ ರಾಜ್ಯಕ್ಕೆ ಎಷ್ಟೆಷ್ಟು ಎಂದು ಯಾರು ನಿಗದಿ ಮಾಡಿದ್ದರೋ ಗೊತ್ತಿಲ್ಲ. ವಾಸ್ತವಾಂಶ ಏನಿದೆ ಎಂಬುದನ್ನು ನಾನು ಈ ಸದನದ

ಗಮನಕ್ಕೆ ತರಬಯಸುತ್ತೇನೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ಸರ್ಕಾರ ಬಡವರ ಪರವಾಗಿ ಇದೆಯೋ? ಶ್ರೀಮಂತರ ಪರವಾಗಿ ಇದೆಯೋ ಎಂಬುದನ್ನು ತೋರಿಸಲು ನಾವೇನು ಕಳೆದ 1 ವರ್ಷದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಾಡಿದ್ದೇವೆ ಅವನ್ನು ಮೊದಲು ಸದನದ ಗಮನಕ್ಕೆ ತಂದು ಅನಂತರ ಕೈಗಾರಿಕೆ, ನೀರಾವರಿ ಇನ್ನಿತರ ಮುಂತಾದವುಗಳ ಬಗ್ಗೆ ಹೋಗುತ್ತೇನೆ. ಮೊದಲು ವ್ಯವಸಾಯಗಾರರಿಂದಲೇ ಪ್ರಾರಂಭ ಮಾಡಿ ಯಾವ ಯಾವ ವರ್ಗಗಳಿಗೆ ಏನೇನು ಮಾಡಿದ್ದೇವೆಂಬ ಬಗ್ಗೆ ನಮ್ಮ ಕಳೆದ 1 ವರ್ಷದ ಸಾಧನೆ ಏನೆಂಬುದನ್ನು ಸದನಕ್ಕೆ ತಿಳಿಸುವುದಕ್ಕೆ ಪ್ರಯತ್ನಮಾಡಿದ್ದೇನೆ.

ಇನ್ನು ಸೋಷಿಯಲ್ ವೆಲ್‌ಫೇರ್ ಬಗ್ಗೆ ಹೇಳುವುದಾದರೆ, ನನ್ನ ಸ್ನೇಹಿತರಾದಂಥ ಮಾನ್ಯ ಜಿಗಜಿಣಗಿಯವರು ಇಲ್ಲೇ ಕುಳಿತಿದ್ದಾರೆ, ನಾವು ಬಹಳ ಪ್ರಾಮುಖ್ಯವಾಗಿ ಆದ್ಯತೆಯನ್ನು ಕೊಟ್ಟಿರತಕ್ಕದ್ದು ಎಂದರೆ ವಿದ್ಯಾಭ್ಯಾಸ ನೀರಾವರಿ ಮತ್ತು ವಸತಿಗೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛಿಸುತ್ತೇನೆ.

12.10 ಪಿ.ಎಂ.

ಕಾರಣ ಇಷ್ಟೆ, ಬೇರೆ ಬೇರೆ ಭಾಗಗಳಲ್ಲಿ ದುಡ್ಡು ಸೋರಿ ಹೋಗತಕ್ಕದ್ದು ಏನಿದೆ, ಇದನ್ನೆಲ್ಲಾ ಕ್ರೋಢೀಕರಿಸಿ ಮೂರು ವಿಷಯಗಳಿಗೆ ಪ್ರಾಧಾನ್ಯತೆ ಕೊಟ್ಟು ಒಂದು ಅವರಿಗೆ ಸಾಮಾನ್ಯವಾಗಿ ಸಿಗಬೇಕಾದ, ಭೂಮಿಯಲ್ಲಿರತಕ್ಕ ಜಲ ಸಿಗುತ್ತಿಲ್ಲ ಅದು ನನಗೆ ಗೊತ್ತಿದೆ. ಆದ್ದರಿಂದ ಭೂಗರ್ಭದಲ್ಲಿರತಕ್ಕ ಜಲವನ್ ತೆಗೆದು ಗಂಗಾ ಕಲ್ಯಾಣ ಯೋಜನೆಯಲ್ಲಿ ಅವರಿಗೆ ಜಲವನ್ನು ಒದಗಿಸುವುದಕ್ಕೆ 20 ಕೋಟಿ ರೂಪಾಯಿ ಹಣವನ್ನು ಇವತ್ತು ಈ ಒಂದು ಬಾಬಗೆ ಒದಗಿಸತಕ್ಕ ಪ್ರಯತ್ನ ಮಾಡಿದ್ದೇವೆಂದು ಹೇಳುತ್ತೇನೆ. ಇದೇ ಸಂದರ್ಭದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಐದು ಕೋಟಿ ರೂಪಾಯಿ ಹಣವನ್ನು ಒದಗಿಸುತ್ತಿದ್ದೇವೆ. With in mind, we have started Ganga Kalyan project this year itself. We will be spending Rs. crores for providing irrigational facilities on community basis to the lands of the scheduled castes and scheduled tribes. Work has already started. ಇದು ಒಂದು. ಇದರ ಜೊತೆಗೆ with an investment of Rs. 10,000/- to Rs. 20,000/- we are able to irrigate and acres of land and also provide maintenance for a period of 5 years. ಇದು ಸರ್ಕಾರದ ಗುರಿ. ನಾವು ಅಪ್ಪರ್ ಕೃಷ್ಣಾ, ಘಟಪ್ರಭ, ಮಲಪ್ರಭ, ಭಾಗಗಳಲ್ಲಿ ಒಂದೊಂದು ಎಕರೆಗೆ ಒಂದೂವರೆ ಲಕ್ಷ, ಒಂದೂ ಮುಕ್ಕಾಲು ಲಕ್ಷ ಖರ್ಚು ಮಾಡುವ ಬದಲಾಗಿ ಪರಿಶಿಷ್ಟ ಸಮಾಜದ ವರ್ಗಕ್ಕೆ ಹತ್ತು, ಹದಿನೈದು ಇಪ್ಪತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಭೂಗರ್ಭದಲ್ಲಿರತಕ್ಕ ನೀರು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದು ನನ್ನ ಕಟು ಅನುಭವ. ಹಿಂದೆ ನಾನು ನೀರಾವರಿ ಮಂತ್ರಿಯಾಗಿದ್ದಾಗ ಏನು ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದೆ, ಅದು ಸ್ವಲ್ಪ ಮಟ್ಟಿಗೆ ಜಿಲ್ಲಾ ಪಂಚಾಯಿತಿಗೆ ಹೋದ ಪರಿಣಾಮವಾಗಿ ಸ್ಥಗಿತವಾಗಿತ್ತು. ಅದಕ್ಕೆ ಈ ಸಾರಿ 20 ಕೋಟಿ ರೂಪಾಯಿಗಳನ್ನು ಒದಗಿಸಿ, ನಾವು ಈ ಕಾರ್ಯಕ್ರಮವನ್ನು ಹೆಚ್ಚು ವೇಗದಲ್ಲಿ ನಡೆಸಬೇಕೆಂದು ನಿರ್ಣಯ ಮಾಡಿ ಐದು ವರ್ಷಗಳ ಕಾಲ

ಮೇಂಟೆನೆನ್ಸನ್ನು ಕೂಡ ನಾವೇ ಸರ್ಕಾರದವರು ಮಾಡುತ್ತೇವೆ. ಅವರಿಗೆ ನೀರು ಕೊಡತಕ್ಕದ್ದು ಮಾತ್ರ ನಮ್ಮ ಜವಾಬ್ದಾರಿ. ಬೆಳೆ ಇಡತಕ್ಕದ್ದು ಅವರಿಗೆ ಸೇರಿದ್ದುದು. ಈ ವರ್ಷ ಬ್ಯಾಕವರ್ಡ ಕ್ಲಾಸಗೆ ಐದು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಇರ್ರಿಗೇಷನಗೆ ಆದ್ಯತೆ ಕೊಡುವುದಾಗಿ ಹೇಳಿದೆ ಅದರ ಜೊತೆಗೆ ಶಿಕ್ಷಣಕ್ಕೂ ಕೂಡ ಅದೇ ರೀತಿ ಆದ್ಯತೆ ಕೊಡುತ್ತಿದ್ದೇನೆ. 1995-96ರಲ್ಲಿ ಈ ರಾಜ್ಯದಲ್ಲಿ 159 ಹಾಸ್ಟಲಗಳಿಗೆ ಮಂಜೂರಾತಿ ಕೊಟ್ಟಿದ್ದೇನೆ. ಹಾಗೆ ಮಂಜೂರಾತಿ ಕೊಟ್ಟಂತಹ ಹಾಸ್ಟೆಲ್‌ಗಳಲ್ಲಿ ಡಿಸೆಂಬರ್ ವರದಿಯ ಆಧಾರದ ಮೇಲೆ ಹೇಳುವುದಾದರೆ ಇನ್ನು ಮೂವತ್ತು ಹಾಸ್ಟೆಲಗಳನ್ನು ಮಾರ್ಚ 31ರ ಒಳಗೆ ಮುಗಿಸುವುದಕ್ಕೆ ಸಾಧ್ಯತೆ ಇದೆ ಎಂದು ಅಧಿಕಾರಿಗಳು ವರದಿ ಕೊಟ್ಟಿದ್ದಾರೆ. ಮುಂದಿನ ಜೂನ್ ಒಳಗೆ ಪರಿಶಿಷ್ಟ ವರ್ಗದ ಮಕ್ಕಳಿಗೆ ಅನುಕೂಲವಾಗತಕ್ಕ 50 ವಿದ್ಯಾರ್ಥಿ ನಿಲಯಗಳನ್ನು ಮುಗಿಸುವುದಕ್ಕೆ ಇವತ್ತು ನಾವು ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದ್ದೇವೆ ಎಂಬ ಮಾತನ್ನು ಹೇಳಿ, ತಮಗೆ ಇಷ್ಟು ಬೃಹತ್ ಪ್ರಮಾಣದಲ್ಲಿ ನಾವು ರೂಪಿಸಿ ಕೊಂಡಿರತಕ್ಕ ಕಾರ್ಯಕ್ರಮ ಹಿಂದೆ ಎಂದೂ ಇದ್ದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಇದನ್ನು ಟೀಕೆಗೋಸ್ಕರ ಹೇಳಿದೆ ಎಂದು ಯಾರೂ ಭಾವಿಸಿಕೊಳ್ಳಬೇಕಾಗಿಲ್ಲ. ಸಭೆಗೆ ವಿಷಯವನ್ನು ಮನನ ಮಾಡಿಕೊಂಡಬೇಕೆಂದು ಹೇಳುತ್ತಿದ್ದೇನೆ. In 1990-91 Government had only sanctioned 29 hostels. In 1991-92 Government has sanctioned 57 hostels. During 92-93 Government has sanctioned 95 hostels. In 93-94 and 94-95 no hostels were sanctioned. During the current year.

ಇದಕ್ಕೆ ನಾನು ಬ್ಯಾಕಗ್ರೌಂಡ್ ಎಲ್ಲಾ ಕೊಡುತ್ತಿದ್ದೇನೆ. ಇದು ಒಂದೇ ವರ್ಷ ನಾವು 159 ಹಾಸ್ಟೆಲಗಳನ್ನು ಮಂಜೂರು ಮಾಡಿ ಅದರಲ್ಲಿ ಮಾರ್ಚ 31ರ ಒಳಗೆ 100 ಹಾಸ್ಟೆಲ್‌ಗಳನ್ನು ಪೂರ್ಣ ಮಾಡಿ, ಜೂನ್ ಅಂತ್ಯದೊಳಗೆ ಉಳಿದ 59ನ್ನು ಮುಗಿಸಬೇಕೆಂದು ಇಲಾಖಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಆ ಕಾರ್ಯವನ್ನು ಸಂಪೂರ್ಣವಾಗಿ ಮಾಡುತ್ತೇನೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪರಿಶಿಷ್ಟ ಸಮಾಜದ ಮಕ್ಕಳಿಗೆ ಬರೀ ಹಾಸ್ಟೆಲ್ ಕೊಡಿಸತಕ್ಕದ್ದು ಅಷ್ಟೇ ಅಲ್ಲ. ಪಿ.ಜಿ. ಹಾಸ್ಟೆಲ್ ವಿದ್ಯಾರ್ಥಿಗಳಿಗೆ 300 ರೂಪಾಯಿಗಳನ್ನು ಏನು ಊಟದ ಭತ್ಯೆ ಎಂದು ಕೊಡುತ್ತಿದ್ದರು ಅದನ್ನು ನಾವು 400 ರೂಪಾಯಿ ಮಾಡಿದ್ದೇವೆ. ಅದು ಜೊತೆಗೆ ಟಿ.ಸಿ.ಹೆಚ್ ವಿದ್ಯಾರ್ಥಿಗಳಿಗೆ 250 ರೂಪಾಯಿ ಕೊಡುತ್ತಿದ್ದುದನ್ನು 400 ರೂಪಾಯಿಗಳಿಗೆ ಏರಿಸಿದ್ದೇವೆ. Ph.D. boys being given the honorarium from Rs.8,00/- to Rs. 10.000/- ಹೀಗೆ ಹಲವಾರು ಸವಲತ್ತುಗಳನ್ನು ಕೊಡುವುದರ ಮೂಲಕ ಈ ಸರ್ಕಾರ ವಿದ್ಯಾಭ್ಯಾಸಕ್ಕೆ ಮತ್ತು ನೀರಾವರಿಗೆ ವಿಶೇಷ ಗಮನ ಕೊಟ್ಟಿದೆ ಇವೆರಡನ್ನೂ ನಾನು ಸೂಕ್ಷ್ಮವಾಗಿ ತಮ್ಮ ಮುಂದೆ ಇಟ್ಟಿದ್ದೇನೆ. ಬಹುಶಃ ತಮಗೆ ಅರ್ಥವಾಗುತ್ತದೆ, ಈ ದಿಕ್ಕಿನಲ್ಲಿ ನಾವು ಹೆಚ್ಚು ಆಸ್ತೆ ವಹಿಸಿದ್ದೇವೆ ಎಂದು ಹೇಳುತ್ತೇನೆ. ಇದರ ಜೊತೆಗೆ ಮನೆಗಳನ್ನು ಕಟ್ಟಿತಕ್ಕದ್ದು, ಪೆಡ್ಮ್ಯಾಲ್ ಕ್ಯಾಸ್ಟ ಒಂದಕ್ಕೆ ಈ ವರ್ಷ ಕಟ್ಟಿತಕ್ಕ ಮನೆಗಳ ಸಂಖ್ಯೆ 70,000 ಮನೆಗಳನ್ನು ಕಟ್ಟುವುದಕ್ಕೆ ನಿರ್ಣಯ ಮಾಡಿದ್ದೇವೆ. 70,000 ಮನೆಗಳಿಗೆ, 80 ಕೋಟಿ ರೂಪಾಯಿ ಹಣ

ಒದಗಿಸಿದ್ದೇವೆ. ಇದರಲ್ಲಿ ಇಂದಿರಾ ಆವಾಸ್ ಯೋಜನೆ, ಅಂಬೇಡ್ಕರ್ ಯೋಜನೆ ಮತ್ತೊಂದು ಆಶ್ರಯ ಯೋಜನೆ. ಈ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ನೆರವು ಬರುವುದಿಲ್ಲ. ಇದನ್ನು ನಾನು ಸ್ಪಷ್ಟೀಕರಣ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರದ ಹಣವನ್ನು ನಾವು ಬಳಸುತ್ತಿದ್ದೇವೆ ಎಂಬ ಅಭಿಪ್ರಾಯ ಬರಬಾರದೆಂಬ ಕಾರಣದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಕಡೆ ಆಶ್ರಯಕ್ಕೂ ಇಲ್ಲ, ಆ ಕಡೆ ಅಂಬೇಡ್ಕರ್ ಯೋಜನೆಗೂ ಇಲ್ಲ, ಇದರ ಬಗ್ಗೆ ವಸ್ತು ಸ್ಥಿತಿಯನ್ನು ಸಭೆಯ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಷೆಡ್ಯೂಲ್ ಬ್ರೇಕ್ ಅಪ್ ಕೊಡುತ್ತೇನೆ, ಆ ಮೇಲೆ ತಾವು ಹೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಸಹಾಯಕ್ಕೆ ಯಾರು ಬೇಕು?

ಶ್ರೀ ಹೆಚ್.ಡಿ. ದೇವೇಗೌಡ : ನಮ್ಮ ಸಹಾಯಕ್ಕೆ ನೀರೇ ಇದ್ದೀರಲ್ಲಾ. I am prepared to send the entire details. ಹೇಗೆ ಫಂಡಿಂಗ್ ವ್ಯವಸ್ಥೆ ಇದೆ ಎಂಬುದನ್ನು ತಮಗೆ ಕಳುಹಿಸಿ ಕೊಡುತ್ತೇನೆ. ಇದರಲ್ಲಿ ಮುಚ್ಚು ಮರೆ ಏನೂ ಇಲ್ಲ. ಸಭೆಯಲ್ಲಿ ಹೇಳದ ಇನ್ನೆಲ್ಲಿ ಹೇಳುವುದಕ್ಕೆ ಆಗುತ್ತದೆ. ಈ ವರ್ಷ 70,000 ಮನೆಗಳನ್ನು ಪೂರ್ಣ ಮಾಡುವುದರ ಜೊತೆಗೆ, 80 ಕೋಟಿ ರೂಪಾಯಿ ಹಣವನ್ನು ಈ ಒಂದು ಬಾಬಿಗೆ ಷೆಡ್ಯೂಲ್ ಕ್ಯಾಸ್ಟ್‌ಗಾಗಿ ಕೊಡುತ್ತಿದ್ದೇನೆ. ಇನ್ನೊಂದು ಮಾತನ್ನು ಹೇಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿರತಕ್ಕ ಷೆಡ್ಯೂಲ್ ಕ್ಯಾಸ್ಟ ಪಾಪ್ಯುಲೇಷನ್ ಒಂದು ಕೋಟಿ ಎಂದು ಲೆಕ್ಕ ತೆಗೆದಿದ್ದಾರೆ. 1993-94ರಲ್ಲಿ ಆ ಲೆಕ್ಕ ತೆಗೆದಿದ್ದೀರಿ. ಈಗ ನಾವು ಮನೆಗಳನ್ನು ಮಂಜೂರಾತಿ ಮಾಡಲು ನನ್ನ ಗೆಳೆಯ ಶ್ರೀ ರಾಮರೆಡ್ಡಿಯವರು ಒಂದು ಲಕ್ಷದ 20,000 ಮನೆಗಳನ್ನು ಕಟ್ಟಬೇಕೆಂಬ ನಿರ್ಣಯ ತೆಗೆದು ಕೊಂಡಿದ್ದಾರೆ. ಅದರಲ್ಲಿ 70,000 ಮನೆಗಳು ಇದಕ್ಕೆ ಹೋದರೆ, 60 ಪರ್ಸೆಂಟ್ ಆಯಿತು. ಒಂದು ಲಕ್ಷ 20,000 ಮನೆಗಳನ್ನು 60 ಪರ್ಸೆಂಟ್ ಅಂದರ 60% of the total houses we are going to build this year will go to SCs/STs. 15 ರಿಂದ 20 ಪರ್ಸೆಂಟ್ ಎಂದು ಹೇಳುತ್ತೇನೆ. ಅದಕ್ಕೆ ರಾಮಕೃಷ್ಣರವರು ಹಿರಿಯ ಸದಸ್ಯರಿದ್ದಾರೆ. 60 ಪರ್ಸೆಂಟ್ of the total houses that we are going to construct this year. will go to Scheduled Castes. ನೀರು ಒಂದು ಕೆಲಸ ಮಾಡಿ ಪ್ರತಿ ಜಿಲ್ಲೆಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂದು ಮಾಹಿತಿ ತರಿಸಿಕೊಳ್ಳಿ. ನೀವು ಬೆಂಗಳೂರು ಗ್ರಾಮಾಂತರ ಜಿಲ್ಲೆ ಬಗ್ಗೆ ಹೇಳುತ್ತಿದ್ದೀರಿ, ನೀವೇ ಹೋಗಿ ಫೋನ್ ಮಾಡಿ ಕೇಳಿ. ದುಡ್ಡು ನಮ್ಮ ಹತ್ತಿರ ಇಲ್ಲ. ಹಣ ಬಿಡುಗಡೆ ಮಾಡಿದ್ದೇವೆಯೋ ಇಲ್ಲವೋ ಎಂಬುದಕ್ಕೆ ನೀರು ಅವರಿಗೇ ಕೇಳಿ. ಒಂದು ಏನಾಗಿದೆ ಎಂದರೆ ಕೆಲವು ಕಡೆ ನಾವು ಫಲಾನುಭವಿಗಳನ್ನು ಗುರುತಿಸಿದ್ದೇವೆ. ಸೈಟುಗಳನ್ನು ಕೊಂಡುಕೊಳ್ಳಬೇಕಾದರೆ, ಹಿಂದೆ ದೇವರಾಜ ಅರಸರವರ ಕಾಲದಿಂದ ಈ ಕಾರ್ಯಕ್ರಮ ಪ್ರಾರಂಭವಾಗಿ ಗೋಮಾಳ ಜಮೀನುಗಳಲ್ಲಿ ಹೆಚ್ಚಿನ ಜನರು ಸೈಟ್ ಮಾಡಿದರು. ಎರಡು ಕಲ್ಲು ಹಾಕಿ ನಾವು ಮೂರು ಲಕ್ಷ ಸೈಟ್ ಹಂಚಿದ್ದೇವೆ, ಐದು ಲಕ್ಷ ಸೈಟ್ ಹಂಚಿದ್ದೇವೆ ಎಂದು ಹೇಳುವುದಕ್ಕೆ ಬದಲಾಗಿ ನಾವು ಪ್ರತಿಯೊಂದು ಕಡೆ ಒಂದೊಂದು ಎಕರೆಗೆ 40-50 ಸಾವಿರ ರೂಪಾಯಿ ಹಣ ಕೊಟ್ಟು ಜಮೀನು ಕೊಂಡು ಕೊಂಡು ಸೈಟುಗಳನ್ನು ಹಂಚಬೇಕಾಗಿದೆ. ಅದಕ್ಕೋಸ್ಕರ 20 ಕೋಟಿ ರೂಪಾಯಿ ಹಣ ತೆಗೆದಿಟ್ಟಿದ್ದೇವೆ. 20 ಕೋಟಿ ರೂಪಾಯಿ ಹಣವನ್ನು ಬರೀ ಸೈಟುಗಳನ್ನು ಕೊಂಡುಕೊಳ್ಳುವುದಕ್ಕೆ

ಕೊಡುವುದರ ಜೊತೆಗೆ, ನಿವೇಶನ ರಹಿತರಿಗೆಲ್ಲಾ ಸಮಾನವಾಗಿ ಹಂಚಿದ್ದೇವೆ. ಅವರು ಈ ರಾಜ್ಯದಲ್ಲಿರತಕ್ಕ ಹಮಾಲಿಗಳಿರಬಹುದು, ದೇವದಾಸಿಗಳಿರಬಹುದು, ಯಾವ್ಯಾವ ವರ್ಗಗಳಿಗೆ ಎಂದು ಮತ್ತಷ್ಟು ಈ ಸಭೆಯಲ್ಲಿ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. 518 ಕೋಟಿ ರೂಪಾಯಿಗಳನ್ನು ಇದೊಂದು ಬಾಬಿಗೆ ನಾವು ಏನು ಇಟ್ಟಿದ್ದೇವೆ, ಅದರಲ್ಲಿ 80 ಕೋಟಿ ರೂಪಾಯಿಗಳನ್ನು ಷೆಡ್ಯೂಲ್ ಕ್ಯಾಸ್ಟ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಕೊಡುತ್ತಿದ್ದೇವೆ. ಅದರಲ್ಲಿ 70,000 ಮನೆಗಳನ್ನು ಕಟ್ಟತಕ್ಕ ಯೋಜನೆ ಇದೆ. ಇದನ್ನು ಈ ವರ್ಷದ ಕಾರ್ಯಕ್ರಮದಲ್ಲಿ ಮಾಡಬೇಕೆಂದು ನಿರ್ಣಯ ಮಾಡಿ ಹುಡ್ಕೋದಿಂದ 248-250 ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದೇವೆ, ನಾವು ಆ ಸಾಲ ತೀರಿಸಬೇಕು. ನಮಗೆ ಅವರು ಪುಕ್ಕಟೆ ಏನೂ ಕೊಟ್ಟಿಲ್ಲ. ಆ ಸಾಲವನ್ನು ವಾಪಸ್ ಕೊಡಬೇಕಾಗುತ್ತದೆ. ಪ್ರತಿಯೊಂದು ತಾಲ್ಲೂಕಿಗೆ ಹೆಚ್ಚು ಕಡಿಮೆ ಒಂದೊಂದು ಸಾವಿರ ಸೈಟ್ ಕೊಟ್ಟಿದ್ದೇವೆ. 900,1,000, ಕೆಲವು ಕಡೆ 1,100 ಹೀಗೆ ಕೊಟ್ಟಿದ್ದೇವೆ. ಒಂದೊಂದು ತಾಲ್ಲೂಕಿಗೆ 500-550-600 ಮನೆಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಹೀಗೆ ಫಲಾನುಭವಿಗಳನ್ನು ಗುರುತಿಸತಕ್ಕದ್ದರಲ್ಲಿ ಜಿಜ್ಞಾಸೆ ಆಯಿತು. ಜಿಜ್ಞಾಸೆ ಆದುದ್ದು ನಿಜ.

ಅಧ್ಯಕ್ಷರು : ಶ್ರೀ ವಿಜಯಶಂಕರ್‌ರವರೆ ಚೈನ್ ಆಫ್ ಟಾಕ್ ಬ್ರೇಕ್ ಆಗುತ್ತದೆ. ಅವರು ಮಾತನಾಡುವ ಸಂದರ್ಭದಲ್ಲಿ ನೋಟ್ ಮಾಡಿಕೊಳ್ಳಿ. ಆ ಮೇಲೆ ಕ್ಲಾರಿಫಿಕೇಷನ್‌ಗೆ ಅವಕಾಶವಿರುತ್ತದೆ. ಉತ್ತರ ಆದ ಮೇಲೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಸಿ.ಹೆಚ್. ವಿಜಯಶಂಕರ್ : ತಾವು ಏನು ಹೇಳುತ್ತಿದ್ದೀರಿ, ಅದು ತುಂಬಾ ಸಂತೋಷದ ವಿಚಾರ. ಆದರೆ ಅದರ ಜೊತೆಯಲ್ಲಿ ಜೀತ ವಿಮುಕ್ತಿ ಬಗ್ಗೆ ದೇವರಾಜಅರಸರವರು ಏನು ನಿಲುವು ತೆಗೆದುಕೊಂಡರು, ಆಗ ಜೀತ ವಿಮುಕ್ತಿಗೊಂಡ ಜನರು ಏನಿದ್ದಾರೆ ಅವರಿಗೆ ವಿಶೇಷವಾಗಿ ಇದರಲ್ಲಿ ಇಂತಿಷ್ಟು ಎಂದು ಐದು ಪರ್ಸೆಂಟ್ ಕೊಡಿ. ಹತ್ತು ಪರ್ಸೆಂಟ್, 15 ಪರ್ಸೆಂಟ್ ಕೊಡಿ ಎಂದು ಹೇಳುವುದಿಲ್ಲ. ಕನಿಷ್ಠ ಐದು ಪರ್ಸೆಂಟ್ ಸೇರಿಸಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ : ನಾನು ಜೀತ ವಿಮುಕ್ತಿ, ಜೀತ ವಿಮುಕ್ತಿ ಇಲ್ಲದೆ ಇರತಕ್ಕವರು ಎಂದು ಅವರ ಬಗ್ಗೆ ವಿಂಗಡಣೆ ಮಾಡುವುದಕ್ಕೆ ಹೋಗಿಲ್ಲ. ನಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡು ಒಂದು ತಿಂಗಳಲ್ಲಿ ಒಂದು ಸುತ್ತೋಲೆಯನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿ, ಈ ರಾಜ್ಯದಲ್ಲಿ ಎಷ್ಟು ಕುಟುಂಬಗಳಿಗೆ ಮನೆ ಇಲ್ಲ, ಎಷ್ಟು ಕುಟುಂಬಗಳಿಗೆ ನಿವೇಶನ ಇಲ್ಲವೆಂಬುದನ್ನು ಪತ್ತೆ ಹಚ್ಚಬೇಕೆಂದು ನಾವೇ ಒಂದು ಫಾರ್ಮೇಟ್ ಹಾಕಿ ಕೊಟ್ಟ ಮೇಲೆ 19 ಲಕ್ಷ ಕುಟುಂಬಗಳಿಗೆ ಮನೆ ಇಲ್ಲ, ನಿವೇಶನ ಇಲ್ಲ ಎಂದು ವರದಿ ಬಂತು. ಅದರ ಆಧಾರದ ಮೇಲೆ ಇವತ್ತು ಫಲಾನುಭವಿಗಳನ್ನು ಗುರುತಿಸತಕ್ಕ ಕಾಲದಲ್ಲಿ ನಾವು ಆ ಒಂದು ಗೈಡಲೈನ್ ಒಳಗೆಯಲ್ಲಿ ಹೋಗಬೇಕೆಂದು ಹೇಳಿದ್ದೇವೆ. ಇದರ ಜೊತೆಗೆ ಇನ್ನೊಂದು ಮಾತು ಹೇಳಬೇಕಾಗುತ್ತದೆ. ಇದರಲ್ಲಿ ಸ್ವಲ್ಪ ವಿಳಂಬವಾಯಿತು, ನಮಗೆ ದುಡ್ಡಿನ ಪ್ರಶ್ನೆ ಅಲ್ಲ. ಹುಡ್ಕೋದಲ್ಲಿ ನಮಗೆ ಹಣ ಕೊಟ್ಟಿದ್ದಾರೆ. ಇಡೀ ದೇಶದಲ್ಲಿ ಹೆಚ್ಚು ಹಣ ಹುಡ್ಕೋದಿಂದ ತಗೆದು ಕೊಳ್ಳತಕ್ಕದ್ದು ಎಂದರೆ ಕರ್ನಾಟಕ ಸರ್ಕಾರ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ

ಪಡುತ್ತೇನೆ. ಇದು ಒಂದು ವರ್ಷದಲ್ಲಿ ನಮ್ಮ ಸಾಧನೆ ಎನ್ನುವುದಕ್ಕೆ ಬದಲಾಗಿ ನಾವು ಏನು ಕಾರ್ಯ ಮಾಡಿದ್ದೇವೆಂದು ಹೇಳುತ್ತೇನೆ. ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನನಗೆ ಪ್ರೋಟೊಕಾಲ್, ಸ್ಟೇಟಸ್ ಇಲ್ಲ. ನಾನು ಯಾರ ಮನೆಗೆ ಬೇಕಾದರೂ ಹೋಗುತ್ತೇನೆ. ಕೆಲಸ ಆಗಬೇಕೆಂದರೆ ಪ್ರತಿಯೊಬ್ಬರ ಮನೆಗೂ ಹೋಗುತ್ತೇನೆ. ಹುಡ್ಕೋ ಛೇರ್ಮನರ ಮನೆಗೆ ಬೇಕಾದರೂ ಹೋಗುತ್ತೇನೆ. ನಮ್ಮ ಕೆಲಸವಾಗಬೇಕು, ನಮ್ಮ ಜನಗಳಿಗೆ ಒಳ್ಳೆಯದಾಗಬೇಕು. This highest know component today ಕರ್ನಾಟಕದಲ್ಲಿ ಇವತ್ತು ನಾವು ಹುಡ್ಕೋದಿಂದ ಸಾಲ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತು. ಅಪಾರ್ಟ್ ನ್ಯಾಷನಲಗೇಮ್ಸ್‌ಗೆ ತಮ್ಮ ಕಾಲದಲ್ಲಿ ಬಂದಂತಹ ಹಣವನ್ನು ನಾನು ಇದರಲ್ಲಿ ಸೇರಿಸಿಲ್ಲ. ಬಡವರಿಗೆ ಮನೆ ಕಟ್ಟಿಕೊಡುವುದಕ್ಕೆ ಏನು ಸಾಲವನ್ನು ತೆಗೆದುಕೊಂಡಿದ್ದೇವೆಯೋ, ಈ ರಾಷ್ಟ್ರದಲ್ಲಿ ನಾವು ಹೈಯೆಸ್ಟ್ ತೆಗೆದುಕೊಂಡಿದ್ದೇವೆ. ನಾನು ಇದನ್ನು ಇಲ್ಲಿಗೆ ನಿಲ್ಲಿಸುವುದಿಲ್ಲ ಇದಕ್ಕೋಸ್ಕರ ನಾನು ಒಂದು ಪ್ರತ್ಯೇಕ ಇಲಾಖೆಯನ್ನು ನೇಮಕ ಮಾಡಿದ್ದೇನೆ. ಏತಕ್ಕೆ ನಾನು ಈ ಕೆಲಸ ಮಾಡಿದ್ದೇನೆಂದರೆ, ನನ್ನ ಗುರಿಯಿದೆ. ಇದು ನಮ್ಮ ಸರ್ಕಾರದ ಗುರಿ. ಇದರಲ್ಲಿ ನಾನು ಹಿಂದಮುಂದೆ ಮಾತನಾಡುವುದ್ಕಕೆ ಹೋಗುವುದಿಲ್ಲ, ನಮ್ಮ ಸರ್ಕಾರದ ಗುರಿಯಿದೆ. ನಾವು ನಿಯಮಿತ ಕಾಲದಲ್ಲಿ ಈ ಕಾರ್ಯಕ್ರಮವನ್ನು ಮುಗಿಸಬೇಕೆಂದು ಹೇಳಿ ನಮ್ಮ ಆಸೆಯನ್ನಿಟ್ಟುಕೊಂಡಿದ್ದೇವೆ. ಆದಕ್ಕೋಸ್ಕರ ನಾವು ಬೇರೆ ಬೇರೆ ರೂಪದಲ್ಲಿ ಹಣವನ್ನು ಸಂಗ್ರಹಣೆ ಮಾಡಿ, ಈ ರಾಜ್ಯದಲ್ಲಿ ಮುಂದಿನ ನಾಲ್ಕು ವರ್ಷದಲ್ಲಿ ಹತ್ತೊಂಭತ್ತುವರೆ ಲಕ್ಷ ಜನ ಸೈಟಿಲ್ಲವೆನ್ನುವವರು ಯಾರಿದ್ದಾರೋ ಸೈಟಿಲ್ಲ, ನಿವೇಶನವಿಲ್ಲ, ಮನೆಯಿಲ್ಲವೆನ್ನತಕ್ಕ ಈ ವರ್ಗಕ್ಕೆ ಕನಿಷ್ಟ ಒಂದು ಸೈಟನ್ನಾದರೂ ಕೊಂಡುಕೋಡೋಣವೆಂದರೆ, ಒಂದೊಂದು ಸೈಟಿಗೆ 6 ಸಾವಿರ 7 ಸಾವಿರ ಇವತ್ತು ನಮ್ಮ ಮೈಮೇಲೆ ಬರುತ್ತಿದೆ. ಪುಕಸಟ್ಟೆ ಎಲ್ಲೋ ಕುಳಿತುಕೊಂಡು ಗೋಮಾಳವಿದ್ದರೆ, ಅದು ಅಳತೆ ಮಾಡಿ ಕೊಡುವ ಪ್ರಶ್ನೆಯಲ್ಲ ಇದು. ಅದು ಏನೇ ಆಗಲಿ ಇದಕ್ಕೆ 4 ಸಾವಿರ ಕೋಟಿ ಆಗಬಹುದೆಂದು ಅಂದಾಜು ಮಾಡಿದ್ದೇವೆ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿ, ಕೋರಮಂಗಲದಲ್ಲಿ ಸುಟ್ಟುಹೋಗಿದ್ದ 160 ಮನೆಗಳನ್ನು ಇದುವರೆಗೂ ಕಟ್ಟಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ನೀವು ಹೇಳಿದ್ದ ಮಾಡುತ್ತೇವೆ. ತಾವು ಕೆಲಸ ಸಲಹೆಗಳನ್ನು ಕೊಟ್ಟಿದ್ದೀರಿ, ನಾವು ಅವರು ಒಟ್ಟಿಗೆ ಹೋಗುತ್ತೇವೆ. ಈವೊಂದು ಕಾರ್ಯಕ್ರಮಕ್ಕೆ ಸುಮಾರು 4 ಸಾವಿರ ಕೋಟಿ ರೂಪಾಯಿ ಹಣ ಬೇಕಾಗಬಹುದು. 4 ಸಾವಿರ ಕೋಟಿ ರೂಪಾಯಿಬೇಕಾಗುತ್ತದೆಂದರೆ ಅದು ಸುಮ್ಮನೆ ಬರುವುದಿಲ್ಲ. ಹೌದು ಮೊನ್ನೆ ತಾವೊಂದು ಬಿಲ್ ಪಾಸ್ ಮಾಡಿಕೊಟ್ಟಿದ್ದೀರಿ. ಕೆಲವರಿಗೆ ಟ್ಯಾಕ್ಸ ಹಾಕಬೇಕಾಗುತ್ತದೆ. ಅಕ್ರಮವಾಗಿ ಮಾಡಿರತಕ್ಕವರಿಗೆ...

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ. ಮಾನ್ಯ ಎಲ್ಲ ಸದಸ್ಯರುಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸಭಾನಾಯಕರಾಗಿರತಕ್ಕವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕೆನ್ನುವ ಒಂದು ಸೌಜನ್ಯವನ್ನು ನೀವು ತೋರಿಸಬೇಕು. ಈಗಲೂ ಕೂಡ ಪರಸ್ಪರ ಸಂಭಾಷಣೆಗಳು ಅಲೆದಾಡುವುದು ಇವೆಲ್ಲ ಮಾಡುವುದು ಇದ್ದರೆ, ನೀವು ಏನೂ ಕಲಿತುಕೊಂಡಂತೆ

ಆಗಲಿಲ್ಲವೆಂದು ನಾನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಪ್ರತಿಪಕ್ಷದ ನಾಯಕರು ನಿಂತುಕೊಂಡಾಗ ಹೇಗಿರಬೇಕು, ಸಭಾನಾಯಕರು ನಿಂತುಕೊಂಡಾಗ ಹೇಗಿರಬೇಕು ಅವರಿಗೆ ಹೇಗೆ ಸಹಕರಿಸಬೇಕು ಹೇಗೆ ಸಂಸದೀಯ ವ್ಯವಹಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಇದನ್ನೂ ಕೂಡ ಇಲ್ಲಿ ಹೇಳಿ ಅದನ್ನು ಪತ್ರಿಕೆಯಲ್ಲಿ ಬರೆದು ಮೇಲೆ ಇರುವವರೆಲ್ಲ ನೋಡಿ ಅದು ದೇಶಕ್ಕೆಲ್ಲ ಗೊತ್ತಾಗುವಹಾಗೆ ಮಾಡುತ್ತೀರಿ.

ಶ್ರೀ ಹೆಚ್.ಡಿ. ದೇವೇಗೌಡ :ನಾನು ಈ ಮಾತನ್ನು ಮುಂದಿನ ನಾಲ್ಕು ವರ್ಷ ಎಂದು ಹೇಳಿದ್ದೆ. ದುಡ್ಡು ಹೇಗೆ ಕೂಡಿಸಬೇಕು, ದುಡ್ಡು ಕೂಡಸಲಿಕ್ಕೆ ಆಗುವುದಿಲ್ಲ. ದುಡ್ಡು ನಾವು ಹೆಚ್ಚು ಮಾಡಬೇಕಾಗುತ್ತದೆ. ಇದನ್ನು ನಾವು ಬಜೆಟಿನಲ್ಲಿ ಹೇಳಿದ್ದೇವೆ. ಬಜೆಟಿನಲ್ಲಿ ಹೇಳದಿದ್ದರೂ ಕೆಲವು ನಾವು ನಿರ್ಣಯ ಮಾಡುತ್ತೇವೆ. ಕಠಿಣವಾದ ನಿರ್ಣಯವನ್ನು ಮಾಡಬೇಕಾಗುತ್ತದೆ. ಏಕೆಂದರೆ ಬೆಂಗಳೂರಿನ ಸುತ್ತಾ ಹೊರವಲಯದಲ್ಲಿ, ಒಳಗಡೆ ನಮಗೆ ಸಿಗುವುದಿಲ್ಲ. ಮೊನ್ನೆ 43-44 ಕಟ್ಟಡಗಳಿಗೆ ಮಾತ್ರ ಈಸಭೆ ಮಂಜೂರಾತಿಯನ್ನು ಕೊಟ್ಟು, ಅದಕ್ಕೆ ಪೆನಾಲ್ಟಿ ಹಾಕತಕ್ಕಂತದಕ್ಕೆ ಶ್ರೀಮಾನ್ ಮೊಯಿಲಿಯವರು ಹೇಳಿದರು ಒಂದೂವರೆಪಟ್ಟು ನೀವು ಪೆನಾಲ್ಟಿ ಹಾಕಿಯೆಂದು ಹೇಳಿ. ನಾವು ಚರ್ಚೆಗೆ ಕುಳಿತುಕೊಂಡಂತಹ ಕಾಲದಲ್ಲಿ, ಅದರಿಂದ ಸ್ವಲ್ಪ ಹಣ ಬರಬಹುದು. ನಾನು ಇವತ್ತು ಮನಸ್ಸಿನಲ್ಲಿಟ್ಟು ಟಾಸ್ಕ ಫೋರ್ಸ್‌ಯೆಂದು ಹೇಳಿ ಬೆಂಗಳೂರಿನಲ್ಲಿ ಇವತ್ತು ಏನು ಅಕ್ರಮ ಮನೆಗಳನ್ನು ಕಟ್ಟಿದ್ದಾರೆ, ಸಣ್ಣ ಗುಡಿಸಲಲ್ಲಿರತಕ್ಕವರಿಗೆ ನಾವು ಮಾಡಿಕೊಡತಕ್ಕದ್ದು ಬೇರೆ, ರೆವಿನ್ಯೂ ಸೈಟುಗಳು ಮತ್ತೊಂದು ಮಗದೊಂದು ಅವರು ಸ್ಲಮನಲ್ಲಿರಲಿ ಬೇರೆ ಬೇರೆ ರೆವಿನ್ಯೂ ಲ್ಯಾಂಡಿನಲ್ಲಿ ಕಟ್ಟಿರಲಿ, ಹಿಂದೆ ಒಂದು ಕಾನೂನು ತಂದಿದ್ದಾರೆ. ಅದರ ಚೌಕಟ್ಟಿನಲ್ಲಿ ನಾವು ಬಡವರಿಗೆ ತೊಂದರೆ ಮಾಡುವುದು ಬೇಡ ಅವರಿಗೆಲ್ಲ ಒಂದು ನಾಮಿನಲ್ ರೇಟು ಹಾಕಿ ಅವರಿಗೆ ಕೊಡುತ್ತೇವೆ. ಆದರೆ ಇವತ್ತು ಒಂದೇ ಶಬ್ದದಲ್ಲಿ ಹೇಳುವುದಾದರೆ ಸಹಸ್ರಾರು ಮನೆಗಳು, ಮಾನ್ಯ ಯಡಿಯೂರಪ್ಪನವರೇ ಕೇಳಿದರು ಎಂದು ಕಾಣುತ್ತದೆ. ಅದು ನೀವು ಎಷ್ಟೆಂದು ನಿಖರವಾಗಿ ಹೇಳುವುದಕ್ಕಾಗುವುದಿಲ್ಲವೆಂದರು, ಅದು ಆಗುವುದಿಲ್ಲ. ಅಷ್ಟೊಂದು ಮನೆಗಳನ್ನು ಇವತ್ತು ಕಟ್ಟಿದ್ದಾರೆ. ಯಾವ್ಯಾವ ಎಕ್ಸಟೆನಷನ್ ಎಲ್ಲಿಯಾದರೂ ಹೋದರೆ ಆ ಎಕ್ಸಟಿನಷನಗಳ ಹೆಸರುಗಳು ನಮಗೆ ಗೊತ್ತಾಗುವುದಿಲ್ಲ.

ಆ ಪರಿಸ್ಥಿತಿಯಲ್ಲಿ ನಾವು ಇದ್ದೇವೆ, ನಿಮ್ಮ ಹಿಂದುಗಡೆ ಕುಳಿತಿದ್ದಾರಲ್ಲ ಅವರ ನೆರವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಬೆಂಗಳೂರು ಹೇಗೆ ಬೆಳೆದಿದೆ, ನೋಟಿಫೈಡ್ ಏರಿಯಾದಲ್ಲಿ ಏನಾಗಿದೆ, ಇವತ್ತು ಬಿಡಿಎ ಏರಿಯಾದಲ್ಲಿ ಏನಾಗಿದೆ, ಕಾರ್ಪೊರೇಷನ್ ಏರಿಯಾದಲ್ಲಿ ಏನಾಗಿದೆ, ಯಾವ ಲ್ಯಾಂಡ್, ಖಾತೆ ಯಾರ ಹೆಸರಿನಲ್ಲಿತ್ತು ಯಾರ ಹೆಸರಿಗೆ ಹೋಗಿದೆ, ಇವನ್ನು ನೋಡುವುದೇ ಇವತ್ತು ದೊಡ್ಡ ಕಷ್ಟವಿದೆ. ನನ್ನ ಅಸೆಸಮೆಂಟಿನಲ್ಲಿ ಮಾನ್ಯ ಅಧ್ಯಕ್ಷರೆ, ನನ್ನ ಸಹೋದ್ಯೋಗಿಗಳಾದ ಮಾನ್ಯ ಜಾಲಪ್ಪನವರು ಒಂದು ಪ್ರಿಲಿಮಿನರಿ ರಿಪೋರ್ಟ ತಯಾರು ಮಾಡಿಸಿದ್ದಾರೆ. ಸುಮಾರು 1850 ಎಕರೆ ಭೂಮಿ ಬೆಂಗಳೂರಿನ ಸುತ್ತಮುತ್ತ, ಅಂದರೆ ಬೆಂಗಳೂರಿನ ಹೊಂದಿಕೊಂಡಂತೆ 1850 ಎಕರೆ ಭೂಮಿ ಇವತ್ತು ಬೇರೆ ಬೇರೆಯವರ ವಶವಾಗಿದೆ. ಕೋರ್ಟ ಇವತ್ತು ಅಡ್ಡ ಬರುತ್ತಿದೆ. ನಾನು ಕೋರ್ಟನ್ನು ದೂರುತ್ತಾ ಇಲ್ಲ. ಅದನ್ನು ವೆಕೆಟ್ ಮಾಡಿ ಆಕ್ಷನ್ ಮಾಡೋಣವೆಂದರೆ ಅದರ ಮಧ್ಯೆ

ನಮ್ಮ ಸೋದರಿಯವರು ಅಲ್ಲೇ ಕುಳಿತಿದ್ದಾರೆ. ಹೀಗೆ ನನಗೆ ಇದೆಲ್ಲ ಫಜೀತಿಯಿದೆ. ಆದರೆ ನನ್ನ ಆಸೆ ಏನಿದೆ ಅಂತ ಹೇಳಿದರೆ, ಅದು ಏನೇ ಆಗಲಿ 1850 ಎಕರೆ ಭೂಮಿ ಏನಿದೆ ಅದನ್ನು ಆಕ್ಷನ್ ಮಾಡಿದರೆ ಇವತ್ತು ಕನಿಷ್ಠ ಸರ್ಕಾರಕ್ಕೆ 2 ಸಾವಿರ ಕೋಟಿ ರೂಪಾಯಿ ಬರುತ್ತದೆನ್ನುವುದು ನಮ್ಮ ಅಸೆಸಮೆಂಟ್ ಇದೆ. ನಮ್ಮ ಅಧಿಕಾರಿಗಳು ಆ ಅಭಿಪ್ರಾಯ ಕೊಟ್ಟಿದ್ದಾರೆ. ಹೀಗೆ ಯಾವುದೇ ಆಗಲೀ ಯಾವುದಾದರೂ ಸ್ವರೂಪದಲ್ಲಿ ಇವತ್ತು ಈ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸಿ ನಾಲ್ಕು ವರ್ಷದಲ್ಲಿ ಈ ರಾಜ್ಯದಲ್ಲಿ ಯಾರಿಗೆ ಮನೆಯಿಲ್ಲವೋ ಯಾರಿಗೆ ಸೈಟು ಇಲ್ಲವೋ ಅಂತಹವರಿಗೆ ಈವೊಂದು ಕಾರ್ಯಕ್ರಮವನ್ನು ಮಾಡಿ ಮುಗಿಸಬೇಕೆನ್ನುವ ಗುರಿಯನ್ನು ಈ ಸರ್ಕಾರದವರು ಇಟ್ಟುಕೊಂಡಿದ್ದೇವೆ. ಇದರೊಳಗೆ ನಿರ್ದಾಕ್ಷಿಣ್ಯವಾಗಿ ಕೆಲವು ದಿನಗಳಾದ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅದು ಏನೇ ಆಗಲಿ ನಾವು ಕೆಟ್ಟವರಾಗಲೀ ಒಳ್ಳೆಯವರಾಗಲೀ ಜನಗಳಿಂದ ದೂರು ಬರಲಿ ದೂರ ಬರದೇ ಹೋಗಲಿ ಇದಕ್ಕೆ ಮಾತ್ರ ನಿಮ್ಮ ಸಹಕಾರ ಕೇಳುತ್ತೇನೆ. ದಯಮಾಡಿ ಈ ಸಾರಿ ನಾವೆಲ್ಲರೂ ಸೇರಿ ಎಷ್ಟು ಬೆಲೆ ಎಂದರೆ ಚಿನ್ನಕ್ಕಿಂತ ಬೆಲೆ ಜಾಸ್ತಿಯಾಗಿದೆ. ಬೆಂಗಳೂರಿನಲ್ಲಿ ಒಂದೊಂದು ಎಕರೆ ಭೂಮಿ 2 ಕೋಟಿ 3 ಕೋಟಿ ಈ ಮಟ್ಟಕ್ಕೆ ಹೋಗಿದೆ ಬೆಂಗಳೂರಿನಲ್ಲಿ. ಅದು ಯಾರ್ಯಾರು ಹೇಗೆ ಮಾಡಿದ್ದಾರೆಂಬುದನ್ನು ಚರ್ಚೆ ಮಾಡುವುದು ಬೇಡ. ಸರ್ಕಾರ ಈಗಾಗಲೇ ಆ ದಿಕ್ಕಿನಲ್ಲಿ ಗುರುತಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ. 1850 ಎಕರ ಭೂಮಿಯನ್ನು ನಾವು ಗುರುತಿಸಿದ್ದೇವೆ. ಅದು ಅಷ್ಟೇ ಅಲ್ಲ. 15-20 ಕಿಲೋಮೀಟರ್ ರೌಂಡ್ ಅಬೌಟ್ ಹೋದರೆ 8 ಸಾವಿರ ಎಕರೆ ಭೂಮಿ ಅಕ್ರಮ ಮಾಡಿದ್ದಾರೆನ್ನತಕ್ಕದ್ದು ಇವತ್ತು ನನಗೆ ಒಂದು ಅನಧಿಕೃತವಾದಂತಹ ವರದಿ ನನ್ನ ಕೈಗೆ ಸಿಕ್ಕಿದೆ. ಇದರಿಂದ ಹಣವನ್ನು ರೂಢಿಸಿಕೊಳ್ಳುವುದಕ್ಕೆ ಸಾಧ್ಯವಾದ ಎಲ್ಲ ಪ್ರಯತ್ನಮಾಡಿ ಈ ನಾಲ್ಕು ವರ್ಷದಲ್ಲಿ, ಇದಕ್ಕೆ ಪ್ರತ್ಯೇಕ ಇಲಾಖೆಯನ್ನು ತೆರೆದದ್ದು ಕೇವಲ ಯಾರೋ ಒಬ್ಬ ಅಧಿಕಾರಿಯನ್ನು ಅವರನ್ನು ಕಾರ್ಯದರ್ಶಿ ಮಾಡಲಿಕ್ಕೋಸ್ಕರ ತಗೆದ ಅನ್ನತಕ್ಕದ್ದನ್ನು ಯಾರೂ ಭಾವಿಸಿಕೊಳ್ಳಬೇಕಾಗಿಲ್ಲ. ನನ್ನ ಆಸೆಯಿದೆ, ತಾಲ್ಲೂಕುಮಟ್ಟದಲ್ಲಿ ಹಿಡಿದು ಜಿಲ್ಲಾಮಟ್ಟದಿಂದ ಹಿಡಿದು ಹೌಸಿಂಗ್ ಡಿಪಾರ್ಟಮೆಂಟನ್ನೇ ಬೇರ ಮಾಡಿ ಇವತ್ತು ಈ ರಾಜ್ಯದಲ್ಲಿ ಇದಕ್ಕೆ ಒಂದು ಹೊತ್ತು ಕೊಟ್ಟು, ಹೀಗೆ 1947ನೇ ಇಸವಿಯಿಂದ ಹೇಳಿಕೊಂಡೇ ಬಂದೋ ನಾವು. ನಮ್ಮ ಸರ್ಕಾರ ಹೇಳಿದೆ ಎಲ್ಲಾ ಸರ್ಕಾರಗಳು ಹೇಳಿದೆ. ನಾವು ಬಡವರಿಗೆ ಮನೆ ಕೊಡುತ್ತೇವೆ, ಬಡವರಿಗೆ ಮನೆ ಕೊಡುತ್ತೇವೆಂದು ಹೇಳಿಕೊಂಡೇ ಬಂದಿದ್ದು. ಇದಕ್ಕೆ ಬದಲಾಗಿ ಐದು ವರ್ಷದಲ್ಲಿ ಈ ಕಾರ್ಯಕ್ರಮವನ್ನು ಮುಗಿಸಬೇಕೆಂದು ಹೇಳತಕ್ಕದ್ದು ಈ ಸರ್ಕಾರದ ಪ್ರಾಮಾಣಿಕ ಪ್ರಯತ್ನ ನಾನು ಮಾಡಲಿಕ್ಕೆ ಇಚ್ಛಿಸುತ್ತೇನೆ. ಅದಕ್ಕೋಸ್ಕರ ಹೇ 518 ಕೋಟಿ ರೂಪಾಯಿ ಯೋಜನೆಯನ್ನು ಈ ವರ್ಷ ಇದೊಂದು ಬಾಬಿಗೆ ರೂಢಿಸಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಇವತ್ತು ಆಗದೇ ಅದಕ್ಕೆ ಸಂಬಂಧಪಟ್ಟಂತಹ, ನಮ್ಮ ಕಡೆಯಿಂದ ರಿಲೀಸ್ ಆಗಬೇಕಾದ 30 ಕೋಟಿ ರಿಲೀಸ್ ಆಗಬೇಕೆಂದು ಕಾಣುತ್ತದೆ. ಅದು ಏನೇ ಇರಲಿ, ಅದನ್ನು ನಾವು ಒದಗಿಸಿಕೊಡುತ್ತೇವೆ. ಈ ಕಾರ್ಯಕ್ರಮ ಸ್ವಲ್ಪ ವಿಳಂಬವಾದುದರಿಂದ ಜೂನ್ ಜುಲೈವರೆಗೆ ಹೋಗಬಹುದು. ಫಸ್ಟ್‌ಫೇಸ್ ಪ್ರೋಗ್ರಾಮ್, ಏಕೆಂದರೆ ಭೂಮಿ ಕೊಂಡುಕೊಳ್ಳಬೇಕಾಗುತ್ತದೆ ಜಿಲ್ಲಾಧಿಕಾರಿಗಳು ಹೇಳುತ್ತಾರೆ, 50 ಸಾವಿರ ರೂಪಾಯಿಗೆ ಆಗುವುದಿಲ್ಲ ಇನ್ನು 10 ಸಾವಿರ ಜಾಸ್ತಿ ಮಾಡಬೇಕಾಗುತ್ತದೆಂದು ತಾವು

ನೆಗೋಸಿಯೇಟ್ ಮಾಡಿಯೆಂದು ಹೇಳಿದ್ದೇವೆ. ಕೆಲವು ಕಡೆ ಆ ಪ್ರಾಬ್ಲಮ್ ಇವೆ, ಕೆಲವು ಭೂಮಿ ಸಿಕ್ಕಿದೆ. ಆ ಕೆಲಸವನ್ನು ನಾವು ತ್ವರಿತಗತಿಯಿಂದ ಮಾಡಲಿಕ್ಕೆ ಇಚ್ಛಿಪಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಇನ್ನು ನಮ್ಮ ಷೆಡ್ಯೂಲ್ಡ್ ಕಾಸ್ಟ ಷಡ್ಯೂಲ್ಡ ಟ್ರೈಬ್ ಫೈನಾನ್ಸ ಕಾರ್ಪೊರೇಷನ ಏನಿದೆ, ಇವತ್ತು ಅವರ ಮುಖೇನ ವಿದ್ಯಾವಂತ ನಿರುದ್ಯೋಗಿ ನಮ್ಮ ಯುವಕರು ಯಾರಿದ್ದಾರೆ ಅವರಿಗೆ ನಾವು ಒಂದು ಸೆಲ್ಫ ಎಂಪ್ಲಾಯಿಮೆಂಟ್ ದೊರಕಿಸಿಕೊಡಬೇಕೆಂದು ಹೇಳಿ, ಅದಕ್ಕೆ ಸಂಬಂಧಪಟ್ಟ ಟ್ರೈನಿಂಗ್ ಕೊಡಬೇಕೆಂದು ಹೇಳಿ ಇದಲ್ಲ ಯೋಚನೆ ಮಾಡಿದ್ದೇವೆ. ನಾನು ಮತ್ತೊಂದು ವಿಚಾರ ಮೊದಲೇ ಹೇಳಿದೆ, ಕೆಎಂಎಫ಼ನಿಂದ ಸುಮಾರು 40 ಕೋಟಿ ರೂಪಾಯಿ ಹಸುಗಳನ್ನು ಸಾಕಾಣಿಕೆ ಮಾಡುವುವಕ್ಕೆ ಕೊಡಬೇಕೆಂದು ಇದ್ದೇವೆ ಅದು ಅಲ್ಲದೆ, ಈವೊಂದು ಷೆಡ್ಯೂಲ್ಡ ಕಾಸ್ಟ್ ಷೆಡ್ಯುಲ್ಡ ಟ್ರೈಬ್ ಕಾರ್ಪೊರೇಷನನಿಂದ ಈ ವರ್ಷ 30 ಕೋಟಿ ಹಣವನ್ನು ನಾವು ಅವರಿಗೆ ಕೊಟ್ಟು ವಿವಿಧವಾಗಿರತಕ್ಕ ಅವರು ರಿಕ್ಷಾ ತೆಗೆದುಕೊಳ್ಳುವುದು ಇರಬಹುದು. ಟ್ಯಾಕ್ಸಿ ಓಡಿಸತಕ್ಕದ್ದು ಇರಬಹುದು, ಡ್ರೈಕ್ಲೀನಿಂಗ್ ಶಾಪ್ ಇಟ್ಟುಕೊಳ್ಳತಕ್ಕದ್ದು ಇರಬಹುದು ಹೀಗೆ ಕೆಲವು ಪ್ರೋಗ್ರಾಮ್ಸನ್ನು ನಾವು ಕೊಟ್ಟಿದ್ದೇವೆ. ಅದಕ್ಕೆ 30 ಕೋಟಿ ರೂಪಾಯಿ ಹಣವನ್ನು ಕೊಡಬೇಕೆಂದು ನಿರ್ಣಯ ಮಾಡಿ ಅದನ್ನು ಒದಗಿಸಿದ್ದೇವೆ. ಹಿಂದಿನ ವರ್ಷ ಖರ್ಚು ಮಾಡಿರತಕ್ಕದ್ದು ನಾನು ಸುಮ್ಮನೆ ಸೂಕ್ಷ್ಮವಾಗಿ ತಮ್ಮ ಗಮನಕ್ಕೆ ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ. 1993-94ರಲ್ಲಿ 17 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. 1994-95ರಲ್ಲಿ 19 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಈ ವರ್ಷ ನಾವು ಖರ್ಚು ಮಾಡಬೇಕೆಂದಿರುವುದು 30 ಕೋಟಿ. ಏಕೆಂದರೆ ಹಳ್ಳಿಯಲ್ಲಿರತಕ್ಕ ಜನರ ಬವಣೆ ಒಂದು ಕಡೆ, ಇನ್ನೊಂದು ಪರಿಶಿಷ್ಟ ಸಮಾಜಕ್ಕೆ ಸೇರಿದಂತಹ ಯುವಕರು ಇರಬಹುದು, ವಿದ್ಯಾವಂತ ನಿರುದ್ಯೋಗಿಗಳು ಇರಬಹುದು ಅವರ ಹೌಸಿಂಗ್ ಪ್ರಾಬ್ಲಮ್ ಇರಬಹುದು. ಇದು ಒಂದು ಕಡೆ, ಮತ್ತೊಂದು ಕಡೆ ನಗರಪ್ರದೇಶದಲ್ಲಿ ಸ್ಲಮ್ಸನಲ್ಲಿ ವಾಸಮಾಡತಕ್ಕವರಿಗೆ ಅಲ್ಲಿ ಜಾತಿಯಿಲ್ಲ. ಬ್ರಾಹ್ಮಣರು ಸ್ಲಮನಲ್ಲಿದ್ದಾರೆ. ನಾನು ಹೋಗಿ ನೋಡಿದ್ದೇನೆ, ಅನೇಕ ಕಡೆ ಲಿಂಗಾಯಿತರು ಇದ್ದಾರೆ ಬ್ರಾಹ್ಮಣರು ಇದ್ದಾರೆ. ಬಿಜಾಪುರ ಬೆಳಗಾಂನಿಂದ ಬಂದಂತಹ ಜನ ಇಲ್ಲಿ ಮನೆ ಕಟ್ಟುವುದಕ್ಕೆ ಕೂಲಿ ಇಟ್ಟಿಗೆ ಹೊರುವುದಕ್ಕೆ ಬಂದಿರುವವರೆಲ್ಲ ಸ್ಲಂಮನಲ್ಲಿದ್ದಾರೆ. ಅವರುಗಳಲ್ಲೆ ಸ್ಲಂಮನಲ್ಲಿ ಹೋಗಿ ಸೇರಿಕೊಂಡಿದ್ದಾರೆ. ರೈಲ್ವೆಸ್ಟೇಷನ್ ಹತ್ತಿರ ನೋಡಬಹುದು ನಾವು ಎಲ್ಲಿಬೇಕಾದರೂ ನೋಡಬಹುದು. ಜಾತಿಯಿಲ್ಲ ಸ್ಲಮನಲ್ಲಿರುವವರಿಗೆ. ಎಲ್ಲಾ ಜಾತಿಯವರು ಇದ್ದಾರೆ. ಆದ್ದರಿಂದ ಸ್ಲಮನಲ್ಲಿರತಕ್ಕವರಿಗೆ ನಾವು ಮನೆ ಕಟ್ಟಿ ಕೊಡತಕ್ಕದ್ದು ನಾವು ಈ ಎಲ್ಲಾ ಕಾರ್ಯಕ್ರಮಗಳನ್ನು ಏನು ಅಳವಡಿಸಿಕೊಂಡಿದ್ದೇವೆ, ಸೂಕ್ಷ್ಮವಾಗಿ ನಾನು ನಿಮಗೆ ಹೇಳಿದ್ದೇನೆ. ಇನ್ನು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೇವೆ. ನನ್ನ ಮನಸ್ಸಿನಲ್ಲಿ ಆಸೆ ಇದೆ. ಎಲ್ಲಾ ಕಾರ್ಯಕ್ರಮಗಳ ಒಂದು ಪಟ್ಟಿಯನ್ನು ಮಾಡಿ ಎಲ್ಲಾ ಸದಸ್ಯರುಗಳಿಗೂ ಹಂಚಬೇಕು ಅನ್ನತಕ್ಕದ್ದು ನನ್ನ ಮನಸ್ಸಿನಲ್ಲಿದೆ. ಇದನ್ನು ನಾವೆಲ್ಲ ಒಟ್ಟು ಸೇರಿ ಒಂದು ಸಹಕಾರದಿಂದ ಮಾಡಬೇಕಾಗುತ್ತದೆ. ಮೊನ್ನೆ ಈ ಮನೆಯಲ್ಲಿ ಒಂದು ಬಿಲ್ ಪಾಸ್ ಮಾಡಬೇಕಾದರ ನಿಮ್ಮ ಸಹಕಾರ ಇಲ್ಲದಿದ್ದರೆ, ಶಾರ್ಪ ರೀಯಾಕ್ಷನ್ ಮಾಡಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಅದನ್ನು ಮಾಡಬೇಕೆಂದು

ಮಾನಸಿಕವಾಗಿ ನಿಮ್ಮ ಮನಸ್ಸಿನಲ್ಲಿದ್ದರೆ ಅದನ್ನು ನೀವೇ ಸಲಹೆ ಮಾಡಿದಿರಿ ಸ್ವಲ್ಪ ಟ್ಯಾಕ್ಸ ಹಾಕಿಯೆಂದು. ಒಂದೂವರೆ ಪಟ್ಟು ಆಪೊತ್ತಿನ ಮಾರ್ಕೆಟ್ ಬೆಲೆ ಏನಿತ್ತು ಅದನ್ನು ಹಾಕಬೇಕೆಂದು ಹೇಳಿದಾಗ, ನಾನು ತಿಳಿದುಕೊಂಡೆ ಅವರಲ್ಲೇನು ನಮ್ಮಲ್ಲಿ ವ್ಯತ್ಯಾಸವಿದೆಯೆಂದು ಹೇಳಿ ನಾನು ವಾದ ಮಾಡಲಿಕ್ಕೆ ಹೋಗುವುದಿಲ್ಲ. ನಮ್ಮೆಲ್ಲರ ಆಸೆಯಿದೆ ಆದರೂ ಸ್ವಲ್ಪಮಟ್ಟಿಗೆ ಅಲ್ಲೊಂದು ಕಾರ್ಯಕ್ರಮವನ್ನು ರೂಪಿಸಿಕೊಳ್ಳುವಾಗ ಆಧ್ಯತೆ ಪ್ರಶ್ನೆ ಬರುತ್ತದೆ.

ಯಾವುದಕ್ಕೆ ಹೆಚ್ಚು ಆದ್ಯತೆ ಕೊಡಬೇಕು, ಯಾವುದಕ್ಕೆ ಹೆಚ್ಚು ಆದ್ಯತೆ ಕೊಡಬಾರದು ಅಂತ. ಗ್ರೂಪ್ ಹೌಸಿಂಗ್ ಸ್ಕೀಮನ್ನು ಜಾರಿಗೆ ತೆಗೆದುಕೊಂಡುಬಂದಿದ್ದೇವೆ. ಅದರ ಬಗ್ಗೆ ಮುಂದೆ ನಾನು ಹೇಳುತ್ತೇನೆ. ಸನ್ಮಾನ್ಯ ಮೊಯಿಲಿಯವರು ಒಂದು ಇಶ್ಯೂವನ್ನು ರೈಸ್ ಮಾಡಿದ್ದಾರೆ. ಲಾಯಿಡಾನೋ, ಲೋಯಿಡಾನೋ ಎನ್ನುವುದರ ಬಗ್ಗೆ ಕೊನೆಗೆ ನಾನು ಬರುತ್ತೇನೆ. ನಾನು ಎಲ್ಲ ಡಾಕ್ಯುಮೆಂಟ್ಸನ್ನು ಬೇಕಾದರೆ ನಿಮ್ಮ ಮುಂದೆ ಇಡುತ್ತೇನೆ. ಇದರಲ್ಲಿ ಯಾವುದೂ ಮುಚ್ಚುಮರೆ ಇಟ್ಟುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಸನ್ಮಾನ್ಯ ಅಧ್ಯಕ್ಷರೇ, ಕಾರ್ಯಕ್ರಮವನ್ನು ನಾವು ಇಷ್ಟೊಂದು ಬೃಹತದಾಕಾರವಾಗಿ ಮಾಡತಕ್ಕಂಥ, ಕಾಲವಲ್ಲಿ ನಿಜ, I took a decision. ಇವತ್ತು ಏನು ಕೇಂದ್ರಸರ್ಕಾರದ ಹೊಸ ಅರ್ಥ ನೀತಿಯಿಂದ ಖಾಸಗಿಬಂಡವಾಳವನ್ನು ನಮ್ಮದೇಶದಲ್ಲಿ ಹೂಡತಕ್ಕಂಥ, ವ್ಯವಸ್ಥೆ ಯಾವಾಗ ಬಂತು, ಅದನ್ನು ನಾನು ವಿರೋಧಮಾಡಿ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಇದು ನನ್ನ ಕೈಯಲ್ಲಿ ಇಲ್ಲ. ಇವತ್ತು ನಾನು ದೇವೇಗೌಡ, ಇಲ್ಲಿ ಕೂಗಿ ಕೂಗಿ ನೀವು ವಿದೇಶಿ ಬಂಡವಾಳ ತರತಕ್ಕಂಥಾದ್ದು ಸರಿಯಲ್ಲ, ಇವರನ್ನು ನೀವು ಹೊರಗೋಡಿಸಬೇಕು, ಈಸ್ಟ ಇಂಡಿಯಾ ಕಂಪನಿ ಬಂದು ಹೇಗೆ ಈ ದೇಶವನ್ನು ಆಳಿದರು ಅಂತ, ನಾನು ಕೂಗಿದರೂ ಈ ಸಮಸ್ಯೆ ಬಗೆಹರಿಸುವುದಿಲ್ಲ ಎಂಬುದು ನನಗೆ ಗೊತ್ತಿದೆ. ಯಾರೋ ಒಬ್ಬರೂಕೂಗಬಹುದು, ಬೇಡವೆಂದು ನಾನು ಹೇಳುವುದಿಲ್ಲ. To what extent I should make use of that opportunity to see that my people should get the benefit, that is my concern. ಆದ್ದರಿಂದ ಅದಕ್ಕಾಗಿ ಮಾನ್ಯ ಅಧ್ಯಕ್ಷರೇ, ಒಂದು ನಿರ್ಣಯಕ್ಕೆ ಬಂದೆ. ಈ ರಾಜ್ಯದಲ್ಲಿ ಖಾಸಗಿ ಬಂಡವಾಳ ಹೂಡತಕ್ಕಂಥವರು ಯಾರೇ ಬರಲಿ, ಅವರಿಗೆ ಮನೆ ಕೊಡತಕ್ಕಂಥಾದ್ದಕ್ಕೆ ಬೆಂಗಳೂರು ಇರಬಹುದು, ಮೈಸೂರು ಇರಬಹುದು, ಹಾಸನ ಇರಬಹುದು ಮಂಗಳೂರು ಇರಬಹುದು ಎಲ್ಲೆಲ್ಲಿ ಇಂಡಸ್ಟ್ರಿಯಲ್ ಗ್ರೋಥಗೆ ಅವಕಾಶ ಮಾಡಿಕೊಟ್ಟಿದ್ದೇವೋ, ಅಲ್ಲಿ ಮನೆಗಳ ಸಮಸ್ಯೆ ಸಾಮಾನ್ಯವಾಗಿ ಬಂದೇ ಬರುತ್ತದೆ ಎನ್ನತಕ್ಕಂಥದ್ದರ ಮುಂದಾಲೋಚನೆ ಯಿಂದಲೇ ನಾವು ಇವತ್ತು ಆ ಯೋಜನೆಯನ್ನು ರೂಪಿಸಿಕೊಂಡಿದ್ದೇವೆ. ಅದಕ್ಕೇ ಗ್ರೂಪ್ ಹೌಸಿಂಗ್ ಸ್ಕೀಮನ್ನು ಕೊಡತಕ್ಕಂಥ ಕ್ಯಾಬಿನೇಟ್ ಡಿಸಿಶಿನ್ ಅನ್ನು ತೆಗೆದುಕೊಂಡಿದ್ದೇವೆ. ಗ್ರೂಪ್ ಹೌಸಿಂಗ್ ಸ್ಕೀಮನ್ನು ಕೊಡತಕ್ಕಂಥ ಕಾಲದಲ್ಲಿ ಅದು ಯಾವ ಸ್ವರೂಪದಲ್ಲಿ ಇರಬೇಕೆಂದು ನಾವು ನಿರ್ಣಯ ಮಾಡಿದ್ದೇವೆ. ಭೂಸುಧಾರಣೆ ಕಾಯದೆ ಬಗ್ಗೆ ನಾನು ಮುಂದೆ ವಿವರವಾಗಿ ಹೇಳುತ್ತೇನೆ. ಅದನ್ನು ಅಲ್ಲಿಗೇ ನಿಲ್ಲಿಸುತ್ತೇನೆ. ಏಕೆಂದರೆ ಬೆಂಗಳೂರಿನಲ್ಲಿರತಕ್ಕಂಥ ಸ್ಲಮ್ಸು ಅಷ್ಟೇ ಅಲ್ಲ, ಇಡೀ ರಾಜ್ಯದಲ್ಲಿ 1600 ಸ್ಲಮಗ ಇವೆ. ನಮ್ಮ ಬಜೆಟ್ ಪ್ರಾವಿಜನ್ ಇರುವಂಥಾದ್ದು ಮೂರು ಕೋಟಿ. ನಾವು ಇಟ್ಟಿದ್ದೂ ಅಷ್ಟೆ, ನೀವು ಇಟ್ಟಿದ್ದೂ ಅಷ್ಟೆ. ಹಿಂದೆ ಅರ್ಬನ್ ಡೆವಲಪಮೆಂಟ್ ಮಿನಿಸ್ಟರ್ ಆಗಿದ್ದ ಶ್ರೀ ಧರ್ಮಸಿಂಗ್

ಅವರು ಅಲ್ಲೇ ಇದ್ದಾರೆ. ಮೂರು ಕೋಟಿ ಕೊಟ್ಟು 1600 ಸ್ಲಮ್‌ಗಳಲ್ಲಿ, 4 ಲಕ್ಷ ಕುಟುಂಬಗಳು ಇವೆಯೆಂದು ವರದಿ ನನ್ನಲ್ಲಿ ಇದೆ. ಇದು ಇನ್ನೆಷ್ಟು ವರ್ಷ ಅವರು ಹಾಗೆಯೇ ಇರಬೇಕು? ನಾವು ಏನಾದರೂ- Let us take a collective decision. It is not as if, ಏನೋ ನಮಗೆ ಇವರ ಕಿರೀಟ ಬೇಕು ಅಂತ ಅಲ್ಲ. ಮುಂಬೈಗೆ ಹೋದರೆ ಫುಟ್‌ಪಾತ್‌ನೊಳಗೆ ವಾಸ ಮಾಡುವವರು ಇದ್ದಾರೆ. ಅಲ್ಲೇ ಮಕ್ಕಳು, ಮರಿ ಹುಟ್ಟಿಕೊಳ್ಳುತ್ತದೆ, ಅಲ್ಲೇಸಾಯುತ್ತಾರೆ. ಅವರ ನ್ಯೂಟ್ರಿಶನ್ ಏನಿದೆ ಇದರ ಬಗ್ಗೆನಾವು ದೊಡ್ಡ ಚರ್ಚೆ ಮಾಡಬೇಕಾದ ಅವಶ್ಯಕತೆ ಇಲ್ಲ. ಈ ದೇಶದ ಪರಿಸ್ಥಿತಿ ಹೀಗೆ ಇರತಕ್ಕಂಥ ಕಾಲದಲ್ಲಿ ನಾವು ಇಲ್ಲಿ ಕೆಲವು ಸ್ಲಮ್ಸ್‌ನಲ್ಲಿ ಇರತಕ್ಕಂಥ ಲ್ಯಾಂಡ್ ಪ್ರೈಮ್ ಲ್ಯಾಂಡ್. ಅಲ್ಲಿ ಅರ್ಧ ಲ್ಯಾಂಡನ್ನು ಅವರಿಗೇ ಕೊಡುತ್ತೇವೆ ಎಂದು ಹೇಳಿದರೆ, ಇನ್ನು ಅರ್ಧ ಲ್ಯಾಂಡನಲ್ಲಿ ನಾವು ಗ್ರೂಪ್ ಹೌಸಸ್ ಮಾಡಿದೆರ ನಾಲ್ಕೈದು ಅಂತಸ್ತಿನ ಮನೆಗಳನ್ನು ಮಾಡಿಕೊಟ್ಟು ಒಬ್ಬೊಬ್ಬರಿಗೆ ಒಂದೊಂದು ಫ್ಲಾಟ್ ಕೊಡುವುದು ಎನ್ನತಕ್ಕಂಥ ನಿರ್ಣಯ ಮಾಡಿದ್ದೇವೆ. It is a cabinet decision. ಆದರೆ ಸ್ವಲ್ಪ ಹೊರಗಡೆ ಹೋದಾಗ ಅಲ್ಲಿ ಆ ಲ್ಯಾಂಡಗೆ ಬೆಲೆ ಇಲ್ಲ. ಅಲ್ಲಿ ಅವರು ಯಾರೂ ಬರುವುದಿಲ್ಲ. ಅಲ್ಲಿ ಪ್ರೈವೇಟ್ ಬಿಲ್ಡರ್ಸ್ ಯಾರೂ ಬರುವುದಿಲ್ಲ. ಅವರು ಅಲ್ಲಿ ಏನು ಹೇಳುತ್ತಾರೆ ಎಂದರೆ, ನಾವು ಕುಳಿತುಸಮಾಲೋಚನೆ ಮಾಡಿದ್ದೇವೆ. ಎಂ.ಒ.ಯು.ಗೆ ಸೈನ್ ಮಾಡಿದ್ದೇವೆ. ಇದು ಲಾಯ್ಸನೋ ಎನ್ನುವ ಒಂದೇ ಕಂಪನಿ ಅಲ್ಲ. ಮಲೇಶಿಯನ್ ಕಂಪನಿ ಜೊತೆ ಮಾಡಿದ್ದೇವೆ. ಅಲ್ಲಿ ಅವರು ಹೇಳತಕ್ಕದ್ದು ಏನು ಎಂದರೆ ನಮಗೆ ಲ್ಯಾಂಡನ್ನು ನೀವು ಕೊಡಿ. ನಾವು ಲೋ ಇನಕಮ ಗ್ರೂಪ್, ಮಿಡಲ್ ಇನಕಮ್ ಗ್ರೂಪ್ ಮತ್ತು ಇ.ಡಬ್ಲ್ಯೂ.ಎಸ್. ಮನೆಗಳನ್ನು ಎಷ್ಟು ಕಟ್ಟಬೇಕು, ಅದನ್ನು ಆಯ್ಕೆ ಮಾಡುವುದು ನಮಗೆ ಸೇರಿದ್ದುದ್ದು. ಆಯ್ಕೆ ಮಾಡುವುದನ್ನು ಬಿ.ಡಿ.ಎ.ಗೆ ಜವಾಬ್ದಾರಿ ಕೊಡುತ್ತೇವೆ. ಡಿಸ್ಟ್ರಿಬ್ಯೂಶನ್ ರಾಜ್ಯಸರ್ಕಾರಕ್ಕೆ ಸೇರಿದ್ದುದು. ಅದನ್ನು ನಾನು ಮುಂದೆ ಓದುತ್ತೇನೆ, ಏನೇನು ನಿರ್ಣಯ ಮಾಡಿದ್ದೇವೆ ಎಂದು. ಈ ಒಂದು ನೀತಿಯನ್ನು ನಿರೂಪಣೆ ಮಾಡಿದಮೇಲೆ, ಆಮೇಲೆ ಭೂಸುಧಾರಣೆ ಕಾಯಿದೆ ಬಗ್ಗೆ ಚರ್ಚೆಯಾಯಿತು. ಅದು ನಾವು ನಿರ್ಣಯ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ, ನಮ್ಮ ಉದ್ದೇಶ ಇರತಕ್ಕಾಂಥದ್ದು ಬೆಂಗಳೂರಾಗಲೀ, ಮೈಸೂರಾಗಲೀ, ಇವತ್ತು ನಗರಪ್ರದೇಶವಲ್ಲಿ ಒಂದು ಕುಟುಂಬಕ್ಕೆ ಒಂದು ಮನೆಯಾದರೂ ದೊರಕಿಸಿಕೊಡಬೇಕೆಂದು ಹೇಳಿ ಒಂದು ಸರ್ವೆಯನ್ನು ಮಾಡಿ ಹತ್ತೊಂಭತ್ತೂವರೆ ಲಕ್ಷ ಈ ರಾಜ್ಯದಲ್ಲಿ ಯಾರಿಗೆ ಮನೆಯಿಲ್ಲವೆಂದು ನಿರ್ಣಯ ಮಾಡಿದ್ದೇವೆ, ಅವರಿಗೆ ಒಂದು ಕುಟುಂಬಕ್ಕೆ ಒಂದು ಮನೆಯನ್ನು ಕೊಡಬೇಕು ಎನ್ನುವ ಕಾರಣದಿಂದ ಈ ಒಂದು ಕಾರ್ಯಕ್ರಮವನ್ನು ರೂಪಿಸಿ ಕೊಂಡಿದ್ದೇವೆ.ಇದು ಹೌಸಿಂಗ್ ಪಾಲಿಸಿ, ಜನತಾದಳ ಸರ್ಕಾರದ್ದು ಎಂದು ನಾನು ಸಂಪೂರ್ಣವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಈ ಹಿನ್ನೆಲೆಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಬೇಕಾಗಿ ಬಂತು. ಇದನ್ನು ಹೇಳಿ ಸ್ಲಮುಗಳಲ್ಲಿ ಇರತಕ್ಕಂಥವರಿಗೂ ನಾವು ನಾಲ್ಕು ವರ್ಷಗಳ ಕಾರ್ಯಕ್ರಮದಲ್ಲಿ ಈ ಬೇಡಿಕೆಯನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ವಿಮೆನ್ ಅಂಡ್ ಚೈಲ್ಡ್ ವೆಲಫೇರ್ ಪ್ರೋಗ್ರಾಮ್ ಇದರಲ್ಲಿ ನಾನು

ಮೊದಲೇ ಹೇಳಿದೆ. ನಾನು ಮುಂದಕ್ಕೆ ಬರುತ್ತೇನೆ. ಜನತಾ ಸಂದರ್ಶನಕ್ಕೆ ಹೋದಾಗ ನೀವು ಏನು ಮಾಡಿದಿರಿ? ಎಲ್ಲ ಒಂದು ರೀತಿಯ ನಾಟಕ ಆಯಿತು ಎಂದೆಲ್ಲ ಹೇಳಿದ್ದರು. ದೇವದಾಸಿಯರು ಏನು ಅಳುತ್ತಾ ನಿಂತುಕೊಂಡಿದ್ದರು ಅದಕ್ಕೆ ಮೂರು ಸಾವಿರ ಮನೆಗಳನ್ನು ಕಟ್ಟಿತಕ್ಕಂಥ ತೀರ್ಮಾನ ಮಾಡಿದ್ದುದು. ಅಲ್ಲಿಯವರೆಗೆ ನನಗೂ ಅವರ ತೊಂದರೆಯ ಅನುಭವ ಇರಲಿಲ್ಲ. ಏಕೆಂದರೆ ಬೆಂಗಳೂರಿನಲ್ಲಿ ಕುಳಿತುಕೊಂಡು ಪ್ರೆಸ್ಟೇಜ್‌ಮೆಂಟ್ ಕೊಟ್ಟರೆ ಆಗುವುದಿಲ್ಲ. ಅಲ್ಲಿ ಹೋಗಿ ನೋಡಿದಾಗಲೇ ಗೊತ್ತಾಗುವುದು. ಆ ಸ್ಥಳಕ್ಕೆ ಬಂದಾಗ ಅವರು ಕಣ್ಣೀರು ಹಾಕಿಕೊಂಡು ಹೇಳಿದಾಗಲೇ ಇದನ್ನು ಮಾಡಬೇಕೆಂದು ನಮಗೆ ಅನ್ನಿಸಿದ್ದುದು. ಹಮಾಲಿಗಳು, ಕೆಲಸ ಮಾಡುವವರು ಕ್ಯೂನಲ್ಲಿ ನಿಂತುಕೊಂಡು ನಮಗೆ ಏನಾದರೂ ಸಹಾಯ ಮಾಡಬೇಕು ಎಂದು ಹೇಳಿದಾಗ, ನಮ್ಮಲ್ಲಿ ಯಾವ್ಯಾವ ವರ್ಗದ ಜನ ಬಂದು ನನ್ನನ್ನು ಭೇಟ್ಟಿ ಮಾಡಿದ್ದಾರೆ ಎಂದು ಹೇಳಬಹುದು. ಇವತ್ತು ಐದುಸಾವಿರ ಟ್ರೈಸಿಕಲಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ನಾವು ಹೋದಾಗ ಕುಂಟರು, ಅಂಗವಿಕಲರು ಬಹಳ ಕಷ್ಟಪಟ್ಟುಕೊಂಡು ಬರುತ್ತಾರೆ. ಈ ರಾಜ್ಯದ ಅಂದಿನ ಕಾಲದ ಚಕ್ರವರ್ತಿಗಳು, ಹಿಂದಿನ ಕಾಲದಲ್ಲಿ ಮುಖ್ಯಮಂತ್ರಿಗಳು ನಾವು ಬಹಳ ದೊಡ್ಡವರು ಎಂದು ಅವರು ತಿಳಿದು ಕೊಂಡಿದ್ದಾರೆ. ಐದು ವರ್ಷಗಳಲ್ಲಿ ಅಧಿಕಾರ ಹೋದಮೇಲೆ ನಮ್ಮನ್ನು ಮಾತನಾಡಿಸುವವರು ಇರುವುದಿಲ್ಲ. ನಾನು ಹೋದಾಗ ಇಂತಹ ಜನ ಬಂದಿದ್ದಾರೆ. ಅದಕ್ಕೋಸ್ಕರ ನಾನು ಈ ಕಾರ್ಯಕ್ರಮಗಳನ್ನು ರೂಪಿಸಿದ್ದುದು. ಈ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಬೇರೆ ಯಾರೂ ನಮಗೆ ಹೇಳಿಕೊಟ್ಟಿಲ್ಲ. ಜನರ ಕಹಿ ಅನುಭವಗಳನ್ನೂ ನೋಡಿದಾಗ, ಆ ಸ್ಥಳಗಳಿಗೆ ಹೋದಂಥ ಕಾಲದಲ್ಲಿ, ಅಲ್ಲಿರತಕ್ಕಂಥ ವಸ್ತುಸ್ಥಿತಿಯನ್ನು ನೋಡಿದಾಗ ಮನಸ್ಸಿನ ಮೇಲೆ ಪರಿಣಾಮವಾಯಿತು.

ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಇವತ್ತು ಬೆಳಗಾವಿ ಜಿಲ್ಲೆಯಲ್ಲಿ, ಎಲ್ಲ ಕಡೆಗೂ ಸ್ನೇಹಿತರು ಇರಬಹುದು. ಇವತ್ತು ಅಲ್ಲ ಏನು ದೇವದಾಸಿಯರ ಬಗ್ಗೆ ಹಾಕಿಕೊಂಡಿರತಕ್ಕ ಉತ್ತಮವಾಗಿ ನಡೆಯುತ್ತಿದೆ ಎನ್ನುವಂಥಾದ್ದನ್ನು ಬಹುಶಃ ಅವರು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸಿದ್ದೇನೆ. ಪಕ್ಷಭೇದ ಮರೆಯೋಣ. ಅಲ್ಲಿ ಏನು ಕಾರ್ಯಕ್ರಮ ಆಗುತ್ತಿದೆ ಎನ್ನತಕ್ಕಂಥಾದ್ದನ್ನು ನೋಡಿದರೆ ನಾವು ಖಂಡಿತವಾಗಿಯೂ ಈ ಕಾರ್ಯಕ್ರಮ ತುಂಬಾ ಯಶಸ್ವಿಯಾಗಿ ಸರ್ಕಾರ ಹಮ್ಮಿಕೊಂಡಿದೆ ಎನ್ನತಕ್ಕಂಥಾದ್ದನ್ನು ಒಪ್ಪುತ್ತೀರಿ ಎಂಬುದನ್ನು ನಾನು ಈಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದರ ಜೊತೆಗೆ ಇನಕಮ್ ಜನರೇಟಿಂಗ್ ಆಕ್ಟಿವಿಟೀಸಗೆ ಗಮನಕೊಟ್ಟು, ನಾವು ಹೆಣ್ಣುಮಕ್ಕಳಿಗೆ ನಿಗಮದಿಂದ ಸಾಲ ಕೊಡಬೇಕು ಎಂದು ಮಾಡಿದ್ದೇವೆ. ನಾವು Devadasi women have been encouraged to take up the income generating activities like poultry farm, dairy farming, petty business, etc. ಅವರಿಗೆ ಎನಕರೇಜಮೆಂಟ್ ಕೊಡಬೇಕೆನ್ನುವ ಬಗ್ಗೆ ಸ್ಕೀಮನ್ನು ಇವಾಲ್ವ ಮಾಡಿ 2553 ಹೆಣ್ಣುಮಕ್ಕಳನ್ನು ಈ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಗುರುತಿಸಿ, ಇದಕ್ಕೆ ಈ ವರ್ಷ 220 ಲಕ್ಷ ರೂಪಾಯಿ ಹಣ ಒದಗಿಸಬೇಕೆಂದು ಕೂಡ ಸರ್ಕಾರ ನಿರ್ಣಯ ಮಾಡಿದೆಯೆಂಬುದನ್ನು ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ. ಇದರ ಜೊತೆಗೆ ಹೆಣ್ಣುಮಕ್ಕಳ ಹೆಸರಿನಲ್ಲಿ ಜಂಟಿಖಾತೆಯನ್ನು ಮಾಡಬೇಕು ಎಂದು ತಾವು ಹೇಳಿದಿರಿ, ಹಾಗೆ ಮಾಡಿದಿದ್ದರೆ ಗಂಡು ಕುಡಿದು

ಮುಳುಗಿಸಿಬಿಡುತ್ತಾನೆ ಅಂತ ಹೇಳಿದ್ದಿರಿ. ಈ ಒಂದು ಕಾರ್ಯಕ್ರಮವನ್ನು ಕೂಡ ನಾವು ಜಾರಿಕೊಟ್ಟಿದ್ದೇವೆ. ಮತ್ತೆ ಯಾವುದೇ ಆಸ್ತಿ, ಗಂಡನ ಹೆಸರಿಗೆ ಮನೆ ಕೊಡುವುದೇ ಆಗಲಿ, ಅಕ್ರಮ ಸಾಗುವಳಿ ಸಕ್ರಮ ಮಾಡುವಂಥಾದ್ದು, ಇವತ್ತು ನಗರಪ್ರದೇಶಗಳಲ್ಲಿ ಗುಡಿಸಲು ಹಾಕಿಕೊಂಡು ರೆವಿನ್ಯೂ ಸೈಟುಗಳನ್ನು ಮಾಡಿಕೊಂಡಿದ್ದಾರೆ. ಅವರಿಗೆ ಖಾತೆ ಮಾಡುವಾಗ ಜಂಟಿ ಖಾತೆ ಮಾಡತಕ್ಕದ್ದು ಕೂಡ ನಾವು ನಿರ್ಣಯ ಮಾಡಿದ್ದೇವೆ. ನಮ್ಮಲ್ಲಿ ಹೆಣ್ಣುಮಕ್ಕಳಿಗೆ ರಿಸರ್ವೇಶನ್, ಸರ್ಕಾರಿ ನೌಕರಿಯಲ್ಲಿ ಕೂಡಬೇಕೆಂದು ನೀವೇ ಮೊನ್ನೆ ವಾದ ಮಾಡಿದ್ದಿರಿ. ಇದನ್ನು ಕೂಡ ನಿರ್ಣಯ ಮಾಡಿದ್ದೇವೆ. ಈ ರಿಸರ್ವೇಶನ್ ಆಧಾರದ ಮೇಲೆ ಅಪಾಯಿಂಟಮೆಂಟ್ ಕೊಡತಕ್ಕಂಥಾದ್ದು ಕೂಡ ಮಾಡಿದ್ದೇವೆ. ಮತ್ತೊಂದು ಹೊಸ ಕಾರ್ಯಕ್ರಮವನ್ನು ಈ ಸಾರಿ ಅನೌನ್ಸ ಮಾಡಿದ್ದೇವೆ. ಅದಕ್ಕಾದರೂ ಒಂದು ಒಳ್ಳೆಯ ಮಾತನ್ನು ನೀವು ಹೇಳಬಹುದಾಗಿತ್ತು. ಯಾವುದೇ ಕುಟುಂಬದಲ್ಲಿ ಎರಡು ಮಕ್ಕಳಲ್ಲಿ ಒಂದು ಹೆಣ್ಣುಮಗುವಿಗಿಂತಹೆಚ್ಚು ಇರಬಾರದು. ಈ ಸ್ಕೀಮಿನ ಡಿಟೈಲ್ಸನ್ನು ಅನೌನ್ಸ ಮಾಡುತ್ತೇವೆ. ಈ ಮಗುವಿಗೆ ಅದರ ಹೆಸರಿನಲ್ಲಿ 21 ವರ್ಷಕ್ಕೆ ಏನು ಹಣ ಇಡುತ್ತೇವೆ, ಅವರ ಮದುವೆ ಸಮಯದಲ್ಲಿ ಹಣ ಸಿಗುತ್ತದೆ. ಅದನ್ನು ಜಾರಿಕೊಡುತ್ತಿದ್ದೇವೆ. ಈ ವಿವರಗಳನ್ನು ಈ ಸಭೆ ಮುಕ್ತಾಯವಾಗುವುದರೊಳಗೆ, ಬಜೆಟ್ ಚರ್ಚೆಯಲ್ಲಿ ಹೇಳುತ್ತೇವೆ. ಇದನ್ನು ತುಂಬ ಮೆಚ್ಚಿಕೊಂಡು ಮಾತನ್ನು ಹೇಳಿದ್ದಾರೆ. ಯಾರು ಬಡವರು ಇದ್ದಾರೆ ಅವರ ಮಕ್ಕಳಿಗೆ, ಅವರು ಹೆಚ್ಚು ಮಕ್ಕಳನ್ನು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಾರದು, ಅದನ್ನು ಡಿಸಕರೇಜ್ ಮಾಡುವುದು ಒಂದು. ಎರಡು ಮಕ್ಕಳಿಗಿಂತ ಹೆಚ್ಚು ಇರಬಾರದು. ಒಂದು ಹೆಣ್ಣು ಮಗು, ಒಂದು ಗಂಡುಮಗು ಇದ್ದರೆ ಅವರಿಗೆ ಡಿಸಕ್ವಾಲಿಫಿಕೇಶನ್ ಬರುವುದಿಲ್ಲ. ಈ ಹಿನ್ನೆಲೆಯನ್ನು ನಾನು ಸೂಕ್ಷ್ಮವಾಗಿ ಹೇಳುತ್ತಿದ್ದೇನೆ. ಇವತ್ತಿನಿಂದ ಆ ಹೆಣ್ಣುಮಗು ವಿಧ್ಯಾಭ್ಯಾಸ ಮುಗಿಸುವವರೆಗೆ, ಅಂದರೆ ಅವರು ಬಿ.ಎ. ಓದಬೇಕು ಅಂತಲ್ಲ. 21ನೇ ವಯಸ್ಸಿಗೆ ಎಂದು ಹೇಳಿದ್ದೇವೆ, ಆ ವಯಸ್ಸಿನಗೆ ಹೆಣ್ಣುಮಕ್ಕಳು ಮದುವೆಗೆ ಬರುತ್ತಾರೆ. ಅವರ ಹೆಸರಿನಲ್ಲಿ ಹಾಕತಕ್ಕಂಥ ಹಣವನ್ನು ಮದುವೆ ಸಮಯದಲ್ಲಿ ಅವರ ಕೈಗೆ ಕೊಡಬೇಕು ಎನ್ನುವ ಒಂದು ಹೊಸ ಕಾರ್ಯಕ್ರಮವನ್ನು ಮಾನ್ಯ ಅರ್ಥಸಚಿವರು ಜಾರಿಗೆತರತಕ್ಕದ್ದನ್ನು ಮಾಡಿದ್ದಾರೆ. ಇದು ಅತ್ಯಂತ ಉತ್ತಮವಾದ ಸ್ಕೀಮ್ ಆಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಆಮೇಲೆ ಫಿಸಿಕಲೀ ಹ್ಯಾಂಡಿಕ್ಯಾಪ್ಡಸ್ಕೀಮ್ - ಅದರ ವಿವರಗಳನ್ನು ನಾನು ಕೊಡುತ್ತೇನೆ. ಬಹುಶಃ ಈಗಾಗಲೇ ನಾನು ಫೈನಾನ್ಸ ಸೆಕ್ರೆಟರಿಯವರಿಗೆ ಎಷ್ಟು ಹಣ ಅದಕ್ಕೆ ಒದಗಿಸುತ್ತೇವೆ ಎಂದು ಆ ವಿವರಗಳನ್ನು ಕಳಿಸಕೊಡಬೇಕು ಎಂದು ಹೇಳಿದ್ದೆ, ಇಷ್ಟರಲ್ಲೇ ಅದು ಬರಬಹುದು. ರಾತ್ರಿ ಎಲ್ಲ ಕುಳಿತು ರೆಡಿಮಾಡಬೇಕಾಗಿ ಬಂತು. ಆದ್ದರಿಂದ ಇನ್ನು ಐದು-ಹತ್ತು ನಿಮಿಷಗಳಲ್ಲಿ ಅದು ಬರುತ್ತದೆ. ಇದರ ಜೊತೆಗೆ ಐದುಸಾವಿರ ಟ್ರೈಸಿಕಲಗಳನ್ನು ಕೊಡಬೇಕಂದು ಇದ್ದೇವೆ. ಈ ರಾಜ್ಯದಲ್ಲಿ ಸುತ್ತಾಡಿಕೊಂಡು ಬಂದಾಗ ನಮಗೆ ಬೇರೆ ಅರ್ಜಿಗಳು ಬರಲಿಲ್ಲ. ನನ್ನ ಮಗನನ್ನು ಐ.ಎ.ಎಸ್. ಪಾಸ್ ಮಾಡಿಸಿ ಎಂದು ಯಾರೂ ಬರಲಿಲ್ಲ. ಜನತಾ ದರ್ಶನಕ್ಕೆ ಹೋದಾಗ ಒಂದು ಮನೆ ಕೊಡಿ, ಸೈಟು ಕೊಡಿ, ಟ್ರೈಸಿಕಲ್ ಕೊಡಿ, ನಮ್ಮ ಜೀವನಕ್ಕೆ ಮಾರ್ಗ ಮಾಡಿಕೊಡಿ ಎಂದು ಕೇಳುವ ಅರ್ಜಿಗಳೇ ಹೆಚ್ಚು ಬಂದಿದ್ದು. ಈಗ

ಅಂಗಡಿಗಳನ್ನು ಮಾಡಿದ್ದೇವೆ. ಯಾರು ಕುಂಟಿಕೊಂಡು ಹೋಗುತ್ತಾರೆ, ಅಂತಹವರಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಅಂಗಡಿ ಮಾಡಿಕೊಡುವುದು ಇದೆ. ಇದೆಲ್ಲಾ ರಾಜ್ಯದಲ್ಲಿ ಅಡ್ಡಾಡಿಕೊಂಡು ಬಂದಮೇಲೆ ಅವರ ಸ್ಥಿತಿಗತಿಗಳನ್ನು ನೋಡಿಕೊಂಡು ಯಾರ್ಯಾರಿಗೆ ಏನೇನು ಸ್ಕೀಮ್ ಮಾಡಬೇಕೆಂಬುದು ನಮಗೆ ಗೊತ್ತಾಯಿತು. ಪ್ರತಿನಿತ್ಯ ಭಿಕ್ಷುಕರನ್ನು, ಕುಂಟರನ್ನು ನೋಡುತ್ತೇವೆ. ಅಲ್ಲಿ ಅವರು ಸಾಲಾಗಿ ನಿಂತುಕೊಂಡು, ಕೈಕಾಲು ಹಿಡಿದುಕೊಂಡು ಅಳುವಾಗ ನೀವು ಹೋದರೂ ಅದು ನಿಮ್ಮ ಹೃದಯದ ಮೇಲೆ ಪರಿಣಾಮ ಬೀರುತ್ತದೆ, ನಾನು ಹೋದರೂ ಬೀರುತ್ತದೆ. ಆದ್ದರಿಂದ ಈ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ.

ಇಪತ್ತು ಐದು ಸಾವಿರ ಟ್ರೈಸಿಕಲಗಳನ್ನು ಕೊಡಬೇಕೆಂದು ನಾನು ನಿರ್ಣಯ ಮಾಡಿದ್ದೇವೆ. ಈಗ ಎರಡು ಸಾವಿರ ಕೊಟ್ಟಿದ್ದೇವೆ, ಇನ್ನು ಮೂರು ಸಾವಿರ ಕೊಡುತ್ತೇವೆ. ಇದರ ಜೊತೆಗೆ ಆರ್ಟಿಫಿಶಲ್ ಲಿಂಬ್ಸ್ ಕೊಡಬೇಕು, ಕಿವಿಗೆ ಶ್ರವಣಸಾಧನಗಳನ್ನು ಕೊಡಬೇಕೆಂದು ಮಾಡಿದ್ದೇವೆ. ಈ ವರ್ಷ ಏನು ಮಾಡಿದ್ದೇವೆ ಎನ್ನುವುದರ ಬಗ್ಗೆ ವರದಿಯನ್ನು ಕೊಡುತ್ತಿದ್ದೇನೆ, ಅಷ್ಟೆ. ಇದು ನಿಮ್ಮ ನೀತಿ, ಇದು ನಮ್ಮ ಸಾಧನೆ. ಇಷ್ಟನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಆಮೇಲೆ ಹೆಲ್ತ ಸ್ಕೀಮಗೆ ಬರುತ್ತೇನೆ. ಒಂದು ಸ್ಕೀಮನಲ್ಲಿ ನಾನು ವಿಫಲನಾಗಿದ್ದೇನೆ. ಅದನ್ನು ಮಾಡಲಿಕ್ಕೆ ಆಗಲಿಲ್ಲ. Rs.100 crores ``corpus fund'' ನ್ನು ಮಾಡಬೇಕೆಂದು ಹೇಳಿ ನಾನು ಪ್ರಯತ್ನ ಮಾಡಿದೆ. ಈ ಸಂದರ್ಭದಲ್ಲಿ ನಾನು ಯಾರನ್ನೂ ದೂರಲಿಕ್ಕೆ ಹೋಗುವುದಿಲ್ಲ. ಸನ್ಮಾನ್ಯ ಮನಮೋಹನ್ ಸಿಂಗರವರು ಪ್ರಾಮಾಣಿಕ ಪ್ರಯತ್ನ ಮಾಡಿದರು. ಅವರು ನಮಗೆ ಬರೆದಿರುವ ಕಾಗದವನ್ನು ಸಭೆಯಲ್ಲಿ ಬೇಕಾದರೆ ಓದುತ್ತೇನೆ. ಅಲ್ಲಿ ಭಗವತಿ ಕಮಿಟಿ ಅಂತ ಹೇಳಿ ಒಂದು ಕಮಿಟಿ ಇದೆ. ಶ್ರೀಮಾನ್ ಮೊಯಿಲಿಯವರಿಗೆ ಗೊತ್ತಿರಬಹುದು, ಅವರ ಹಿಂದೆ ಫೈನಾನ್ಸ್ ಮಿನಿಸ್ಟರ್ ಆಗಿ ಕೆಲಸ ಮಾಡಿದವರು. 100 ಪರ್ಸೆಂಟ್ ಟ್ಯಾಕ್ಸ್ ಎಕ್ಸಂಪಶನ್ 35ಸಿನಲ್ಲಿ ಕೊಡಬೇಕೆಂದು ಹೇಳಿ ಒತ್ತಾಯ ಮಾಡಿದ್ದೆವು. ಎರಡೇ ಎರಡು ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಒಂದು ರಾಜೀವಗಾಂಧಿ ಹೆಸರಿನಲ್ಲಿನ ಫೌಂಡೇಶನ್ ಪರ್ಸೆಂಟ್ ವಿನಾಯಿತಿ ಮಾಡಿದ್ದಾರೆ. ಮತ್ತೊಂದು ಪ್ರಧಾನಮಂತ್ರಿಗಳ ರಿಲೀಫ್ ಫಂಡಗೆ 100 ಪರ್ಸೆಂಟ್ ಟ್ಯಾಕ್ಸ್ ಎಕ್ಸಂಫಶನ್ ಕೊಟ್ಟಿದ್ದಾರೆ. ಮಾನ್ಯ ಮನಮೋಹನ ಸಿಂಗ್ ಅವರು ಬರೆದಿರುವ ಕಾಗದವನ್ನು ನಾನು ಓದುತ್ತೇನೆ.

> `I had the matter again examined as mentioned in my earlier letter and the national committee which is the statutory authority for approving the projects and recommending them to the government for notification, has not been able to approve the Karnataka Chief Minister's Medical Relief Fund for the reasons stated earlier as the law stands. Therefore, I regret that it could not be possible to notify the Chief Minister's Medical Relief Fund.'

ನಾನು ಭಗವತಿ ಅವರನ್ನು ಇಲ್ಲಿಗೇ ಬಿಡಲಿಲ್ಲ. ಏಕೆಂದರ 100 ಪರ್ಸೆಂಟ್ ಟ್ಯಾಕ್ಸ ಎಕ್ಸಂಪಶನ್ ಕೊಟ್ಟರೆ, ಇವತ್ತು ಅನೇಕ ಜನ ದುಡ್ಡು ಕೊಡುವುದಕ್ಕೆ ಸಿದ್ಧರಿದ್ದಾರೆ. ನಾವು ಹತ್ತು ಕೋಟಿ ಬಜೆಟನಲ್ಲಿ ಏನು ಇಟ್ಟಿದ್ದೇವೆ, ಅದರಿಂದ ಸಾಧ್ಯವಾಗುವುದಿಲ್ಲ. ಅನೇಕ ಜನಗಳು ಹಾಗೂ ಧಾರ್ಮಿಕ ಸಂಸ್ಥೆಗಳು ಇಂತಹ ಒಂದು ಅತ್ಯಂತ ಉತ್ತಮವಾದಂಥ ಕೆಲಸಕ್ಕೆ ಹಣ ಕೊಡುವುದಕ್ಕೆ ಸಿದ್ಧರಿದ್ದಾರೆ. ಆದ್ದರಿಂದ ಟ್ಯಾಕ್ಸ ಎಕ್ಸಂಪಶನ್ ಬಗ್ಗೆ ನನಗೆ ಅವರು ಹೇಳಿದರು ಏನೆಂದರೆ, ಈ ಸದನದಲ್ಲಿ ಸಾಧ್ಯವಾದರ ಅಲ್ಲಿ ಯಾವುದೇ ಅವ್ಯವಹಾರದ ಬಗ್ಗೆ ಗಲಾಟೆ ಇಲ್ಲದಿದ್ದರೆ, ಗಲಾಟೆ ಎನ್ನುವುದು ಬೇಡ. ಅಸಹಕಾರ ಇಲ್ಲದೆ ಸಹಕಾರ ಕೊಟ್ಟರೆ ನಾನು ಮನಿಬಿಲನ್ನು ಇಂಟ್ರಡ್ಯೂಸ್ ಮಾಡುವಾಗ ಇವನ್ನು ತಂದು ನಾನೇ ಒಂದು ಅಮೆಂಡಮೆಂಟ್ ತರುತ್ತೇನೆ ಎನ್ನುವ ಮಾತನ್ನು ಮಾನ್ಯ ಮನಮೋಹನ್ ಸಿಂಗ್ ಅವರು ಹೇಳಿದ್ದಾರೆ. ಅದು ಏನು ಆಗುತ್ತದೆಯೋ ನನಗೆ ಗೊತ್ತಿಲ್ಲ. ಅಲ್ಲಿ ಹೇಗೆ ಕಾರ್ಯಕಲಾಪ ನಡೆಯುತ್ತದೆ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. He has given me a categorical assurance that `I am going to see that an amendment is moved.' This is a statutory authority headed by former Chief Justice of Supreme Court. ನಾನು ಅವರಿಗೆ ಮೂರು ಸಾರಿ ಹೋಗಿ ರಿಕ್ವೆಸ್ಟ ಮಾಡಿದೆ. ಆದರೆ ಅವರು ಇದುವರೆಗೂ ಗಮನ ಹರಿಸಿಲ್ಲ. ಅದಕ್ಕೋಸ್ಕರ ಅವಕ್ಕೆ ಒಂದು ಅಮೆಂಡಮೆಂಟನ್ನು ತರುವುದಕ್ಕೆ ಸಿದ್ಧನಿದ್ದೇನೆ, ಈ ಬಜೆಟ್ ಸೆಶನನಲ್ಲಿ ಮನಿ ಬಿಲ್ ಪಾಸ್ ಆಗತಕ್ಕಂಥಾದ್ದು ಯಾವುದು ಇದೆ, ಅದು ಅಡಚಣೆ, ಆತಂಕ ಇಲ್ಲದೇ ಆದರೆ ನಾನು ಅಮೆಂಡಮೆಂಟನ್ನು ತರುತ್ತೇನೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅದು ಒಂದನ್ನು ನಾನು ಇವತ್ತು ಗುರಿ ಮುಟ್ಟುವುದಕ್ಕೆ ಸಾಧ್ಯವಾಗಿಲಿಲ್ಲವೆಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಬಾಕಿ ನಾವೇನು ಮಾಡಿದ್ದೇವೆ ಎಂದು ಸೂಕ್ಷ್ಮವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

12.40 ಪಿ.ಎಂ.

ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತು ನಮ್ಮಲ್ಲಿ 550 ಕೋಟಿ ರೂಪಾಯಿಗಳಿಗೆ, ವರ್ಲ್ಡ ಬ್ಯಾಂಕಿನಿಂದ ಈಗಾಗಲೇ ಕ್ಲಿಯರೆನ್ಸ ಸಿಕ್ಕಿದೆ. ನಮ್ಮ ಅಧಿಕಾರಿಗಳು, ಹೋಮ್ ಸೆಕ್ರೆಟರಿ,ಹೆಲ್ತ ಸೆಕ್ರಟರಿ ಹೋಗಿ ಅಗ್ರಿಮೆಂಟಿಗೆ ಸಹಿ ಮಾಡಿದ್ದಾರೆ. ನಮಗೆ ಆ ಹಣ ದೊರೆಯತಕ್ಕಂಥಾದ್ದು ಇದೆ. ಅದರ ಜೊತೆಗೆ, ಜರ್ಮನ್ ಪ್ರಾಜೆಕ್ಟ ೮೦ ಕೋಟಿ ರೂಪಾಯಿಗಳ ಹಣ ಸಿಗುವಂಥಾದ್ದು ಇದೆ. ಆದರಿಂದ, ನಾವು ಮಾಡತಕ್ಕಂಥಾದ್ದು, ಸೆಕೆಂಡರಿ ಆಸ್ಪತ್ರೆ, ಜೊತೆಗೆ ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳು. Teaching hospitals in Bangalore will be thoroughly revamped and moernised wherever necessary. More than 500 additional beds will be created through this project. The buildings will be renovated and expanded with full equipment support and new facilities will be opened wherever neccessary. A fool¥proof reference system will be developed so as to reduce the load on the teaching hospitals and to make sophisticated health care available in the rural areas. 80 ಕೋಟಿ ಲೋನ್ ಅಲ್ಲ, ಇದು ಕೆ.ಎಂ.ಡಬ್ಲ್ಯೂ. ಜರ್ಮನ್ ಪ್ರಾಜೆಕ್ಟಗೆ ಇದು ಸಾಲ ಅಲ್ಲ.

ಸಂಪೂರ್ಣವಾಗಿ ಉಚಿತ, ಒಂದುರೀತಿ ಎಡ್ ಎಂದು ಹೇಳಬಹುದು, ಅದನ್ನು ಕೊಡುತ್ತಾರೆ. ಇನ್ನುಳಿದ 550 ಕೋಟಿ ವರ್ಲ್ಡ್ ಬ್ಯಾಂಕ್ ಲೋನ್, ಇದನ್ನು ವಾಪಸ್ ಕೊಡಬೇಕಾಗುತ್ತದೆ. ಇದೆರಡೂ ಸೇರಿಸಿದರೆ, ಸುಮಾರು 630 ಕೋಟಿ ರೂಪಾಯಿಗಳೇನಿದೆ, ಸಂಪೂರ್ಣವಾಗಿ ರಾಜ್ಯದ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಆಸ್ಪತ್ರೆಗಳಿಗೆ ಮೂಲಭೂತ ಸೌಲಭ್ಯಗಳೇನೇನು ಬೇಕು ಅವುಗಳನ್ನು ಒದಗಿಸುವುದಕ್ಕೆ ಮುಂದಿನ 4 ವರ್ಷಗಳಲ್ಲಿ ಸಂಪೂರ್ಣವಾಗಿ ಬಳಕೆ ಮಾಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು 1991ರಲ್ಲಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಅವರು ಒಂದು ಫೌಂಡೇಷನ್ ಸ್ಟೋನ್ ಹಾಕಿದ್ದರು. ಅದು ಹಾಗೆಯೇ ನಿಂತುಹೋಯಿತು. ನಾನು ಹೋದಂಥ ಕಾಲದಲ್ಲಿ ಮತ್ತೇ ಆ ವಿಷಯವನ್ನು ನನ್ನ ಗಮನಕ್ಕೆ ತಂದಮೇಲೆ, ಪುನಃ ಸಂಬಂಧಪಟ್ಟವರನ್ನು ಮತ್ತು ಕೇಂದ್ರಸರ್ಕಾರದವರು ಆರೋಗ್ಯಸಚಿವರು, ಎಲ್ಲರ ಮೇಲೆ ಒತ್ತಾಯ ತಂದು, ಇದೂ ಕೂಡ ಕ್ಲಿಯರೆನ್ಸ್ ಬಂದಿದೆ. ಅವತ್ತು ಏನು ಮೊದಲನೆಯ ನಿರ್ಣಯ ಆಗಿತ್ತೋ, ಅದಕ್ಕಿಂತ ಸ್ವಲ್ಪಮಟ್ಟಿಗೆ ಹೆಚ್ಚು ನನಗೆ ಸಹಕಾರಿಯಾಗತಕ್ಕ ನಿರ್ಣಯವನ್ನು ನಾವು ಮಾಡಿಕೊಂಡಿದ್ದೇವೆ. ಇದಕ್ಕೆ 90 ಪರ್ಸೆಂಟ್ ಪೂರ್ಣ ಗ್ರಾಂಟ್ ಕೊಡುತ್ತಾರೆ, ನಾವು ಕೇವಲ 10 ಪರ್ಸೆಂಟ್ ಮಾತ್ರ ಕೊಡಬೇಕು.

350 ಹಾಸಿಗೆಗಳ ಆಸ್ಪತ್ರೆಯನ್ನು ಅಲ್ಲಿ ಕೊಡುತ್ತೇವೆ. ಮೂರು ವರ್ಷದಲ್ಲಿ ಈ ಕಾರ್ಯಕ್ರಮವನ್ನು ಮುಗಿಸುತ್ತೇವೆ. ರಾಯಚೂರಿನಲ್ಲಿ ಈ ಕಾರ್ಯಕ್ರಮವನ್ನು ಮತ್ತೆ ರಿವೈವ್ ಮಾಡುತ್ತೇವೆಂಬ ಬಗ್ಗೆ ನನಗೆ ಅನುಮಾನ ಇತ್ತು, ಇದು ಆಗುವುದಿಲ್ಲವೆಂದಿತ್ತು. ಏಕೆಂದರೆ, ಗಲ್ಫ್ ಕಂಟ್ರಿಯವರು ಹಿಂದೆ ಹೋಗಿ, ಇದು ಆಗುವುದಿಲ್ಲವೆಂದು ಒಂದು ಹಂತಕ್ಕೆ ಬಂತು. 1991ರಿಂದ 4 ವರ್ಷ ಹಾಗೆಯೇ ಕೈಬಿಟ್ಟು ಹೋಗಿತ್ತು. ನನಗೆ ಇದನ್ನು ಪುನಃ ರಿವೈವ್ ಮಾಡುವುದಕ್ಕೆ ಸಾಧ್ಯವೇ ಎನ್ನುವ ಅನುಮಾನ ಇತ್ತು. ಆದರೆ, ಇವತ್ತು ಸಮಾಧಾನದಿಂದ ಹೇಳುತ್ತೇನೆ. ಅವರು ಅಗ್ರಿ ಆಗಿದ್ದಾರೆ, ಹಣವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. 90 ಪರ್ಸೆಂಟ್ ಕೊಡುತ್ತೇವೆಂದು ಹೇಳಿದ್ದಾರೆ. ನಾವು 10 ಪರ್ಸೆಂಟ್ ಜೋಡಿಸಿ, ಮೂರು ವರ್ಷದಲ್ಲಿ ದೊಡ್ಡ ಪ್ರಮಾಣದ ಆಸ್ಪತ್ರೆಯನ್ನು ರಾಯಚೂರಿನಲ್ಲಿ ಮಾಡುವುದಕ್ಕೆ ನಿರ್ಣಯ ಮಾಡಿದ್ದೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಡ್ರಗ್ ಪರ್ಚೇಸ್ ವಿಷಯದಲ್ಲಿ ಹೌಸ್ ಕಮಿಟಿ ಬೇಕಾದಷ್ಟು ಮಾಡಿದೆ. ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹೌಸ್ ಕಮಿಟಿಯಲ್ಲಿ ಏನಾಗಿದೆ, ಏಂತು ಎಂಬುದನ್ನು ಹಾಗೂ ಕರ್ನಾಟಕದ ವಿಧಾನ ಸಭೆಯಲ್ಲಿ ನಡೆದಿರುವ ಹಿಂದಿನ ಚರ್ಚೆಗೆ ಹೋಗುವುದು ಬೇಡ. ಅದಕ್ಕೋಸ್ಕರ ಇದನ್ನು ಡೀಸೆಂಟ್ರಲೈಸ್ ಮಾಡಿದ್ದೇವೆ. ಇಲ್ಲಿ ಪರ್ಚೇಸ್ ಮಾಡುವ ವ್ಯವಸ್ಥೆ ಬೇಕಾಗಿಲ್ಲ, ಸಂಪೂರ್ಣವಾಗಿ, ಅವಶ್ಯಕತೆ ಇರತಕ್ಕಂಥ ಡ್ರಗ್ಸ್ ಮಾತ್ರ, ಅಂದರೆ 20 ಪರ್ಸೆಂಟ್ ಮಾತ್ರ ರಾಜ್ಯಮಟ್ಟದಲ್ಲಿ ಕೊಂಡಕೊಳ್ಳಬೇಕು, ಬಾಕಿ 80 ಪರ್ಸೆಂಟ್ ಜಿಲ್ಲಾಮಟ್ಟದಲ್ಲಿ, ಜಿಲ್ಲಾಪಂಚಾಯಿತಿಗಳು ಮತ್ತು ಆಯಾ ಲೆವಲನಲ್ಲಿ ಕೊಂಡುಕೊಳ್ಳಬೇಕೇ ಹೊರತು, ನಮ್ಮ ಹತ್ತಿರ ಬರಬೇಕಾದ್ದಿಲ್ಲ. ಇದನ್ನು ಸೆಂಟ್ರಲೈಸ್ ಮಾಡಿ, ಇವರ ಮೇಲೆ ದೊಡ್ಡ ಹಗರಣವಾಯಿತು ಎನ್ನುವುದು ಬೇಕಾಗಿಲ್ಲವೆಂದು, ಡಿ-ಸೆಂಟ್ರಲೈಸ್ ಮಾಡಿದ್ದೇವೆ. We have revamped the entire system and decentralised it. ಈ ಸರ್ಕಾರ

ಹೊಸದಾಗಿ, ಅನುಷ್ಠಾನಕ್ಕೆ ತಂದಿರತಕ್ಕ ಕಾರ್ಯಕ್ರಮ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಬೇರೆ ಬೇರೆ ಕೆಲವು ಕಾರ್ಯಕ್ರಮಗಳನ್ನೂ ತೆಗೆದುಕೊಂಡಿದ್ದೇವೆ. ಅದರಲ್ಲಿ, ಬೆಂಗಳೂರಿನಲ್ಲಿ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಾಡಬೇಕೆನ್ನುವುದು, ನಮ್ಮ ಮನಸ್ಸಿನಲ್ಲಿ ಗುರಿ ಇಟ್ಟುಕೊಂಡು, ಇದಕ್ಕೆ 8 ಕೋಟಿ ಹಣವನ್ನು ಕೂಡಿಸಿ ಕೊಂಡಿದ್ದೇವೆ. ಇದಕ್ಕೆ ಸಹಾಯ ಮಾಡತಕ್ಕಂಥ ಕೆಲವು ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ, ಎನ್.ಆರ್.ಐ.ಗೆ 15 ಪರ್ಸೆಂಟ್ ಹುಡುಗರನ್ನು ನೇಮಕಾತಿ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ, ಅದಕ್ಕೆ ನಾವೂ ಏಕೆ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ 15 ಪರ್ಸೆಂಟ್ ಎನ್.ಆರ್.ಐ.ಗಳನ್ನು ಅಡ್ಮಿಟ್ ಮಾಡಬಾರದು? ಅವರಿಗೆ ಹದಿನೈದೂವರೆ ಡಾಲರ್ಸ್ ಕೊಟ್ಟು ಅಲ್ಲಿ ಅಡ್ಮಿಟ್ ಆಗುತ್ತಾರೆ. ನಮ್ಮಲ್ಲಿಯೂ ಕೂಡ 15 ಹುಡುಗರ ಸಂಖ್ಯೆಯನ್ನು ಹೆಚ್ಚು ಮಾಡಿ, ನಮ್ಮ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಹುಡುಗರನ್ನು ಅಡ್ಮಿಟ್ ಮಾಡಿದರೆ, ನಮಗೆ ವರ್ಷಕ್ಕೆ 15-20 ಕೋಟಿ ರೂಪಾಯಿಗಳನ್ನು ಮಾಡಿಕೊಳ್ಳಬಹುದು. ಆ ಹಣವನ್ನು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಾಡುವುದಕ್ಕೆ ವಿನಿಯೋಗ ಮಾಡಬೇಕೆಂದು ಯೋಚನೆ ಮಾಡಿ, ಈಗಾಗಲೇ ನಿರ್ಣಯ ಮಾಡಿದ್ದೇವೆ. ಈ ವರ್ಷದಿಂದ ಎಲ್ಲಾ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ, ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಹೇಗೆ ಸುಪ್ರೀಂಕೋರ್ಟಿನ ಆದೇಶದ ಅನ್ವಯ 15 ಪರ್ಸೆಂಟ್ ಎನ್.ಆರ್.ಐ. ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೋ ಆ ರೀತಿಯಲ್ಲಿಯೇ ನಾವೂ ಕೂಡ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಈಗಿರತಕ್ಕ ಸ್ಟ್ರೆಂಕ್ತ ಏನಿದೆಯೋ ಅದಕ್ಕಿಂತ 15 ಹುಡುಗರನ್ನು ಹೆಚ್ಚುಮಾಡಿ, ಅದರಲ್ಲಿ ಬರತಕ್ಕಂಥ ಹಣವನ್ನು ಬೆಂಗಳೂರಿನಲ್ಲಿ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಅಂದರೆ ಇರತಕ್ಕಂಥ ಆಸ್ಪತ್ರೆಗಳಿಗೆ, ಪ್ರಪಂಚದಲ್ಲಿರತಕ್ಕಂಥ ಆಧುನಿಕವಾದ ಎಲ್ಲಾ ಯಂತ್ರೋಪಕರಣಗಳನ್ನು ಜೋಡಣೆ ಮಾಡುವುದು. ನಮ್ಮ ಸರ್ಕಾರದಲ್ಲಿ ದುಡ್ಡಿಲ್ಲ.

ಅದಕ್ಕೋಸ್ಕರವೇ ಇದನ್ನು ಯೋಚನೆ ಮಾಡಿದೆವು we must take this opportunity ಇದನ್ನು ಅವರು ಎನ್.ಆರ್.ಐ. ಹುಡುಗರನ್ನು ಸೇರಿಸಿಕೊಳ್ಳುವಾಗ ನಾವು ಏಕೆ ಮಾಡಬಾರದು? ಇದನ್ನು ಯೋಚನೆ ಮಾಡಿ ಒಂದು ನಿರ್ಣಯ ಮಾಡಿ, ಗೌರ್ನಮೆಂಟ್ ಆರ್ಡರನ್ನು ಇಶ್ಯೂ ಮಾಡಿದ್ದೇವೆ. 1996-97ರಲ್ಲಿ ನಾವು ಆ ಅಡ್ಮಿಷನ್ನನ್ನು ಮಾಡುತ್ತೇವೆ. ಆ ದುಡ್ಡನ್ನು ಬೇರೆಯದಕ್ಕೆ ಉಪಯೋಗ ಮಾಡದೇ ಬೆಂಗಳೂರಿನಲ್ಲಿ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮಾಡಬೇಕು. ವಿಕ್ಟೋರಿಯಾ ಆಸ್ಪತ್ರೆ ಜಯದೇವ ಕಾರ್ಡಿಯಾಲಜಿ ಆಸ್ಪತ್ರೆ ಮತ್ತು ಕ್ಯಾನ್ಸರ್ ಇನ್ಸ್ಟಿಟ್ಯೂಟ್ ಇವನ್ನೆಲ್ಲಾ ಪ್ರಪಂಚದಲ್ಲಿ ಯಾವುದೇ ಭಾಗದಲ್ಲಿ ಇರತಕ್ಕಂಥ ಒಂದು ಆಸ್ಪತ್ರೆಗೆ ತತ್ಸಮಾನವಾಗಿ ಇರತಕ್ಕಂಥ ರೀತಿಯಲ್ಲಿ ಇದನ್ನು ನಾವು ಅಭಿವೃದ್ಧಿ ಮಾಡಬೇಕು ಎನ್ನತಕ್ಕಂಥದ್ದು ಆ ಒಂದು ಕಾರ್ಯಕ್ರಮ ಹಮ್ಮಿಕೊಂಡು ಇದಕೋಸ್ಕರ ಬಂದಂತಹ ಹಣವನ್ನೆಲ್ಲಾ ಎನ್.ಆರ್.ಐ. ಸ್ಟೂಡೆಂಟ್ಸನ್ನು ಗೌರ್ನಮೆಂಟ್ ಕಾಲೇಜುಗಳಿಗೆ ಅಡ್ಮಿಷನ್ನ ಮಾಡಿ ಅದರಲ್ಲಿ ಏನು ದುಡ್ಡು ಬರುತ್ತದೆಯೋ ಅದನ್ನೆಲ್ಲಾ ಅಲ್ಲಿ ವಿನಿಯೋಗ ಮಾಡಬೇಕು ಅಂತ ಹೇಳಿ ಮಾಡಿದ್ದೇವೆ ಅದು ಈ ಸರ್ಕಾರದ ನೀತಿ ಎನ್ನುವುದನ್ನು ನಾನು. ಈ ಸಂದರ್ಭದಲ್ಲಿ ತಮ್ಮ ಮುಂದೆ ತಿಳಿಸಲಿಕ್ಕೆ ಇಚ್ಛಿಸುತ್ತಿದ್ದೇನೆ. ಇದಾದ ಮೇಲೆ ನಮ್ಮ ಪರಿಶಿಷ್ಟ ಜಾತಿಯ ಜನರು ಏನು ಇದ್ದಾರೆ ಅವರಿಗೆ ಹಳದಿ ಕಾರ್ಡ ಕೊಡತಕ್ಕಂಥದ್ದನ್ನು ಆರೋಗ್ಯ ಸಚಿವರು ಅದೊಂದು

ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಅವರ ಇಲಾಖೆಯ ಚರ್ಚೆ ಬಂದಾಗ, ಅವರು ಅದರ ಬಗ್ಗೆ ಸುದೀರ್ಘವಾಗಿ ತಿಳಿಸಲು ಇಚ್ಛಿಸುತ್ತಾರೆ. ಇನ್ನು ನಾನು ಕೊನೆಗೆ ಎಜುಕೇಷನ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ನಾವು ಈ ಒಂದು ವರ್ಷದಲ್ಲಿ ಏನು ಮಾಡಿದ್ದೇವೆ ಎನ್ನುವುದನ್ನು ತಿಳಿಸಬೇಕಾಗುತ್ತದೆ. ಸುಮಾರು 18,700 ಟೀಚರ್ಸ್‌ನ್ನು ನೇಮಕ ಮಾಡಿದ್ದೇವೆ. ನಾವು ಈ ಹುದ್ದೆಗಳನ್ನು ಇದೇ ವರ್ಷದಲ್ಲಿ ಭರ್ತಿ ಮಾಡಿರತಕ್ಕಂಥದ್ದು. Action has been initiated to start recruitment of 200 secondary school teachers. ಈಗ ಇಂಟರವ್ಯೂ ನಡೆಯುತ್ತಿದೆ ಕೆ.ಪಿ.ಎಸ್.ಸಿ.ಯಲ್ಲಿ. Action has been taken to commence recruitment of 864 junior college lecturers. Action has been started for the recruitment of 534 headmasters from KPSC. 1264 new Government primary schools have been started in 95-96.

ನಾವು ಈ ವರ್ಷದ ಬಜೆಟಿನಲ್ಲಿ ತೋರಿಸಿರುವುದು ಬೇರೆ. 1264 ನ್ಯೂ ಗೌರ್ನಮೆಂಟ್ ಸ್ಕೂಲ್‌ಗಳನ್ನು ಈಗಾಗಲೇ ಈ ರಾಜ್ಯದಲ್ಲಿ ಶುರು ಮಾಡಿದ್ದೇವೆ. 1328 ಹೊಸ ಹೈಯರ್ ಪ್ರೈಮರಿ ಸ್ಕೂಲ್‌ಗಳನ್ನು ಈಗಾಗಲೇ ಈ ರಾಜ್ಯದಲ್ಲಿ ಶುರು ಮಾಡಿದ್ದೇವೆ. 95 ಪರ್ಸೆಂಟ್ ಹೈಸ್ಕೂಲ್‌ಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. 50 ಪರ್ಸೆಂಟ್ ಜೂನಿಯರ್ ಕಾಲೇಜುಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. 1995-96ರಲ್ಲಿ, ಅದರ ಜೊತೆಗೆ 12 ಸಾವಿರ ಕ್ಲಾಸ್‌ರೂಮ್ಸ್ ಕಟ್ಟುವುದಕ್ಕೆ ಹಣ ಒದಗಿಸಿದ್ದೇವೆ. ಒಂದೊಂದು ಕ್ಲಾಸ್‌ರೂಮ್‌ಗೆ 50 ಸಾವಿರ ರೂಪಾಯಿಗಳು ಇತ್ತು. ಅದನ್ನು 65 ಸಾವಿರ ರೂಪಾಯಿಗಳು ಮಾಡಿದ್ದೇವೆ. ಕಾಸ್ಟ್ ಆಫ್ ಕನ್ಸ್ಟ್ರಕ್ಷನ್ ಜಾಸ್ತಿ ಆಗಿದೆ ಅಂತ ಹೇಳಿ. The share of the government has been enhanced from Rs.25,000 to Rs. 40,000. ಇದರ ಜೊತೆಗೆ ಹೊಸದಾಗಿ ಸಹ ಎರಡು ಕೋಟಿ ರೂಪಾಯಿಗಳನ್ನು ಕನ್ಸ್ಟ್ರಕ್ಷನ್ ಆಫ್ ಕ್ಲಾಸ್‌ರೂಮ್ಸ್ ಇನ್ ಅರ್ಬನ್ ಏರಿಯಾ ಇದಕ್ಕೆ ನೀಡಿದ್ದೇವೆ. ಮೊದಲು ಮುನಿಸಿಪಾಲಿಟಿಗಳೇ ಮಾಡಿಕೊಳ್ಳಬೇಕಾಗಿತ್ತು, ಕಾರ್ಪೊರೇಷನ್‌ಗಳೇ ಮಾಡಿಕೊಳ್ಳಬೇಕಾಗಿತ್ತು, ಎರಡು ಕೋಟಿ ರೂಪಾಯಿಗಳನ್ನು ಅರ್ಬನ್ ಏರಿಯಾದಲ್ಲಿ ಕ್ಲಾಸ್‌ರೂಮ್ಸ್ ಕಟ್ಟುವಂಥದ್ದಕ್ಕೆ ಈ ವರ್ಷ ಅದನ್ನು ರಿಲೀಜ್ ಮಾಡಿದ್ದೇವೆ. ಎರಡು ಕೋಟಿ ರೂಪಾಯಿ ಪ್ರೈಮರಿ ಸ್ಕೂಲ್ ರಿಪೇರಿಗೆ ಈ ವರ್ಷ ರಿಲೀಜ್ ಮಾಡಿದ್ದೇವೆ. 3 ಕೋಟಿ ರೂಪಾಯಿ ವಾಟರ್ ಅಂಡ್ ಸ್ಯಾನಿಟರಿ ಫೆಸಿಲಿಟೀಸ್‌ಗೆ ಪ್ರೈಮರಿ ಅಂಡ್ ಸೆಕೆಂಡರಿ ಸ್ಕೂಲ್‌ಗೆ ಅದರ ಪಕ್ಕದಲ್ಲಿಯೇ ಒಂದು ಬೋರ್‌ವೆಲ್ ಹಾಕಿ ಕುಡಿಯುವ ನೀರು ಕೊಡತಕ್ಕಂಥದ್ದಕ್ಕೆ ಅದಕ್ಕೆ ಎರಡು ಕೋಟಿ ರೂಪಾಯಿಗಳನ್ನು ರಿಲೀಜ್ ಮಾಡಿದ್ದೇವೆ. 42 ಲಕ್ಷ ಮಕ್ಕಳಿಗೆ ಸಕಾಲದಲ್ಲಿ ಟೆಕ್ಸ್ಟ್‌ಬುಕ್ಸ್‌ನ್ನು ಒದಗಿಸುವಂಥದ್ದನ್ನು ಮಾಡಿದ್ದೇವೆ. 5 ಕೋಟಿ ರೂಪಾಯಿಗಳನ್ನು ಈ ಒಂದು ಬಾಬಿನಲ್ಲಿ ನಾವು ಉಳಿಸಿದ್ದೇವೆ. ಪೇಪರ್ ಕಾಸ್ಟ್ ಪರ್ ಟನ್ 20 ಸಾವಿರ ಇತ್ತು. ನಾವು ಈ ನಿರ್ಣಯ ತೆಗೆದುಕೊಳ್ಳುವಾಗ 32 ಸಾವಿರ ಆಯಿತು. ಅಂಥದ್ದರಲ್ಲಿ ನಾವು 5 ಕೋಟಿ ಉಳಿಸಿದ್ದೇವೆ. 94-95ನೇ ಸಾಲಿನಲ್ಲಿ ಏನಾಗಿದೆ ಅಂತ ನಾವು ಹೋಲಿಕೆ ಮಾಡಿದಾಗ 5 ಕೋಟಿ ರೂಪಾಯಿಗಳನ್ನು ನಾವು 42 ಲಕ್ಷ ಮಕ್ಕಳಿಗೆ ಟೆಕ್ಸ್ಟ್‌ಬುಕ್ ಕೊಡತಕ್ಕಂಥದ್ದು, ಪೇಪರ್ ಕಾಸ್ಟ್ 20 ಸಾವಿರ ರೂಪಾಯಿಗಳಿಂದ 32 ಸಾವಿರ ರೂಪಾಯಿಗಳಿಗೆ ಹೋದರೂ ಸಹ ನಾವು

ಈ ಒಂದು ಬಾಬಿನಿಂದ ಸುಮಾರು 5 ಕೋಟಿ ರೂಪಾಯಿಗಳನ್ನು ಉಳಿಸಿದ್ದೇವೆ. ಇದನ್ನು ನಾವು ಸದನ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಮತ್ತೆ ಯೂನಿಫಾರಮನ್ನು ಈ ವರ್ಷ 32 ಲಕ್ಷ ಜನ ಮಕ್ಕಳಿಗೆ ಮುಂದುವರಿಸಿಕೊಂಡು ಬಂದಿದ್ದೇವೆ. ಮುರಾರ್ಜಿ ದೇಸಾಯಿ ಅವರ ಹೆಸರಿನಲ್ಲಿ 20 ಶಾಲೆಗಳನ್ನು ಜಿಲ್ಲಾ ಮಟ್ಟದಲ್ಲಿ ನಾವು ಮಾಡಿದ್ದೇವೆ. ರೆಸಿಡೆನ್ಶಿಯಲ್ ಸ್ಕೂಲ್ಗೆ 95-96 ಏನು ಮಾಡಿದ್ದೇವೆ ಆ ಬಗ್ಗೆ ಅಂದ್ರೆ ಅದು ಸ್ವಲ್ಪ ಲೇಟ್ ತೀರ್ಮಾನ ಆದದ್ದರಿಂದ ಸ್ವಲ್ಪ ಮಟ್ಟಿಗೆ ತಡ ಆಯಿತು. ಇಂತಹ ಬಿಲ್ಡಿಂಗ್ ಬಗ್ಗೆ ಹೇಳುವುದಾದರೆ ಶಾಲೆಯು ಅವರೂ ನಾವು ಶುರು ಮಾಡಿದೆವು. ಅಲ್ಲಿ ಮಕ್ಕಳಿಗೆ ಕೆಲವು ಸಣ್ಣಪುಟ್ಟ ಸಮಸ್ಯೆಗಳು ಇವೆ. ಮುಂದಿನ ವರ್ಷ, ಯಾವುದೇ ಸಮಸ್ಯೆ ಇಲ್ಲದೇ ಇರುವ ರೀತಿಯಲ್ಲಿ ಮಾಡುತ್ತೇವೆ.

(ಅಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

ಅಲ್ಲಿ ಇಂತಹ ಮಕ್ಕಳಿಗೆ ಅವಶ್ಯಕವಾಗಿರತಕ್ಕಂಥ ಎಲ್ಲಾ ಉಪಕರಣಗಳನ್ನು ಕೊಟ್ಟಿದ್ದೇವೆ. ಅವರೆ ಸಾಕಷ್ಟು ರೂಮುಗಳಲ್ಲಿ ನಾನು ಎಲ್ಲಾ ಕಡೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಎಲ್ಲಾ ಒಂದೊಂದೇ ಕಡೆ ಹಾಕಿದ್ದಾರೆ. ಒಂದೊಂದು ರೂಮಿನಲ್ಲಿ 8-10 ಬೆಂಚುಗಳನ್ನು ಹಾಕಿದ್ದಾರೆ. ಅದನ್ನು ಮಾಡಬೇಕೆನ್ನುವ ಆಸೆ ಇತ್ತು ನಮಗೆ ಮಾಡಿದ್ದೇನೆ. 20 ರೆಸಿಡೆನ್ಶಿಯಲ್ ಸ್ಕೂಲ್ಗೆ ಮುರಾರ್ಜಿ ದೇಸಾಯಿಯವರ ಹೆಸರಿನಲ್ಲಿ 353 ಲಕ್ಷ ರೂಪಾಯಿಗಳನ್ನು ಈ ಒಂದು ಬಾಬಿಗೆ ಕೊಟ್ಟಿದ್ದೇವೆ. ಅದರ ಜೊತೆಗೆ 5 ರೆಸಿಡೆನ್ಶಿಯಲ್ ಸ್ಕೂಲ್ಗಳನ್ನು ಮೈನಾರಿಟೀಸ್ಗೆ ಕೊಟ್ಟಿದ್ದೇವೆ. ಇದನ್ನು ತಾವಾದರೂ ಮೆಚ್ಚಿಕೊಳ್ಳಬೇಕು. ಇಲ್ಲಿಯವರೆಗೂ ಬಿ.ಎಡ್.ಇರಬಹುದು. ಟಿ.ಸಿ.ಹೆಚ್. ಇರಬಹುದು ಇವುಗಳ ಅಡ್ಮಿಷನ್ನ ಅನ್ನು ನಾವು ಖಾಸಗಿಯವರಿಗೆ ಬಿಟ್ಟುಕೊಟ್ಟಿಲ್ಲ. ಒಂದೊಂದು ಬಿ.ಎಡ್.ಮತ್ತು ಟಿ.ಸಿ.ಹೆಚ್. ಸೀಟುಗಳಿಗೆ 20-25 ಸಾವಿರ ರೂಪಾಯಿಗಳ ವ್ಯಾಪಾರ ನಡೆಯುತ್ತಿತ್ತು. ಸನ್ಮಾನ್ಯ ಅಧ್ಯಕ್ಷರೇ ಇದನ್ನು ನಾವು ಸೆಂಟರ್ ಜೈಲ್ ಮಾಡಿದ್ದೇವೆ ನಾವೇ ತೆಗೆದುಕೊಂಡಿದ್ದೇವೆ. No question of admission. ಆ ಹುಡುಗರು ಯಾರೇ ಸೇರಿಕೊಳ್ಳಲಿ ನಾವು ಏನು ಕೆಲವೊಂದು ಕ್ವಾಲಿಫಿಕೇಶನ್ನ ಮಾಡಿದ್ದೇವೆ ಬ್ಯಾಕವರ್ಡ್ ಕ್ಲಾಸ್ ಷೆಡ್ಯೂಲ್ಡ್ ಕ್ಯಾಸ್ಟ್ ಮೈನಾರಿಟೀಸ್, ಏನು ಮಾಡಿದ್ದೇವೆ ಅದರ ಆಧಾರದ ಮೇಲೆ ಸರ್ಕಾರವೇ ನಮ್ಮ ಒಂದು ಸಮಿತಿಯ ಆಶ್ರಯದಲ್ಲಿ ಅಡ್ಮಿಷನ್ನ ಮಾಡತಕ್ಕಂಥದ್ದನ್ನು ಮೊದಲನೇ ಬಾರಿಗೆ ಈ ರಾಜ್ಯದಲ್ಲಿ ನಾವು ಜಾರಿಗೆ ತಂದೆವು. ಟಿ.ಸಿ.ಹೆಚ್. ಇರಬಹುದು ಬಿ.ಎಡ್.ಇರಬಹುದು. ಅಪ್ರಿಸಿಯೇಶನ್ ಫ್ರಮ ಆಲ್ ಕ್ವಾರ್ಟರ್ಸ್ ನಿಮಗೆ ಒಂದು ಮಾತನ್ನು ಹೇಳುವುದಾದರೆ ನಮಗೆ ಹಲವಾರು ಜನ ಪತ್ರ ಬರೆದಿದ್ದಾರೆ. ಈ ವಿಷಯದಲ್ಲಿ ಕಠಿಣವಾದ ಕ್ರಮ ತೆಗೆದುಕೊಂಡಿದ್ದು ಬಹಳ ಒಳ್ಳೆಯದಾಯಿತು ಎನ್ನತಕ್ಕಂಥ ಮಾತನ್ನು ಹೇಳಿ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರ ಜೊತೆಗೆ ನಾವು ಡಿಸ್ಟ್ರಿಕ್ಟ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್ ಟ್ರೈನಿಂಗ್ ಇದು ಕೇಂದ್ರ ಸರ್ಕಾರದ ಒಂದು ಯೋಜನೆಯಿಂದ ನಾವು 20 ಕೋಟಿ ರೂಪಾಯಿಗಳನ್ನು ಅದರ ಆಶ್ರಯದಲ್ಲಿ ನಾವು ಈ ರಾಜ್ಯದಲ್ಲಿ ಅನುಷ್ಠಾನಕ್ಕೆ ತಂದಿದ್ದೇವೆ. ಇದರ ಜೊತೆಗೆ innovative programme of preparation of the minimum level learning text-books has been taken up involving about 100 best primary school and high school teachers.

ಆದರೆ ಇನ್ನೊಂದು ಹೊಸದಾಗಿ ಬರೆದ, these books would be tried out on experimental basis in four DPED districts next year. The cost will be Rs. 15.85 crores. ಗಿರಿಜನರಿಗೋಸ್ಕರ 32 ಸಂಸ್ಕೃತ ಪಾಠ ಶಾಲೆಗಳನ್ನು SC/ST ಮಾನ್ಯ ಸದಸ್ಯರುಗಳಿಗೆ ಈ ಸಾರಿ ಕೊಟ್ಟಿದ್ದಾರೆ. ಜಿಲ್ಲೆಗಳಲ್ಲಿ ಇವನ್ನು ಮುಚ್ಚಿಕೊಳ್ಳುತ್ತಿದ್ದಾರೆ. ಆದರೆ ಇದನ್ನು ಸುಧಾರಿಸ ಮಾಡುವುದಕ್ಕೆ ಅವರು ಬೇರೆ ಬೇರೆ ಸಮಿತಿ ಸಮಿತಿಗಳನ್ನು ನೇಮಕ ಮಾಡಿದ್ದಾರೆ. ಒಂದು ಕಡೆ ಶ್ರೀ ಕೃಷ್ಣಸ್ವಾಮಿ ಅವರ, to curb examination malpractices. ಸಮಿತಿ ಮಾಡಿದ್ದಾರೆ ಅವರ ವರದಿಯಲ್ಲಿ ಏನು ಕೊಟ್ಟಿದ್ದಾರೆ ಅದರ ಮೇಲೆ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಇನ್ನೊಂದು ಕಡೆ ರಾಂತರು ರೆಡ್ಡಿ ಡಿ.ಕೆ.ಹ. to improve the quality of education in schools, ಅದನ್ನು ಪರಿಗಣನೆ ಮಾಡಬೇಕು ಎನ್ನುವುದಕ್ಕೆ ಸಮಿತಿ ಮಾಡಿದ್ದಾರೆ. ಅವರು ವರದಿ ಕೊಟ್ಟ ಮೇಲೆ ನಾನು ನಿರ್ಣಯ ಮಾಡುತ್ತೇನೆಂದು ಹೇಳಿದ್ದಾರೆ. ಅದೇ ರೀತಿ ಪ್ರಾಥಮಿಕ - to improve the quality of primary education. ಅದರದೊಂದು ಸಮಿತಿ ಮಾಡಿದ್ದಾರೆ. ಜೊತೆಗೆ he has taken lot of pains in revamping various lapses in the Education Department. ಇದರ ಜೊತೆಗೆ ಕೇಂದ್ರ ಸರ್ಕಾರದವರಿಂದ ನಮಗೆ 4 ಜಿಲ್ಲೆಗಳಲ್ಲಿ ಡಿಪಿ ಇದೆ ಪ್ರೋಗ್ರಾಂ 4 ಜಿಲ್ಲೆಗಳಿಗೆ ಬಂದು ನಮಗೆ ಕೊಟ್ಟಿದ್ದಾರೆ. ಕೋಲಾರ ಮಂಡ್ಯ ಬೆಳಗಾಂ ಮತ್ತು ರಾಯಚೂರು ಈ ಸಾರಿ ಆ ಸ್ಕೀಮ್ ಬಂದು ಇವತ್ತಿನ ಕೊಡುವ ಮೇಲೆ ಇಲ್ಲಿ ಕುಂದು ಕೊರತೆ ಕಲಿಸ ನಡೆದಿದೆ ಎಂದು ಹೇಳಿ, ಇನ್ನು 5 ಜಿಲ್ಲೆಗಳಿಗೆ 200 ಕೋಟಿ ರೂಪಾಯಿಗಳ ಅಧಿಕ ಸಾಲವನ್ನು ಕೊಟ್ಟು ಅದನ್ನು ಎಕ್ಸ್‌ಟೆಂಡ್ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಇನ್ನು ಹೈಯರ್, ಎಜುಕೇಷನ್‌ನಲ್ಲಿ action has been taken to sanction 30 new first grade colleges. Action has been taken to fill up 753 lecturers posts and 700 posts of non-teaching staff, and the Common Entrance Test has been conducted in an exemplary manner. The admissions have been completed by the end of October, 1995.

ಮಾನ್ಯ ಅಧ್ಯಕ್ಷರೇ ನಾನು ಈ ಮಾತನ್ನು ಹೇಳುವಾಗ ಏತಕ್ಕೆ ಇದು ದೊಡ್ಡ ಸಾಧನೆಯೇ ಅಂತ ಕೇಳಿದರೆ 94-95ರಲ್ಲಿ ಅಡ್ಮಿಷನ್ ಏಪ್ರಿಲ್‌ವರೆಗೂ ಆಯಿತು. 95 ಜೂನ್ ಜುಲೈನಲ್ಲಿ ಮಾಡಬೇಕಾದರೆ ಅಡ್ಮಿಷನ್ನು 95 ಏಪ್ರಿಲ್ ವರೆಗೂ ಆಯಿತು.

The Supreme Court directed us to give one more opportunity through paper advertisement. 1994ರಲ್ಲಿ ಮಾಡಬೇಕಾದ ಅಡ್ಮಿಷನ್ 1995ರ ಏಪ್ರಿಲ್ ಎಂಡ್‌ನಲ್ಲಿ ಮಾಡಲಾಯಿತು. ಮೊದಲಸಾರಿ ಅಕ್ಟೋಬರ್ 1995ರ ಹೊತ್ತಿಗೆ ಮೆಡಿಕಲ್ ಕಾಲೇಜು ಮತ್ತು ಇಂಜಿನೀಯರಿಂಗ್ ಕಾಲೇಜುಗಳಿಗೆ ಸೇರುವ ವಿದ್ಯಾರ್ಥಿಗಳಿಗೆ ಇಂಟರೆಸ್ಟ್ ಅಡ್ಮಿಷನ್ ಮಾಡಿ ಮುಗಿಸಿದ್ದೇವೆಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಅದಾದ ಮೇಲೆ ಮುಂದಿನ ಕಾರ್ಯಕ್ರಮದಲ್ಲಿ

ಕೋಲಾರ ಮತ್ತು ತುಮಕೂರಿನಲ್ಲಿ ಪೋಸ್ಟ್ ಗ್ರ್ಯಾಜುಯೇಟ್ ಸೆಂಟರನ್ನು ಈ ವರ್ಷ ತೆಗೆಯಬೇಕೆಂದು ತೀರ್ಮಾನ ಮಾಡಿದ್ದೇವೆ. Vocational courses have been introduced in 14 degree colleges with UGC assistance. 30% of the seats have been reserved for girls in polytechnics. The World Bank polytechnic education programme has been implemented in an excellent manner. As an appreciation of the State Government's efforts, the world bank has sanctioned Rs.6 crores additional projects. The total cost of the enhanced project is about Rs. 52 crores. Sanction has been accorded for the establishment of an open university at Mysore. ಇದರ ಜೊತೆಗೆ ಈ ವರ್ಷದ ಬಜೆಟಿನಲ್ಲಿ ಏನೇನು ಮಾಡುತ್ತೇವೆಂದು ಹೇಳಿರುವುದರಿಂದ ಅದನ್ನು ಪುನರ್ ಉಚ್ಚಾರ ಮಾಡಲಿಕ್ಕೆ ನಾನು ಹೋಗುವುದಿಲ್ಲ. ಈ ವರ್ಷ 200 ಗೌರ್ನಮೆಂಟ್ ಹೈಸ್ಕೂಲುಗಳನ್ನು ಓಪನ್ ಮಾಡತಕ್ಕಂಥದ್ದು, ಜೂನಿಯರ್ ಕಾಲೇಜುಗಳನ್ನು ಓಪನ್ ಮಾಡತಕ್ಕಂಥದ್ದು ಒಂದು ಸಾವಿರ ಲೋಯರ್ ಪ್ರೈಮರಿ ಸ್ಕೂಲುಗಳನ್ನು ಮಾಡತಕ್ಕಂಥದ್ದು, ಒಂದು ಸಾವಿರ ಸೆಕೆಂಡರಿ ಸ್ಕೂಲುಗಳನ್ನು ಕೊಡುವಂಥದ್ದಕ್ಕೆ ತೀರ್ಮಾನ ಮಾಡಿದ್ದೇವೆ. ಇದಲ್ಲದೆ ರಾಜ್ಯದಲ್ಲಿ 10 ಸಾವಿರ ಕ್ಲಾಸ್ ರೂಮುಗಳನ್ನು ಕಟ್ಟುವುದಕ್ಕೆ ಪ್ರತ್ಯೇಕವಾಗಿ 40 ಕೋಟಿರೂಪಾಯಿಗಳನ್ನು ಜಿಲ್ಲಾ ಪಂಚಾಯಿತಿ ಮೂಲಕ ಒದಗಿಸಲಾಗುತ್ತದೆಂದು ಈಗಾಗಲೇ ಮಾನ್ಯ ಅರ್ಥ ಸಚಿವರು ತಿಳಿಸಿದ್ದಾರೆ. ಈ ಎಲ್ಲಾ ಸರ್ಕಾರದ ಗುರಿಗಳು ಏನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ತಿಳಿಸಿ, ಮೊದಲು ಈ ವಿಷಯಗಳನ್ನು ನಾನು ಏತಕ್ಕೆ ಕೈಗೆ ತೆಗೆದುಕೊಂಡೆ ಎಂದರೆ, ಈ ಸರ್ಕಾರದ ಮೊದಲನೆಯ ಗುರಿ ಹಳ್ಳಿಯವರ ಪರವಾಗಿದೆ, ಬಡವರ ಪರವಾಗಿದೆ. ಇದರಲ್ಲಿ ಹಳ್ಳಿಯವರು ಪಟ್ಟಣದವರು ಎಂದು ತಾರತಮ್ಯ ಇಲ್ಲ. ಯಾವುದರಲ್ಲಿ ವಂಚಿತರಾಗಿದ್ದಾರೋ? ಆ ವಂಚಿತರಾಗಿರತಕ್ಕಂಥ ಜನರಿಗೆ ಶಕ್ತಿ ಕೊಡಬೇಕೆಂಬುದೇ ಈ ಸರ್ಕಾರದ ಗುರಿ. ನಿರ್ದಾಕ್ಷಿಣ್ಯವಾಗಿ ಯಾವ ಕಾರಣದಿಂದಲೂ ಹಿಂದೆ ಬೀಳುವುದಿಲ್ಲವೆಂದು ನೇರವಾಗಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಬಂಗಾರಪ್ಪನವರು ಸರ್ಕಾರ ಇದ್ದಾಗ ಹಳ್ಳಿ ಕಡೆ ಹುಡುಗರಿಗೆ 15 ಹೆಚ್ಚು ಮಾರ್ಕ್ಸನ್ನು ನೇಮಕಾತಿಯಲ್ಲಿ ಕೊಡಬೇಕೆಂದು ತೀರ್ಮಾನ ಮಾಡಿದ್ದರು, ನಂತರ ಮಾನ್ಯ ಮೊಯಿಲಿಯವರ ಸರ್ಕಾರ ಬಂದ ಮೇಲೆ ಟೋಟಲ್ ಮಾರ್ಕ್ಸನಲ್ಲಿ 5 ಪರ್ಸೆಂಟ್ ಹೆಚ್ಚಿಗೆ ಕೊಡಬೇಕೆಂಬ ತೀರ್ಮಾನ ಮಾಡಿದ್ದರು. ಇವೆಲ್ಲವನ್ನೂ ನಾವು ಪರೀಕ್ಷೆ ಮಾಡಿ ಮತ್ತು ಇದರ ಬಗ್ಗೆ ಕೋರ್ಟ್ ಡಿಸಿಷನ್ ಬಂದ ಕಾರಣ 10 ಮಾರ್ಕ್ಸ ಕೊಡುವುದರ ಜೊತೆಗೆ, ಇಂಟರವ್ಯೂನಲ್ಲಿ ಕೊಡತಕ್ಕಂಥ 25 ಮಾರ್ಕ್ಸನ್ನು 50 ಕ್ಕೆ ಏರಿಸಿದ್ದೇವೆ. ಇಂಟರವ್ಯೂ ಕಮಿಟಿಯಲ್ಲಿ ಒಂದು ಶ್ರೇಣಿಯ ಮೇಲೆ ಉದಾಹರಣೆಗೆ ಕ್ಲಾಸ್ 3(ಬಿ) ಆ ಗ್ರೂಪಿನಲ್ಲಿ ಪತ್ತೆಯಾದ ಹಿಂದುಳಿದ ಜಾತಿಗಳು ಬರುತ್ತವೆ. ಅದರಲ್ಲಿ ಬರತಕ್ಕಂಥ ಒಂದು ಪ್ರಬಲ ಜಾತಿಗೆ ಎಲ್ಲಾ ಹುದ್ದೆಗಳು ಹೋಗಬಾರದೆಂದು ಇಂಟರವ್ಯೂ ಮಾರ್ಕ್ಸನ್ನು 25 ರಿಂದ 50 ಕ್ಕೆ ಹೆಚ್ಚು ಮಾಡಿದ್ದೇವೆ. ಇದರ ಬಗ್ಗೆ ಕೆ.ಪಿ.ಎಸ್.ಸಿ. ಮೆಂಬರ್‌ಗಳನ್ನೆಲ್ಲಾ ಕರೆಯಿಸಿ ವಿಚಾರ ಮಾಡಿದ್ದೇವೆ. ಮಹಾರಾಷ್ಟ್ರ ಸರ್ಕಾರದಲ್ಲಿ ಇದೇ ರೀತಿ 10 ಪರ್ಸೆಂಟ್ ಹೆಚ್ಚು ಮಾಡಿದ್ದಕ್ಕೆ ಸಾಕಷ್ಟು ಶಕ್ತಿ ಕೊಡಬೇಕೆಂದು ನಾವೆಲ್ಲರೂ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ

ಬಂದಿದ್ದೇನೆ. ನಮ್ಮ ರಾಜ್ಯದಲ್ಲಿ ಇಷ್ಟು ಮಾರ್ಕ್ಸ್ ಇರಬೇಕೆಂದು ಇದುವರೆಗೆ ಯಾವ ಕೋರ್ಟ್ ಅಡ್ಡಿ ಮಾಡಿಲ್ಲ, ಹಳ್ಳಿ ಮಕ್ಕಳಿಗೆ ಇಂಟರವ್ಯೂನಲ್ಲಿ 50 ಪರ್ಸೆಂಟ್ ಕೊಡುವುದರ ಜೊತೆಗೆ ನಾವು ಹತ್ತು ಹನ್ನೆರಡು ಮಾರ್ಕ್ಸನ್ನು ಹಳ್ಳಿ ಮಕ್ಕಳಿಗೆ. ದುರ್ಬಲ ವರ್ಗದ ಮಕ್ಕಳಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಕೆ.ಪಿ.ಎಸ್.ಸಿ.ಯವರ ಅಭಿಪ್ರಾಯ ಕೊಟ್ಟ ಪ್ರಕಾರ, ಮತ್ತು ಲೀಗಲ್ ಆಗಿ ಇದಕ್ಕೆ ಏನೂ ಅನಾಹುತವಾಗಬಾರದೆನ್ನುವ ಉದ್ದೇಶದಿಂದ, ಹೊಸ ನೇಮಕಾತಿ ನೀತಿಯನ್ನು ಜಾರಿಗೆ ತರಬೇಕೆಂದು ಈಗಾಗಲೇ ನಮ್ಮ ಸಂಪುಟದಲ್ಲಿ ನಿರ್ಣಯ ಮಾಡಿದ್ದೇವೆ. ಶೀಘ್ರದಲ್ಲೇ ಕಟಾಫ್ ಅಂಡ್ ರಿಕ್ರೂಟ್‌ಮೆಂಟನ್ನು ಹೊಸದಾಗಿ ಜಾರಿಗೆ ಕೊಡಲಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 5-10 ಪರ್ಸೆಂಟ್ ಪ್ರಕಾರ ಕೊಡುವುದರಿಂದ ಎಲ್ಲರಿಗೂ ಉಪಯೋಗವಾಗುತ್ತದೆ. ಡಿಸ್ಕ್ರೀಷನ್ ಪ್ರಕಾರ 50 ಪರ್ಸೆಂಟ್ ಕೊಡುವುದನ್ನು ಬೇಕಾದವರಿಗೆ ಕೊಡುತ್ತಾರೆ, ಬೇಡವಾದವರಿಗೆ ಕೊಡುವುದಿಲ್ಲ, ತಮಗೆ ಗೊತ್ತಿದ್ದ ಹಾಗೆ ಪಿ.ಎಸ್.ಸಿ.ನಲ್ಲಿ ಎ-ಬಿ ಗ್ರೂಪ್ ಅಷ್ಟೇ ಕೇಳುವುದಿಲ್ಲ, ಅದರಲ್ಲಿ ಕ್ಯಾಸ್ಟ್ ಸಬ್ ಕ್ಯಾಸ್ಟ್ ಆಗಿ ಇನ್ನಷ್ಟು ಹೊಲಸಾಗುತ್ತದೆ. ಆದಕ್ಕಾಗಿ ಇದರಲ್ಲಿ 5 ಪರ್ಸೆಂಟ್ ಅಥವಾ 10 ಪರ್ಸೆಂಟ್ ಎಂದು ನಿಗದಿ ಮಾಡುವುದು ಒಳ್ಳೆಯದು.

ಶ್ರೀ ಹೆಚ್.ಡಿ.ದೇವೇಗೌಡ : ಇದರ ಬಗ್ಗೆ ಲೀಗಲ್ ಆಗಿ ಎಕ್ಸಾಮಿನೇಷನ್ ಮಾಡಿಸಿದ್ದೇನೆ. ಈ ಬಗ್ಗೆ ನನ್ನ ಭಾವನೆಯನ್ನು ಟೀಕೆ ಮಾಡಿದರೂ ಚಿಂತೆ ಇಲ್ಲ. ಇದರ ಬಗ್ಗೆ ಯಾರ ಮೇಲೆ ಟೀಕೆ ಆಗಿಲ್ಲ? ಕೆ.ಪಿ.ಎಸ್.ಸಿ. ಬಗ್ಗೆ ಇದೇ ಸದನದಲ್ಲೇ ಸಾಕಷ್ಟು ಚರ್ಚೆಯಾಗಿದೆ. ಒಟ್ಟಿನಲ್ಲಿ ಹಳ್ಳಿ ಮಕ್ಕಳಿಗೆ ಹೆಚ್ಚು ಶಕ್ತಿ ಕೊಡಬೇಕೆನ್ನುವುದೇ ನಮ್ಮ ಗುರಿ. ಇದರಲ್ಲಿ ಸಣ್ಣ ಪುಟ್ಟ ದೋಷಗಳು ಇರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ದೋಷ ರಹಿತವಾದ ವ್ಯವಸ್ಥೆಯನ್ನು ಪ್ರಜಾಪ್ರಭುತ್ವದಲ್ಲಿ ಕಾಣುತ್ತೇವೆನ್ನುವುದರಲ್ಲಿ ನನಗೆ ಅನುಮಾನ ಇದೆ. ಇದರ ಬಗ್ಗೆ ನನ್ನೇ ದೇ ಅದಂಥ ಅನುಭವವನ್ನು ಹೊಂದಿದ್ದೇನೆ. ಆದರೂ ಅವರು ಹೇಳಿದ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಆದರೆ, the intention of the government is to help the rural boys who are facing lot of problems. ಇವತ್ತು ಸಿಂಗಲ್ ಟೀಚರ್ ಸ್ಕೂಲಿನಲ್ಲಿ 15 ದಿವಸಕ್ಕೆ ಅಥವಾ 20 ದಿವಸಕ್ಕೆ ಒಂದು ಸಾರಿ ಟೀಚರ್ ಬಂದು ಅಟೆಂಡೆನ್ಸ್ ಹಾಕಿ ಹೋಗುತ್ತಾನೆ. ಸಿಂಗಲ್ ಟೀಚರ್ ಸ್ಕೂಲ್ ಒಂದೂ ನಮ್ಮ ರಾಜ್ಯದಲ್ಲಿ ಇರಬಾರದೆಂದು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಹಳ್ಳಿಗಳ ಕಡೆ ಇರುವ ಸ್ಕೂಲುಗಳಲ್ಲಿ ಪೀಠೋಪಕರಣಗಳಿಲ್ಲ, ಪಾಠೋಪಕರಣಗಳಿಲ್ಲ, ಸರಿಯಾದ ವ್ಯವಸ್ಥೆಯಿಲ್ಲ. ಇಂಥ ಸನ್ನಿವೇಶದಲ್ಲಿ ಮಕ್ಕಳು ಓದುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಆ ಮಕ್ಕಳೂ 30 ಪರ್ಸೆಂಟ್ ಜಾಬ್ಸಿಗೆ ಹೋಗಬೇಕು. ಆದ್ದರಿಂದ, ಹಳ್ಳಿ ಮಕ್ಕಳಿಗೆ ಶಕ್ತಿ ಕೊಡುವುದಕ್ಕೋಸ್ಕರ (ಎ) ಗ್ರೂಪ್ ಇರಬಹುದು (ಬಿ) ಗ್ರೂಪ್ ಇರಬಹುದು (ಸಿ) ಗ್ರೂಪ್ ಇರಬಹುದು, ಶೆಡ್ಯೂಲ್ಡ್ ಕ್ಯಾಸ್ಟ್ ಇರಬಹುದು, ಇದಕ್ಕೆ ರಿಸರ್ವೇಶನ್ ಕೊಟ್ಟರೆ ತನ್ನಷ್ಟಕ್ಕೆ ತಾನೇ ಬರುತ್ತದೆ. ಅದರಲ್ಲಿ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲವಾದ್ದರಿಂದ ನಾವು ಈ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇನ್ನು ನಗರಗಳಿಗೆ ಕುಡಿಯುವ ನೀರು ಒದಗಿಸುವ ಸಲುವಾಗಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀವೆಂದು ಈ ಸಂದರ್ಭದಲ್ಲಿ ಹೇಳಲೇಬೇಕಾಗಿದೆ.

ಬೆಂಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸುವ ಸಲುವಾಗಿ ಕಾವೇರಿ ನದಿಯಿಂದ ನೀರು ತರುವ 4ನೇ ಹಂತದ ಯೋಜನೆಗೆ (ಓವರ್ ಸೀಸ್ ಎಕನಾಮಿಕ್ ಕೋ-ಆಪರೇಷನ್ ಫಂಡ್) ಜಪಾನ್.ಇವರಿಂದ 1.070 ಕೋಟಿ ರೂಪಾಯಿಗಳನ್ನು ಸಾಲ ಪಡೆಯುವುದಕ್ಕೆ ಅಗ್ರಿಮೆಂಟ್ ಸೈನ್ ಆಗಿದೆ. ಆದರೆ, ಇದರ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಮೋಸ ತೆಗೆದಿದ್ದಾರೆ. ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಸಲುವಾಗಿ 4ನೇ ಹಂತದಲ್ಲಿ 9.5 ಟಿ.ಎಂ. ಸಿ ಫೀಟ್. ಟಿ ಯಷ್ಟು ನೀರು ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ಸಿಕ್ಕಿದ ಮೇಲೆ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತೇವೆ. ಈ 4ನೇ ಹಂತಕ್ಕೆ ಹಿಂದಿನ ಕಾಲದಲ್ಲೇ ಗುದ್ದಲಿ ಪೂಜೆ ಮಾಡಿದ್ದರೂ, ಕೆಲಸಕ್ಕೆ ಮಂಜೂರಾತಿ ದೊರಕಿರಲಿಲ್ಲ. ಈಗ ತಾನೇ ಮಂಜೂರಾತಿ ಸಿಕ್ಕಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಧಾನ ಮಂತ್ರಿಗಳನ್ನು ಮತ್ತು ಕೇಂದ್ರ ನೀರಾವರಿ ಸಚಿವರನ್ನು ಭೇಟಿ ಮಾಡಿ, ಕಾವೇರಿ ಜಲದಿಂದ ನಮ್ಮ ರಾಜ್ಯಕ್ಕೆ ಎಷ್ಟು ಲಭ್ಯವಿದೆಯೋ ಅದರಲ್ಲಿ 9.5 ಟಿ.ಎಂ.ಸಿಫೀಟ್ ಟಿ ಯಷ್ಟು ನೀರನ್ನು ನಾವು ಕಡಿತ ಮಾಡಿಕೊಳ್ಳುವುದಕ್ಕೆ ಸಿದ್ಧವಿದ್ದೇವೆಂದು ಆ ಷರತ್ತಿನ ಮೇಲೆ ಈ ಯೋಜನೆಗೆ ಕ್ಲಿಯರೆನ್ಸ್ ಕೊಡಬೇಕೆಂದು ಪ್ರಧಾನ ಮಂತ್ರಿಗಳಿಗೆ ತಿಳಿಸಿದ್ದೇನೆ. ಇದಕ್ಕೆ ಕ್ಲಿಯರೆನ್ಸ್ ಕೊಡುತ್ತೇವೆಂದು ಪ್ರಧಾನ ಮಂತ್ರಿಗಳೂ ಹೇಳಿದ್ದಾರೆ.

1.10 ಪಿ.ಎಂ.

ಬಹುಶಃ ಈ ವಾರದಲ್ಲಿ ನಮಗೆ ಕ್ಲಿಯರೆನ್ಸ್ ಸಿಕ್ಕಬಹುದೆಂಬ ಭರವಸೆಯು ನನಗಿದೆ. ಆ ಕೆಲಸವನ್ನು ಪ್ರಾರಂಭ ಮಾಡುತ್ತೇನೆ. ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬೆಂಗಳೂರು ನಗರಕ್ಕೇನೇ ಇಷ್ಟೆಲ್ಲಾ ಸೌಲಭ್ಯಗಳನ್ನು ಕೊಡತಕ್ಕಂಥದ್ದು, ಇದನ್ನು ಪದೇ ಪದೇ ಎಲ್ಲಾ ಸರಕಾರಗಳವರೂ ಮಾಡಿಕೊಂಡು ಬಂದಿದ್ದಾರೆ. ಅದೇ ರೀತಿಯಲ್ಲಿ ಇಡೀ ರಾಜ್ಯದಲ್ಲಿನ ಎಲ್ಲಾ ನಗರದ ಪ್ರದೇಶಗಳಿಗೂ, ಅದು ತಾಲ್ಲೂಕು ಕೇಂದ್ರ ಇರಬಹುದು, ಜಿಲ್ಲಾ ಕೇಂದ್ರ ಇರಬಹುದು. ಒಟ್ಟು ಸುಮಾರು 185 ಪಟ್ಟಣಗಳು ಬರುತ್ತವೆ. ಎಲ್ಲಾ ನಗರಗಳಿಗೆ ಸಂಬಂಧಪಟ್ಟ ಹಾಗೆ ಒಂದು ಸಾಮೂಹಿಕ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಂದ್ರ ಸರಕಾರದ ಅರ್ಥ ಸಚಿವರ ಜೊತೆಗೆ ಚರ್ಚೆ ಮಾಡಿದ್ದೇನೆ. ನೀವು ಕಾರ್ಯಯೋಜನೆಯನ್ನು ಮಾಡಿ ಕೊಡಿ ನಾನು ವಿಶ್ವಬ್ಯಾಂಕಿನವರಿಂದ ಹಣವನ್ನು ಕೊಡಿಸಿಕೊಡುತ್ತೇನೆಂದು ಅವರು ಹೇಳಿದ್ದಾರೆ. ಇವೊತ್ತು 1200 ಕೋಟಿ ರೂ.ಗಳಿಗೆ ಇಡೀ ರಾಜ್ಯದ ಎಲ್ಲಾ ನಗರ ಪ್ರದೇಶಗಳಿಗೆ ಅಂದರೆ ಅದು ಯಾವ ಊರು ಎಂಬ ಪ್ರಶ್ನೆ ಇಲ್ಲ. We have prepared a master plan and we are going to submit the same to the Government of India within a week. ವರ್ಲ್ಡ್ ಬ್ಯಾಂಕಿನ ಪ್ರೊಜೆಕ್ಟ್ ಮಾಡುತ್ತೇವೆ. ಅವರ ಸ್ಟಿಪ್ಯುಲೇಷನ್ ನೀರಿನ ದರವನ್ನು ಜಾಸ್ತಿ ಮಾಡಬೇಕೆಂಬ ಷರತ್ತನ್ನು ಅವರು ಹಾಕಿದ್ದಾರೆ. ಅದನ್ನು ಜಾಸ್ತಿ ಮಾಡುತ್ತೇವೆ. ಬೇರೆ ವಿಧಿ ಇಲ್ಲ. We have no other option but to accept their conditions. ಅದು ಇಲ್ಲವಾದರೆ 1200 ಕೋಟಿ ರೂ.ಗಳ ಹಣವನ್ನು ನಾವು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಹಿಂದಿನ ಸರಕಾರದವರು ಸುಮಾರು 300 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದಾರೆ. ಇದನ್ನು ಯಾವುದೇ ಸರಕಾರದವರು ಮಾಡಲಿ, ಅದನ್ನು ನಾನು ಈ

[illegible] 1984[illegible] [illegible] Nobody wants to shoulder the responsibility. that is the atmosphere we have built up. [illegible] 1200 [illegible] 10-12[illegible] We have changed our philosophy and now we would like to provide water to all those villages. [illegible] This is one of the major decisions we have taken.

[illegible] taxation structure, [illegible]

ನಾವೆಷ್ಟು ಕೊಡಬೇಕು? ಲೋನ್ ಕಾಂಪೊನೆಂಟ್ ಹೇಗೆ ಇರಬೇಕು? ಇದರ ಬಗ್ಗೆಯೂ ಕೂಡ ಇತ್ತೀಚೆಗೆ ನಮ್ಮ ಒಂದು ಧೋರಣೆಯನ್ನು ರೂಪಿಸಿಕೊಂಡಿದ್ದೇವೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. I would like to give details now.

For cities with a population falling between 50,000 and 75,000 the loan component will be 50%, state Government contribution is 40% and the remining 10% will have to come from the town municipality.

For cities with a population of more than 75,000 and above the institutional finance will be 66 and 2/3rds, the Government of Karnataka's contribution is 23 and 1/3rd% and the remaining 10% will have to be contributed by the town municipality. ಲೋಕಲ್ ಬಾಡೀಸಗೆ ಪ್ರಿನ್ಸಿಪಲ್ ಅಮೌಂಟನಲ್ಲಿ ನಾವು ಹಾಕಬಾರದು ಎಂದು ತೀರ್ಮಾನ ಮಾಡಿದ್ದೇವೆ. ಇವರ ವಾಟರ್ ರೇಟನಲ್ಲಿ ಇವರು ಸ್ವಲ್ಪ ಜಾಸ್ತಿ ಕೊಡಬೇಕು. ಹಿಂದೆ ಇವರು ಕೊಡಬೇಕಾದಂಥ ಹಣವನ್ನು ಇವರು ಕಟ್ಟಲಿಲ್ಲ, ಹಾಗಾಗಿ ಇವಾಗಲಿಲ್ಲ ಎಂಬಿತ್ಯಾದಿ ಕಾರಣಗಳಿಂದ ಈ ಕೆಲಸಗಳಲ್ಲಿ ನಿಂತು ಹೋಗುವುದಕ್ಕೆ ಸಾಧ್ಯವಾಯಿತು. ಇದರ ಜೊತೆಗೆ for cities with a population of 20-3000 there will be 50% financial institutions loan ಇರತಕ್ಕಂಥಾದ್ದಕ್ಕೆ 50% Government loan. ಆಮೇಲೆ ಟೌನ್ ಯಾವುದು ನಗರ ಪ್ರದೇಶ ಇದೆಯೋ ಅವರು 10 ಪರಸೆಂಟ್ ಕೊಡಬೇಕೆಂದು ಹೇಳಿ ಹಾಗೂ 75 ಪರಸೆಂಟ್ ಮತ್ತು ಮೇಲ್ಪಟ್ಟು ಇರತಕ್ಕಂಥಾದ್ದಕ್ಕೆ 66.23 ಪರಸೆಂಟನ್ನು ರಾಜ್ಯ ಸರಕಾರದವರು ಇನ್ಸ್ಟಿಟ್ಯೂಷನಲ್ ಲೋನ್ 66.23, ಕರ್ನಾಟಕ ಸರಕಾರ 23 ಪರಸೆಂಟ್. 10% town municipality contribution ಈ ರೀತಿಯಾಗಿ ಸ್ವಲ್ಪಮಟ್ಟಿಗೆ ನಗರಪಾಲಿಕೆಗಳ ಮೇಲೆ ಬೀಳುವ ಹೊರೆಯನ್ನು ಕೂಡ ಕಡಿಮೆ ಮಾಡಿದ್ದೇವೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಿ, ರಾಜ್ಯದ ಎಲ್ಲಾ ನಗರ ಪ್ರದೇಶಗಳಿಗೂ ಹೊಂದತಕ್ಕಂಥ ಈ ಮಾಸ್ಟರ್‌ಪ್ಲಾನನ್ನು ತಯಾರು ಮಾಡಿಸಿ ವರ್ಲ್ಡ್‌ಬ್ಯಾಂಕಿಗೆ ಪ್ರಾಜೆಕ್ಟ್ ಮಾಡುತ್ತಾ ಇದ್ದೇವೆ. I have no doubt in my mind and we are going to project the same to the World and the Union Finance Minister has also agreed to help us.

ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳಬೇಕಾಗಿದೆ. ಈ ಬಗ್ಗೆ ರಾಜ್ಯದಲ್ಲಿ ತುಂಬಾ ಬಿಸಿ ಇದೆ. ಏಕೆಂದರೆ ಮಳೆ ಕಡಿಮೆಯಾಗಿದೆ ಬೆಳೆ ಬಂದರೂ ಕುಡಿಯುವ ನೀರಿನ ಸಮಸ್ಯೆಯು ಉಲ್ಬಣವಾಗಿದೆ. ಈ ಕುರಿತು ಸರಕಾರಕ್ಕೆ ಪೂರ್ಣವಾದ ಅರಿವು ಇದೆ. ನಾವು ಈ ಬಗ್ಗೆ ಹಣ ಕೊಡುವುದರಲ್ಲಿ ಹಿಂದೆ ಬಿದ್ದಿಲ್ಲ. ಎಲ್ಲಾ ಜಿಲ್ಲೆಗಳಿಗೂ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಅಧಿಕಾರಿಗಳಿಗೂ ಸ್ವಲ್ಪ ತೊಂದರೆ ಎದುರಾಗಿದೆ. ಏಕಕಾಲದಲ್ಲಿ ರಾಜ್ಯದಲ್ಲಿ ಅಷ್ಟೊಂದು ರಿಗ್ಗು ಸಿಗತಕ್ಕಂಥಾದ್ದು ಕಷ್ಟವಾಗಿದೆ. ನಮ್ಮ ಪಿಹೆಚ್ಇ ರಿಗ್ಗು ಸಾಕಾಗುವುದಿಲ್ಲ. ಖಾಸಗಿಯವರ ರಿಗ್ಗು

ತೆಗೆದುಕೊಳ್ಳಿ. ಟೆಂಡರ್ ಮೂಲಕವಾಗಿಯಾಗಲೀ ಯಾವುದೇ ರೀತಿಯಲ್ಲಾಗಲೀ ಅವುಗಳನ್ನು ತೆಗೆದುಕೊಂಡು ನೀರನ್ನು ಒದಗಿಸಬೇಕು. ಖಾಸಗಿಯವರಿಗೆ ಬೇಕಾದರೆ ಪೀಸ್ ವರ್ಕ್ ಎಂದಾದರೂ ಕೊಡಿ. ಒಟ್ಟಿನಲ್ಲಿ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಕುಡಿಯುವ ನೀರು ಗ್ರಾಮೀಣ ಪ್ರದೇಶವಾಗಲೀ, ನಗರ ಪ್ರದೇಶವಾಗಲೀ ಎಲ್ಲಿಯೂ ಕಡಿಮೆಯಾಗಬಾರದು. ಈ ಕಾರ್ಯಕ್ರಮಕ್ಕೆ ಬೇಕಾಗುವ ಎಷ್ಟು ಹಣವನ್ನಾದರೂ ನಾವು ಕೊಡುವುದಕ್ಕೆ ಸಿದ್ಧರಿದ್ದೇವೆ ಎಂದು ಹೇಳಿದ್ದೇವೆ. ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಇನ್ನೆರಡು ವಾರಗಳೊಳಗಾಗಿ ಡಿಸಿಯವರುಗಳನ್ನು ಕರೆಯಿಸಿ, ಜಿಲ್ಲಾ ಚೀಫ್ ಎಕ್ಸಿಕ್ಯುಟಿವ್ ಆಫೀಸರ್‌ನ್ನು ಕರೆಯಿಸಿ ಚರ್ಚೆ ಮಾಡುತ್ತೇವೆ. ಕುಡಿಯುವ ನೀರಿನ ವಿಚಾರದಲ್ಲಿ ನಾವು ಅವರಿಗೆ ಹಣದ ಕೊರತೆಯನ್ನು ಕೊಡುವುದಿಲ್ಲ. ಯಾವುದೇ ಸನ್ನಿವೇಶದಲ್ಲಿಯೂ ಎಷ್ಟೇ ಕಷ್ಟ ಬಂದರೂ ಅದಕ್ಕೆ ಬೇಕಾಗುವ ಹಣವನ್ನು ನಾವು ಕೂಡಿಸಿಕೊಡುತ್ತೇವೆ, ಆ ಕೆಲಸಗಳನ್ನು ಸೂಕ್ತರೀತಿಯಲ್ಲಿ ತೆಗೆದುಕೊಳ್ಳಬೇಕೆಂದು ನಾವು ಸೂಚನೆ ಮಾಡಿದ್ದೇವೆ. ಪ್ರಸ್ತುತವರ್ಷದಲ್ಲಿ ಸುಮಾರು 4085 ಬೋರ್‌ವೆಲ್‌ಗಳನ್ನು ಈ ಉದ್ದೇಶಕ್ಕಾಗಿ ಹಾಕಿದ್ದಾರೆ. ಇನ್ನೂ 3180 ವರ್ಕ್ಸ್‌ನ್ನು ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಲ್ಲಿ ನಾವು ಎಷ್ಟೇ ನಮ್ಮ ಮನಸ್ಸಿನಲ್ಲಿ ತೀವ್ರತೆ ಇದ್ದರೂ ಕೂಡ ಎಕ್ಸಿಕ್ಯೂಶನ್ ಆಫ್ ವರ್ಕ್ಸ್‌ನಲ್ಲಿ ಕೆಲವು ಸಮಸ್ಯೆಗಳು ನಮಗೆ ಬರುತ್ತವೆ. ಕೆಲವು ಕಡೆ 300 ಅಡಿಗಳಷ್ಟು ಅಡಿಗೆ ಹೋದರೂ ನೀರು ಸಿಕ್ಕುವುದಿಲ್ಲ. ಅನೇಕ ಕಡೆಗಳಲ್ಲಿ ನಾಲ್ಕೈದು ಬೋರ್‌ವೆಲ್‌ಗಳನ್ನು ಹಾಕಿರುವುದು ಕೂಡ ಫೇಲ್ ಆಗಿಬಿಟ್ಟಿವೆ. ಅಂಡರ್‌ಗ್ರೌಂಡ್ ವಾಟರ್ ಈಗ ಕಡಿಮೆಯಾಗುತ್ತ ಇದೆ. ಇಂಥ ಕೆಲವು ಸಮಸ್ಯೆಗಳು ಇರುವುದರಿಂದ ಸದನದ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ಯಾವುದೇ ಉತ್ಪ್ರೇಕ್ಷೆ ಮಾಡಲು ನಾವು ಸಿದ್ಧರಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಿಳಿಸಿ, ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕೆಂದು ಕೇಳಿ ಕೊಳ್ಳುತ್ತೇನೆ. ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದೇವೆಂಬುದನ್ನು ಹೇಳಿ ನಾನು ಇಲ್ಲಿ ಸಾಧನೆಯನ್ನು ಮಾಡಬೇಕಾಗಿಲ್ಲ. ಈ ವರ್ಷಕ್ಕೆ ಕೂಡ ಈಗಾಗಲೇ 20 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ ಹಣವನ್ನು ಬಿಡುಗಡೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಕೊನೆಯದಾಗಿ ಪವರ್ ಬಗ್ಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲಿ ಇಚ್ಛೆಪಡುತ್ತೇನೆ. ಈ ಸಾರಿ ಇದರ ಬಗ್ಗೆ ಪೂರ್ಣವಾದ ವಿವರಗಳನ್ನು ನನ್ನ ಸಹೋದ್ಯೋಗಿಗಳೂ, ಮಾನ್ಯ ಉಪಮುಖ್ಯಮಂತ್ರಿಯವರು ಅದರ ಬಗ್ಗೆ ನಡೆದಿರತಕ್ಕಂಥ ಚರ್ಚೆಯಲ್ಲಿ ಕೊಟ್ಟಿದ್ದಾರೆ. ನಮ್ಮ ಒಂದು ಪರಿಸ್ಥಿತಿಯು ಮಾನ್ಯ ವಿಗ್ನೆಯವರು ಹೇಳಿದರು, ಈ ಕಾರಿಂಜೆಂಡಮ್, ಅಥವಾ ಅಮೆಂಡಮೆಂಟ್ ಗವರ್ನರ್ ಅಡ್ರೆಸ್ ಬಗ್ಗೆ ಮಾನ್ಯ ಶ್ರೀಕರರವರು ಸಭೆಯ ಗಮನಕ್ಕೆ ತಂದರು. ಇದರ ಬ್ಯಾಕ್ ಗ್ರೌಂಡಿನಿಂದ ಒಂದು ಮಾತನ್ನು ಹೇಳಬೇಕಾಗುತ್ತದೆ. ಮೊದಲು ನಮಗೆ ಸಿಗತಕ್ಕಂಥದ್ದು 1.2 ಮಿಲಿಯನ್, ಅದರ ನಂತರ 1.5 ಮಿಲಿಯನ್ ಮಹಾರಾಷ್ಟ್ರದಿಂದ ಬಂತು. ಈಗ ಹೆಚ್ಚು ಕಡಿಮೆ ೩ ಮಿಲಿಯನ್ ಯುನಿಟ್ ಪರದೇ ನಮಗೆ ಸಿಗುತ್ತಾ ಇದೆ. ಆದರೆ ನಾವು ಒಂದು ಯುನಿಟಿಗೆ ಎರಡು ರೂಪಾಯಿಗಳನ್ನು ಕೊಡಬೇಕಾಗಿದೆ. ಮಾನ್ಯ ಮೊಯಿಲಿಯವರು ಈ ಎಲ್ಲಾ ವಿಚಾರಗಳ ಬಗ್ಗೆ ಪ್ರಸ್ತಾಪ

ಮಾಡುತ್ತಾರೆ ಎಂದು ಅಂದುಕೊಂಡಿದ್ದೇನೆ. ನಮ್ಮ ಪ್ಲಾನ್‌ನಲ್ಲಿ ಎಷ್ಟು ಕಡಿತವಾಗಿದೆ ಎಂಬಿತ್ಯಾದಿ ವಿಚಾರಗಳ ಬಗ್ಗೆ ಅವರು ಹೇಳುತ್ತಾರೆ, ನಾನು ಕುಳಿತುಕೊಂಡು ಅದನ್ನು ಕೇಳುತ್ತೇನೆ. ಇಷ್ಟೊತ್ತು ಒಂದು ನೂರು ಕೋಟಿ ರೂಪಾಯಿಗಳನ್ನು ಬರಿ ಕೋಲ್ ಕೊಂಡುಕೊಳ್ಳಲು ನಾವು ಕೊಡಬೇಕಾಗಿದೆ.

The KEB has to give about Rs.530 crores to the Karnataka Power Corporation ಈ ಕಡೆ ಬೆಂಗಳೂರು ಜಲಮಂಡಳಿಯವರು 92 ಕೊಡಬೇಕು, ಕರ್ನಾಟಕ ನಗರ ನೀರು ಮಂಡಳಿಯಿಂದ ಪವರ್ ಚಾರ್ಜಸ್ ಕೊಡಬೇಕು. ಹೀಗೆ ಸರ್ಕಾರದ ಕೆಲವು ಸಂಸ್ಥೆಗಳಿಂದಲೇ ಕೆಇಬಿಗೆ ಹಣ ಬಂದಿಲ್ಲ. The KEB in turn has to pay about Rs. 530 crores to the Karnataka Power Corporation. ಕೋಲ್ ಕೊಂಡುಕೊಳ್ಳಲು ಅವರಿಗೆ ದುಡ್ಡಿಲ್ಲ. 100 ಕೋಟಿಯನ್ನು ಸರ್ಕಾರದ ಬೇರೆ ಕಾರ್ಯಕ್ರಮಗಳನ್ನು ನಿಲ್ಲಿಸಿ ಇವತ್ತು ಕೊಡಬೇಕಾಗಿ ಬಂದಿದೆ. ಪರಿಸ್ಥಿತಿ ಇಷ್ಟೊಂದು ಘೋರವಾಗಿರುವುದರಿಂದ ಸದನದ ಗಮನಕ್ಕೆ ನಾನು ತರಬೇಕಾಗುತ್ತದೆ. ಜೊತೆಗೆ ಮಹಾರಾಷ್ಟ್ರ ಸರ್ಕಾರದವರು ಏನು ಪವರ ಸಪ್ಲೈ ಮಾಡುತ್ತಿದ್ದಾರೋ ಅದನ್ನು 2 ರೂನಂತೆ ನಾವು ಕೊಂಡುಕೊಳ್ಳಬೇಕು. ಅದರ ನಾವು ಸಬ್ಸಿಡೈಸ್ಡ್ ರೇಟಲ್ಲಿ ಇಲ್ಲಿ ಕೊಡಬೇಕಾಗಿದೆ. ರೈತರಿಗೆ ಏನೂ ಇಲ್ಲವೇ ಇಲ್ಲ. ಈ ಸಂಕಷ್ಟದ ಪರಿಸ್ಥಿತಿಯಲ್ಲಿ ನಾವು ಸಿಕ್ಕಿದ್ದೇವೆಯೆಂಬುದನ್ನು ಈ ಸಂದರ್ಭದಲ್ಲಿ ಸೂಕ್ಷ್ಮವಾಗಿ ತಿಳಿಸಿ, ಅಧ್ಯಕ್ಷರೇ ನಾನು ಹೊರಗಡೆ ಒಂದು ಮಾತು ಹೇಳಿದ, ಖರ್ಗೆಯವರು ಕೇಳಿದರು, ಒಂದು ವರ್ಷದಲ್ಲಿ ನೀವು ಪವರನ್ನು ಸದಾಕಾಲ ಕೊಡುತ್ತೇವೆಂದು ಹೇಳಿದ್ದೀರಿ, ನಿಮ್ಮ ಉಪಮುಖ್ಯಮಂತ್ರಿ ಒಂದು ರೀತಿ ಹೇಳಿದ್ದಾರೆ. ಹೌದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಉತ್ತರವಾಗಿ ನಾನು ಕೇಳಿದಾಗ ಉಪಮುಖ್ಯಮಂತ್ರಿಗಳು ನಮ್ಮ ಮುಖ್ಯಮಂತ್ರಿಗಳಿಗೆ ಮೂರೇ ತಿಂಗಳಲ್ಲಿ ಮುಗಿ ಆಗಬೇಕೆಂದರೆ ಅದು ಹೇಗೆ ಸಾಧ್ಯವಿದೆ ಎಂಬ ಮಾತು ಹೇಳಿದರು. ಅದಕ್ಕೆ ನಾನು ಸುಮ್ಮನಾದೆ.

ಶ್ರೀ ಹೆಚ್.ಡಿ. ದೇವೇಗೌಡ : ನಾವು ಹೇಳಿದ್ದನ್ನೇ ಪ್ರೂವ್ ಮಾಡುತ್ತೇವೆ. ಅಧ್ಯಕ್ಷರೇ ಮೊನ್ನೆ ನಿರ್ಣಯ ಮಾಡಿದ್ದೇವೆ. 4 Barge-mounted Power Projects ಹಾಕಲಿಕ್ಕೆ ತೀರ್ಮಾನ ಮಾಡಿದ್ದೇವೆ. The Government has already taken a decision. ಅದು ರೆಗ್ಯುಲರೋ ಇರೆಗ್ಯುಲರೋ ನಾಳೆ ಅದರ ಬಗ್ಗೆ ಏನು ಹೇಳಿದರೂ ಪರವಾಗಿಲ್ಲ. ನನಗೆ ಇರುವುದು, 6 ತಿಂಗಳೊಳಗೆ 600 M.Wts. of power has to be produced. They must. ಅಷ್ಟೇ ಅಲ್ಲ, ಒಂದು ದಿನ ಅವರು ಡಿಲೇ ಮಾಡಿದರೂ ಪೆನಾಲ್ಟಿ ಕ್ಲಾಜ್ ಇಂಟರಡ್ಯೂಸ್ ಮಾಡಿದ್ದೇವೆ. ಒಂದು ದಿವಸ ಹೆಚ್ಚಿಗೆ ತೆಗೆದುಕೊಂಡರೆ ದಿನಕ್ಕೆ a penalty of Rs. 16 lakhs per day for any delay beyond 6 months. Then a penalty of Rs. 16 lakhs for the first 50 days and 22.1 lakh beyond this period.

ಮಂಗಳೂರು ಹತ್ತಿರ ಕೊಡುವಂಥದಕ್ಕೆ ಈ ಕಂಡೀಷನ್ ಹಾಕಿದ್ದೇವೆ. ಆಮೇಲೆ a penality or Rs. 7.6 lakhs per day for the first 30 days and Rs. 10.92 lakhs per day

beyond this period in respect of location at Mulki. In respect of Kumta, Rs. 5.5 lakhs per day penalty upto 30 days. Then Rs.7.7 lakhs per day beyond this period. Besides this, 20 small capacity multi-fuel plants with a capacity ranging from 30 to 50.M.Wts. totalling to over 600 M.Wts. will be set up in the State.

ಈ 600 ಮೆಗಾವಾಟ್ barge-mounted power projectsಗೆ ನಾವೇನು ಅವಕಾಶ ಮಾಡಿ ಕೊಟ್ಟಿದ್ದೇವೋ, ಅವನ್ನು ನಾಲ್ಕು ತಿಂಗಳಲ್ಲಿ ನಾವು ಮಾಡಿ ಮುಗಿಸುತ್ತೇವೆ ಎಂದು ಹೇಳಿದ್ದಾರೆ. ಅವರಿಗೆ ಪೆನಾಲ್ಟಿ ಕ್ಲಾಸ್ ಹಾಕಿದ್ದೇವೆ. ಒಂದೊಂದು ದಿನ ಡಿಲೆ ಆಗುತ್ತದೆ ಅಂದರೆ ರೂಪಾಯಿ ಪೆನಾಲ್ಟಿ ವಿಧಿಸಲಿದ್ದೇವೆ. ಮೊನ್ನೆ ದಿನ ಕ್ಯಾಬಿನೆಟ್ ನಿರ್ಣಯ ಮಾಡಿದ್ದೇವೆ. ಇದರ ಜೊತೆಗೆ ಸಣ್ಣ ಯೂನಿಟ್‌ಗಳು ಸುಮಾರು 20ಕ್ಕೆ ಕ್ಲಿಯರೆನ್ಸ್ ಕೊಡುತ್ತಿದ್ದೇವೆ. ಒಂದು ಸಾವಿರ ಮೆಗಾವಾಟ್ ಈ ವರ್ಷವೇ ಜನರೇಟ್ ಮಾಡುವುದಕ್ಕೆ ಯೋಜನೆಯನ್ನು ಸರ್ಕಾರ ಸ್ವೀಕರಿಸಿದ್ದೇವೆ. ಅದ್ದರಿಂದ ಮೊಯಿಲಿಯವರು ಏನು ಹೇಳಿದ್ದಾರೆ, 3 ತಿಂಗಳು ನಾನು ಹೇಳಲಿಲ್ಲ. 12 ತಿಂಗಳು ಟೈಮ್ ತೆಗೆದುಕೊಂಡಿದ್ದೇವೆ. ಈಗ 2 ತಿಂಗಳು ಆಗಿರಬಹುದು. ಇನ್ನು 10 ತಿಂಗಳು ಉಳಿಯುತ್ತದೆ. ಆರೋಗ್ಯಕರವಾದ ಮಳೆ ಬೀಳುತ್ತದೆ ಎಂಬುದನ್ನು ನೀವು ಬರೆದಿಟ್ಟುಕೊಳ್ಳಿ. ಅದರಲ್ಲೇನೂ ಸಂಶಯಪಡಬೇಕಾಗಿಲ್ಲ. We are prepared to see that this problem is sorted out and this is a temporary solution. ಆಮೇಲೆ 19 ಮೆಗಾಪ್ರಾಜೆಕ್ಟ್‌ಗಳಿಗೆ ನಾವೇನು ಈಗ ಕ್ಲಿಯರೆನ್ಸ್ ಕೊಟ್ಟಿದ್ದೇವೆ ಅಧ್ಯಕ್ಷರೇ ಅದಕ್ಕೆ ಕೆಲವು ಫಾರ್ಮಾಲಿಟೀಸ್ ಇವೆ, ಅದು ಅವರಿಗೂ ಗೊತ್ತಿದೆ ನಮಗೂ ಗೊತ್ತಿದೆ. ಅದರ ನಾವು ಕೊಟ್ಟಿರುವ ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಬರುವವರೆಗೆ ಅದು ನಾಳೆ ಬೆಳಿಗ್ಗೆ ಶುರುವಾಗುತ್ತದೆಂದು ಹೇಳುವಷ್ಟು ಧೈರ್ಯ ನನಗಿಲ್ಲ. ಏಕೆಂದರೆ it may take 6 months, one year or even two years because the Government of India has to give clearance at various stages. ಕೊಜೆಂಟ್ರಿಕ್ಸ್ ಒಂದಕ್ಕೆ ನಾವು ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಾಗಿದ್ದರೆ ನಾಲ್ಕು ಹಿಂದಿನ ಸರ್ಕಾರ, ಈಗ ನಾವು ಒಂದು ವರ್ಷ ಮುಗಿಸಿದ್ದೇವೆ, ಇಷ್ಟೊಂದು ಶ್ರಮವಿದೆ. 19 ಮೆಗಾಸ್ಕೀಂಗೆ ಏನು ಕ್ಲಿಯರೆನ್ಸ್ ಕೊಟ್ಟಿದ್ದೇವೆಯೋ it demands upon how fast we get the clearance from the Government of India. ಅಷ್ಟು ಮಾತ್ರ ಹೇಳಬಲ್ಲೆನುತ್ತೇನೆ. ಆದರೆ ಇರಲಿ ಸಾವಿರ ಮೆಗಾವಾಟ್ ಈ ವರ್ಷ ನಾವು ಜನರೇಟ್ ಮಾಡಿದರೆ, ಇದೇ ತರಹ ಸನ್ನಿವೇಶ ಬಂದು ಮುಂದೆ 3-6 ತಿಂಗಳು ಮುಂದೆ ಹೋದರೂ We can overcome the problem and there will be no problem from the next year. I have made categorical commitment. ರೈತರಿಗಂತೂ ಯಾವುದೇ ಕಾರಣದಿಂದ ನಾವು ವಿದ್ಯುತ್‌ಕೊರತೆ ಮಾಡುವುದಿಲ್ಲವೆಂಬ ಮಾತು ಏನು ಹೇಳಿದ್ದೇವೋ ಅದನ್ನು ಉಳಿಸಬೇಕು ಎನ್ನುವುದಕ್ಕಾಗಿಯೇ ಸ್ವಲ್ಪ ಜಾಸ್ತಿಯಾದರೂ ಚಿಂತೆಯಿಲ್ಲವೆಂದು ಈ ಬಾರ್ಜ್‌ಮೌಂಟೆಡ್ ನಿರ್ಣಯ ತಗೊಂಡಿದ್ದು, We have taken this decision. ಜಾಸ್ತಿ ಅಂದರೆ ರಾಯಚೂರಿನಲ್ಲಿ ಏನು ಮಾಡುತ್ತಿದ್ದೇವೆ ಅದಕ್ಕಿಂತ ಏನೂ ಜಾಸ್ತಿಯಾಗುವುದಿಲ್ಲ. ಅಂತಿಮ

ಹಿಡಿದು ನಾವು ಒಪ್ಪಿಕೊಳ್ಳುವಾಗ ರಾಯಚೂರು ನಮ್ಮ ಸವರಸ್ಟೇಶನನಲ್ಲಿರುವದಕ್ಕಿಂತ ಹೆಚ್ಚಿನ ಹಣ ಕೊಡಬೇಕಾದ ಅವಶ್ಯಕತೆಯಿಲ್ಲವೆಂದು ಹೇಳುತ್ತಾ we are going to see that this problem will be solved within the next one year. ಒಂದು ವರ್ಷವೂ ಅಲ್ಲ, ಅದಕ್ಕಿಂತ ಮುಂಚೆಯೇ ಜಾರಿ ಮಾಡಲು ಅಗತ್ಯ ಕ್ರಮ ತೆಗೆದು ಕೊಂಡಿದ್ದೇವೆ. ಆದರಿಂದ ಯಾವುದೇ ಕಾರಣಕ್ಕೂ ಹಿಂದೆ ಹೋಗುವುದಿಲ್ಲವೆಂದು ಮಾತನ್ನು ಹೇಳಲು ಇಚ್ಛಿಸುತ್ತೇನೆ. ಒಂದು, ನಾನು ಎಲ್ಲ ಸ್ನೇಹಿತರಲ್ಲೂ ವಿನಂತಿಮಾಡಿಕೊಳ್ಳುವುದು ಬೇರೆ ಅಭಿವೃದ್ಧಿ ಕಾರ್ಯಗಳಿಗೆ ನಾವು ಹಣ ಜೋಡಿಸಬೇಕೆಂಬ ಕಾಲದಲ್ಲಿ, ಈಗ ಮಹಾರಾಷ್ಟ್ರಕ್ಕೇ ಎರಡು ರೂಪಾಯಿ ಕೊಡುತ್ತಿದ್ದೇವೆ. ಹಾರ್ಸಮೌಂಟದವರಿಗೆ 2 ಅಥವಾ ಎರಡೂ ಕಾಲು ತಗಲಬಹುದು. ನಮ್ಮ ಪಕ್ಕದ ರಾಜ್ಯಕ್ಕೇ ಕೊಡುತ್ತಿದ್ದೇವೆ. 10 ಪಚಿ. ಫಿಗಸಿಟ್ಟೆ ಕೊಟ್ಟಿದ್ದೇವೆಂದು ಹಿಂದಿನ ಮುಖ್ಯಮಂತ್ರಿ ಬಂಗಾರಪ್ಪನವರು ಹೇಳಬಹುದು. ಆ ಕಾಲವಲ್ಲ ಹೋಯಿತು. ಹಾಗೆಲ್ಲ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಇನ್ನೂ ಕೊಂಚ ಹೊರೆ ಹೊರಬೇಕಾಗುತ್ತದೆ. ನಾನು ನಿಮಾಮುಲ್ಲಿ ಅಪೀಲ್ ಮಾಡುತ್ತೇನೆ. ಇದನ್ನು ರಾಜಕೀಯವಾಗಿ ಬಳಸುವುದು ಬೇಡ ನಾವು. ರಾಜ್ಯದ ಅಭಿವೃದ್ಧಿ ಬಗ್ಗೆ ನಾವೆಷ್ಟು ಮಾತನಾಡಬಹುದು. ಈ ಮಾತನ್ನು ನಾನು ಖಂಡತುಂಡಾಗಿ ಹೇಳುತ್ತೇನೆ. ವಿದ್ಯುತ್ತಿಲ್ಲದೆ ಕೃಷಿ ಅಭಿವೃದ್ಧಿಯೂ ಆಗುವುದಿಲ್ಲ ಕೈಗಾರಿಕೆ ಅಭಿವೃದ್ಧಿಯೂ ಆಗುವುದಿಲ್ಲ ಯಾವುದೇ ಅಭಿವೃದ್ಧಿಯನ್ನೂ ಮಾಡಲು ಸಾಧ್ಯವೇ ಇಲ್ಲ. Sir, I went to West Bengal. There is a Communist Govt. ಅಲ್ಲಿ ಆರಪಿ ಗೋಯೆಂಕಾರಿಗೆ ಕೊಟ್ಟಿದ್ದಾರೆ Sir, the total management of the power distribution of the Calcutta City is run by private agency. ಆದ್ದರಿಂದ ಇದರಲ್ಲಿ ತಾತ್ಕಾಲಿಕ ರಾಜಕೀಯ ಲಾಭಕ್ಕಾಗಿ ಚರ್ಚೆ ಮಾಡುವುದು ಅಪ್ರಕೃತ. ಈಗ ಕಾಲ ಬದಲಾಗಿದೆ. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ 2 ಪೈಸೆ ಒಂದು ಯೂನಿಟಿಗೆ ಕೊಡುತ್ತಿದ್ದರು. ಬೆಳಗಾಂನಲ್ಲಿ ನಾನು ಈ ಸದನದಲ್ಲಿ ಆ ಕರೆಕುಳಿತಿದ್ದೆ. ಇವತ್ತೇನು ಮಾಡುವುದಕ್ಕಾಗುತ್ತದೆ, ನಮ್ಮ ಕಾಸ್ಟ ಆಫ್ ಜನರೇಶನ್ 2 ರೂ 59 ಪೈಸೆ ಇದೆ. ಆದ್ದರಿಂದ ಇನ್ನು ಮೇಲೆ ರೈತರೂ ಸ್ವಲ್ಪ ಹೊತ್ತುಕೊಳ್ಳಬೇಕು. ಕೈಗಾರಿಕೆಯವರು ಸ್ವಲ್ಪ ಹೆಚ್ಚು ಹೊತ್ತುಕೊಳ್ಳಬೇಕು. ರೈತರೇನೂ ತುಂಬಾ ಹೊತ್ತು ಕೊಳ್ಳುವುದು ಬೇಕಾಗಿಲ್ಲ. ಸ್ವಲ್ಪ ಮಟ್ಟಿಗೆ ಹೊತ್ತುಕೊಂಡರೆ ಸಾಕು. ನಾನು ಅನೇಕ ಕಡೆ ಹೋದಾಗ ರೈತರೂ ಕೂಡ ಹೇಳಿದ್ದಾರೆ. ನಮಗೆ 24 ಗಂಟೆಗಳ ಕಾಲ ವಿದ್ಯುತ್ ಕೊಡಿ ಸ್ವಲ್ಪ ಹೆಚ್ಚು ಮಾಡಿ ಚಿಂತೆ ಇಲ್ಲವೆಂದು ಹೇಳಿದ್ದಾರೆ. ನಾನು ಸ್ವಾಗತಿಸುತ್ತೇನೆ. ಎನವೈರ್ನಮೆಂಟ್‌ದು ಒಂದು ಸಮಸ್ಯೆ ಇದೆ. ಇಲ್ಲಿ ಮಾನ್ಯ ಸಭಾಪತಿಯವರು ಇದ್ದಾರೆ ಹಿರಿಯವರಿದ್ದಾರೆ ಅವರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ನೀವೆಷ್ಟು ಆಕ್ರೋಶದಿಂದ ಮಾತನಾಡಿದರೂ ನನಗೆ ಬೇಸರ ಇಲ್ಲ. ಮಾನ್ಯ ಮೊಯಿಲಿಯವರು ಇದ್ದಾರೆ ಅವರೂ ಕೂಡ ಮುಖ್ಯ-ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಮೊನ್ನೆ ನಾನು ಅವರೂ ಜಂಟಿ ವೇದಿಕೆಯಲ್ಲಿ ಮಾತನಾಡತಕ್ಕಂತಹ ಕೆಲಸ ಮಾಡಿದ್ದಾರೆ. ಮೊನ್ನೆ ನಾನು ಅವರೂ ಜಂಟಿ ವೇದಿಕೆಯಲ್ಲಿ ಮಾತನಾಡತಕ್ಕಂತಹ ಕಾಲದಲ್ಲಿ he also made an appeal. It is not the question of destroying any particular area.

ಇದರೊಳಗೆ ಯಾವ್ಯಾವುದು ನಮ್ಮ ಮನಸ್ಸಿನಲ್ಲಿದೆ ಎಂದು ತೆಗೆದುಕೊಳ್ಳಲಿಕ್ಕೆ ಹೋಗಬೇಕಾಗಿಲ್ಲ.

ಅವರ ಈ ಒಂದು ಯೋಜನೆಗಳನ್ನು ಎಲ್ಲಿ ಕಡಿತ ಮಾಡಲಿಕ್ಕೂ ಸಾಧ್ಯವಾಗುವುದಿಲ್ಲ. ಹಾಸನದ ಹತ್ತಿರ ಬನ್ನಿ ಅಲ್ಲಿ 500 ಎಕರೆ ಅಲ್ಲ ! ಸಾವಿರ ಎಕರ ಕೊಡುತ್ತೇನೆಂದು ಹೇಳಿದರ ಅದು ಬರುವವರು ಇಲ್ಲ. ಕೆಲವು ಕಡೆ ಅನಿವಾರ್ಯವಾಗುತ್ತದೆ. ನಾನು ಮತ್ತು ಮಾನ್ಯ ಮೊಯಿಲಿಯವರು ಒಂದೇ ವೇದಿಕೆಯಲ್ಲಿದ್ದಾಗ ಅವರಿಗೂ ಅಪೀಲ್ ಮಾಡಿದರು ಅವರೆ ಹಾಗೆಂದ ಮಾತ್ರಕ್ಕೆ ಇಡೀ ಜಿಲ್ಲೆಯನ್ನು ಮುಳುಗಿಸಬೇಕೆಂಬ ಇಚ್ಛೆ ಯಾರಿಗೂ ಇಲ್ಲ. ಅವರ ಇದರಲ್ಲಿ ರಾಜಕೀಯ ಬೆರೆಸುವುದು ಬೇಡವೆಂದು ನಾನು ಕೈಮುಗಿದು ವಿನಂತಿ ಮಾಡುತ್ತೇನೆ. ಹಾಗೇನಾದರೂ ಅವರ ರಾಜ್ಯದ ಪ್ರಗತಿ ಬಿಂದ ಬೇಕುತ್ತದೆ ಇದರಲ್ಲಿ ರಾಜಕಾರಣ ಬೆರೆಸಕೂಡದು. ಇದರ ಬಗ್ಗೆ ಕುಳಿತು ಚರ್ಚೆ ಮಾಡೋಣವೆಂದು ನಾನು ಪರಿಸರವಾದಿಗಳಲ್ಲಿ ವಿನಂತಿ ಮಾಡುತ್ತೇನೆ. ಎಲ್ಲರನ್ನೂ ಕರೆಯುತ್ತೇನೆ ಇದರಲ್ಲಿ ಪಕ್ಷ ರಾಜಕಾರಣ ಬೇಡ. ವಿರೋಧ ಪಕ್ಷದ ನಾಯಕರು ಹಿರಿಯ ಮುಖಂಡರನ್ನೂ ಕರೆಸುತ್ತೇನೆ, ನಿಮ್ಮ ಜಿಲ್ಲೆಯೊಳಗೆ ಮಠದ ಸ್ವಾಮಿಗಳ್ಯಾರಾದರೂ ಇದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಇದ್ದರ, ಅವರನ್ನೂ ಬೇಕಾದರ ಭೇಟಿ ಮಾಡಲಿಕ್ಕೆ ನಮ್ಮ ಮಂತ್ರಿಗಳನ್ನೇ ಕಳಿಸಿಕೊಡುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಇಲ್ಲಿ ರಾಜಕೀಯದ ಪ್ರಶ್ನೆಯೇ ಇಲ್ಲ. ರಾಜಕೀಯಕ್ಕೋಸ್ಕರ ನಾವು ಈ ಪರಿಸರವಾದಿಗಳು ಈ ಚಳುವಳಿಯನ್ನು ಮಾಡಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳ ಬಯಸುತ್ತೇನೆ. ನಾನೇನು ಪಾರ್ಲಿಮೆಂಟ್ ಚುನಾವಣೆಗೆ ನಿಲ್ಲುವುದಿಲ್ಲ. ಅಥವಾ ಈ ಪರಿಸರವಾದ ಕಾರಣ ಕೊಟ್ಟು ಪಾರ್ಲಿಮೆಂಟ್ ಚುನಾವಣೆಯಲ್ಲಿ ಜನ ಬೆಂಬಲ ಪಡೆಯುವ ಇರಾದೆ ಇಲ್ಲ. ರಾಜಕೀಯವನ್ನು ಬೆರಸುತ್ತೇವೆಂಬ ಮಾತನ್ನು ಏನು ಹೇಳಿದಿರಿ ಅದನ್ನು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಸಂತೋಷ. ಮಾನ್ಯ ಸಭಾಪತಿಗಳು ಅಷ್ಟು ಆಶ್ವಾಸನೆ ಕೊಟ್ಟಿದ್ದಾರೆ ನನಗೆ ಸಮಾಧಾನವಾಗಿದೆ. ಅವರಿಗೆ ನಾನು ಕಾಂಪ್ಲಿಮೆಂಟ್ ಮಾಡುತ್ತೇನೆ.

ಡಾ: ಎಂ. ಮಲ್ಲೇಶ್ ಚಂದ್ : ಮಾನ್ಯ ಅಧ್ಯಕ್ಷರೆ, ಈ ಪರಿಸರ ಹೋರಾಟ ಇರುವುದೇ ತಮ್ಮ ಉಳಿವಿಗೋಸ್ಕರವೆಂದು ತಿಳಿದುಕೊಂಡು ದಕ್ಷಿಣ ಕನ್ನಡಜಿಲ್ಲೆಯಲ್ಲಿ ಆರಂಭವಾಗಿದೆ. ಇದಕ್ಕೆ ಕೆಲವು ಸಲಹೆಗಳನ್ನೂ ಕೊಟ್ಟಿದ್ದಾರೆ. ವಿರೋಧಕ್ಕೋಸ್ಕರ ವಿರೋಧವೆಂದು ಮಾಡುತ್ತಿಲ್ಲ. ಕೊಜೆಂಟ್ರಿಕ್ಸ ಬಗ್ಗೆ ಬಂದಾಗ desulfurisation unit and scrubber systemನ್ನು, ಅಳವಡಿಸಬೇಕು ಎಂದು, ವಿದೇಶಗಳಲ್ಲಿ ಅದನ್ನು ಕಡ್ಡಾಯವಾಗಿ ಮಾಡಿದ್ದಾರೆ. ಇಲ್ಲಿ ಮಾಡಿದರೆ ಅನೇಕ ರೀತಿಯಲ್ಲಿ ಪೊಲ್ಯೂಷನ್ ಆಗುವುದನ್ನು ತಡೆಗಟ್ಟಲಿಕ್ಕೆ ಸಾಧ್ಯಉಂಟು. ಆದರೆ ದುರಾದೃಷ್ಟವಶಾತ್ ಇವತ್ತು ಪೊಲ್ಯೂಷನ್ ಕಂಟ್ರೋಲ್ ಬೋರ್ಡಿಗೆ, ನಮಗೆ ಇದರಿಂದ ವಿನಾಯಿತಿ ಕೊಡಬೇಕೆಂದು ಅವರು ಬರೆದಿದ್ದಾರೆ. ಮತ್ತು ಯಾವುದೇ ರೀತಿಯ ಅಗ್ರಿಮೆಂಟಿನಲ್ಲಿ ಇದನ್ನು ನಮೂದಿಸಿಲ್ಲ.

ರಾಮ್ ಸಮ್ರಾಟ್ ಎಂದು ಯಾರು ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾರೆ, ಅವರು ಒಂದು ಡ್ರಾಫ್ಟ ಅನ್ನು ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ಕಳಿಸುತ್ತಿದ್ದಾರೆ. ನಾವು ಕೇಳಿದಂತಹ ವಿನಾಯಿತಿಗೆ ಈ ರೀತಿಯ ಉತ್ತರ ಕೊಡಿ ಎಂದು, ಅವರೂ ಕಳಿಸುವಂತಹ ವ್ಯವಸ್ಥೆಯಾಗುತ್ತಿದೆ. ಈ ನಿಟ್ಟಿನಲ್ಲಿ ನಾನು ನಿಮ್ಮಲ್ಲಿ ವಿನಂತಿ ಮಾಡುವುದು ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಯಾವುದು ಇದೆ, ಅದು

ಏನೇನೂ ಒಳ್ಳೆಯದಾಗಿ ಕೆಲಸ ಮಾಡುತ್ತಿಲ್ಲ. ಅದನ್ನು ಬದಲಾಯಿಸಿ ದಕ್ಷ ಅಧಿಕಾರಿಗಳನ್ನು ಹಾಕಿ, ಹರಿಹರ ಪಾಲಿಫೈಬರ್‌ನಲ್ಲಿ ಏನು ಅನಾಹುತವಾಗಿತ್ತೋ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ರೀತಿ ಯಾಗುವುದು ಬೇಡ. ವಿರೋಧಕ್ಕೋಸ್ಕರ ವಿರೋಧವೆಂದು ಅಲ್ಲ. ಇಲ್ಲಿ ಕ್ಷೇತ್ರದ ಉಳಿವಾಗಬೇಕು. ಬೆಳೆ ಡೆವಲಪ್‌ಮೆಂಟ್ ಆಗಬೇಕು. ಈ ನಿಟ್ಟಿನಲ್ಲಿ ಎಲ್ಲಾ ಜನ ಪ್ರತಿನಿಧಿಗಳನ್ನು ಪರಿಸರ ಪ್ರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯಾವುದು ಧಾರಣಾ ಆಧಾರದ ಮೇಲೆ ಅದನ್ನು ಅನುಸರಿಸಬೇಕೆಂದು ನಮ್ಮ ಮಿತ್ರರು ಹೇಳಿದ್ದಾರೆ. ಅದರ ಆಧಾರದಲ್ಲಿ ಬರುವಂತಹ ಕೈಗಾರಿಕೆಗಳನ್ನು ತನ್ನಿ ಅದನ್ನು ಬಿಟ್ಟು ಈ ರೀತಿ ಮಾಡಬೇಡಿ ಎಂದು ವಿನಂತಿ ಮಾಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರನ್ನು ಸ್ಥಳೀಯರು ಮುಖಂಡರನ್ನೂ ಕರೆಯುತ್ತೇನೆ ಸ್ವಾಮಿಗಳನ್ನು ನಾವು ಕರೆಯುವುದು ಬೇಡ, ಅವರ ಹತ್ತಿರಕ್ಕೆ ಮಾನ್ಯ ದೇಶಪಾಂಡೆಯವರನ್ನೇ ಕಳಿಸಿಕೊಡುತ್ತೇನೆಂದು ನಾನು ಹೇಳಿದೆ. ಇದರೊಳಗೆ ನಮ್ಮದು ಯಾವುದೇ ರಿಸರ್ವೇಷನ್ ಇಲ್ಲ. ಆಧುನಿಕವಾದ ತಂತ್ರಜ್ಞಾನವನ್ನ ಅಳವಡಿಸಿ, ಪರಿಸರಕ್ಕೆ ಅಪಾಯವಾಗದ ರೀತಿಯಲ್ಲಿ ಎಷ್ಟರಮಟ್ಟಿಗೆ ಮುಂಜಾಗ್ರತೆ ವಹಿಸಬೇಕು ಹಾಕ್ಷಣಕ್ಕೆ ಬಲಿಯಾಗಬೇಕಾದುದು ಅವಶ್ಯಕತೆ ಇಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ ಮಾನ್ಯ ಸಭಾಪತಿಯವರು ಇಲ್ಲೇ ಇದ್ದಾರೆ. ನನ್ನ ಹತ್ತಿರ ಡೆಲಿಗೇಷನ್ ಬಂದವರಿಗೆ ಹೇಳಿದೆ. ನಿಮ್ಮನ್ನು ಸಿಂಗಪೂರಕ್ಕೆ ಸರಕಾರದ ಖರ್ಚಿನಲ್ಲಿ ಕಳಿಸುತ್ತೇನೆಂದು. ಮಾನ್ಯ ಮೊಯಿಲಿಯವರು ಇಲ್ಲೇ ಇದ್ದಾರೆ. ಯಾರ್ಯಾರು ನನ್ನ ಹತ್ತಿರ ಡೆಲಿಗೇಷನ್ ಬಂದರೋ ಅವರಿಗೆ ಸರಕಾರದ ಖರ್ಚಿನಲ್ಲಿ ಸಿಂಗಪೂರಕ್ಕೆ ಕಳಿಸುತ್ತೇನೆ, ಅಲ್ಲಿ ಹೋಗಿ ವಿಚಾರ ಮಾಡಿಕೊಂಡು ಬನ್ನಿ ಎಂದು ಹೇಳಿದೆ. ಅಲ್ಲಿ ಇವತ್ತು ಕೆಮಿಕಲ್ ಇಂಡಸ್ಟ್ರೀಸ್ ಇವೆ ಆಯಿಲ್ ರೀಫೈನರೀಸ್ ಇವೆ ಫರ್ಟಿಲೈಸರ್ಸ್ ಫ್ಯಾಕ್ಟರಿಗಳು ಇವೆ. ಆಲರೌಂಡ್ ಸೀ ಇದೆ. ಅಲ್ಲಿ ಎಷ್ಟರ ಮಟ್ಟಿಗೆ ಪರಿಸರ ಹಾಳಾಗಿದೆ ನೀವು ಹೋಗಿ ನೋಡಿಕೊಂಡು ಬನ್ನಿ, ಅಲ್ಲೇನು ತಂತ್ರಜ್ಞಾನ ಇದೆ ಅದನ್ನು ಇಲ್ಲಿ ಅಳವಡಿಸಿ ಎಂದು ಹೇಳಿ, ನಾನು ಅದನ್ನು ಅಳವಡಿಸಲಿಕ್ಕೆ ಎನ್‌ಫೋರ್ಸ್ ಮಾಡುತ್ತೇನೆಂದು ಹೇಳಿದೆ. ನಾನು ಮಾನ್ಯ ಸಭಾಪತಿಯವರ ಮುಖಂಡತ್ವದಲ್ಲಿ ಯಾರ್ಯಾರು ಬಂದರೋ ಅವರು ಮುಂದೆಯೇ ನಾನು ಈ ಮಾತನ್ನು ಹೇಳಿದ್ದೇನೆ. ಈಗ ನೀವು ಒಪ್ಪಿಕೊಂಡಿರಿ ಸಮಾಧಾನವಾಯಿತು ಕರೆಸುತ್ತೇನೆ. ನಾನು ಏತಕ್ಕೆ ಈ ವಿಷಯ ಹೇಳಿದೆ ಎಂದರೆ, ನಿಮ್ಮ ಕಣ್ಣಿಂದಲೇ ನೀವು ನೋಡಿಕೊಂಡು ಬಂದು ಇವತ್ತು ಅಲ್ಲಿ ಏನು ಪರಿಸರವನ್ನು ಉಳಿಸಲಿಕ್ಕೆ ಮಾಡಿದ್ದಾರೆ ಎನ್ನತಕ್ಕಂತಹ ವಿಧಿವಿಧಾನಗಳನ್ನು ಇವೆಯೋ-ತಾಂತ್ರಿಕ ಜ್ಞಾನ ಇದೆಯೋ ಅದನ್ನು ಅಳವಡಿಸಲಿಕ್ಕೆ ಸಿದ್ಧನಿದ್ದೇನೆ ನೀವು ಹೋಗಿ ನೋಡಿಕೊಂಡು ಬನ್ನಿ ಎಂದು ಹೇಳಿದರೆ, ನೀವು ಹೋಗಲಿಕ್ಕೆ ಸಿದ್ಧ ಇಲ್ಲ. ಇನ್ನು ಚರ್ಚೆ ಬೇಡ. ವೈಜಾಕನಲ್ಲಿ, ಕೊಚ್ಚಿನನಲ್ಲಿ ಬೇರೆ ಬೇರೆ ನಮ್ಮ ರಾಷ್ಟ್ರದಲ್ಲಿ ಎಲ್ಲೆಲ್ಲಿ ಆಯಿಲ್ ರೀಫೈನರೀಸ್ ಇದೆಯೋ, ಅದನ್ನೆಲ್ಲಾ ಹೋಗಿ ನೋಡಿಕೊಂಡು ಬನ್ನಿ ಎಂದು ಹೇಳಿದೆ. ಆಮೇಲೆ ಇನ್ನೊಂದು ಟೀಮ್ ಬರಲಿಲ್ಲ. ಇದರಲ್ಲಿ ರಾಜಕೀಯ ಬೆರೆಸುತ್ತೇವೆಂದು ಹೇಳುವುದು ಬೇಡ. ಇದರ ಬಗ್ಗೆ ಚರ್ಚೆ ಮಾಡುವುದು ಬೇಕೆ? ನೀವೇನು. ಈ ಸಭೆಯಲ್ಲಿ ಹೇಳಿದಿರಿ ನಾನು ಸಹಕಾರ ಕೊಡುತ್ತೇನೆಂದು ಅದಕ್ಕೆ ನಾನು ಧನ್ಯವಾದಗಳನ್ನು

ಆಹ್ವಾನಿಸುತ್ತೇನೆ. ಮಾನ್ಯ ಹೂಡಿಕೆದಾರರನ್ನು, ಮಾನ್ಯ ಯಡಿಯೂರಪ್ಪನವರನ್ನು ಮತ್ತು ಆ ಭಾಗದ ಶಾಸಕರನ್ನು ಕರೆಸಿ ಕುಳಿತುಕೊಂಡು ಚರ್ಚೆ ಮಾಡೋಣ. ಅಧಿಕಾರಿಗಳನ್ನೂ ಆ ಸಭೆಗೆ ಕರೆಸೋಣ. ಏನು ಹೊಸ ತಂತ್ರಜ್ಞಾನ ಇದೆಯೋ ಯಾವ ತಾಂತ್ರಿಕ ತಜ್ಞರು ಸೂಚನೆ ಕೊಡುತ್ತಾರೋ ಪಕ್ಷಪಕ್ಷ ಏನು ಸಲಹೆ ಕೊಡುತ್ತಾರೋ ಅದನ್ನು ಗಮನದಲ್ಲಿಟ್ಟುಕೊಂಡೇ ಮಾಡಲಿಕ್ಕೆ ನಾವು ಸಿದ್ಧರಿದ್ದೇವೆ ನಮಗೇನೂ ಯಾವ ಪ್ರೆಸ್ಟೀಜ್ ಇದರಲ್ಲಿ ಇಲ್ಲ. ಕೊಜೆಂಟ್ರಿಕ್ಸ್ ಬಗ್ಗೆ 2 ವಾರದಲ್ಲಿ ಕ್ಲಿಯರೆನ್ಸ್ ಸಿಗಬಹುದೆಂಬುದು ನನ್ನ ಭಾವನೆ. ಮಾನ್ಯ ಪ್ರಧಾನ ಮಂತ್ರಿಗಳ ಜೊತೆ ಮಾತನಾಡುವುದಕ್ಕೆ ಹಿಂದಿನ ದಿನ ಅದಕ್ಕೆ ಸಂಬಂಧಪಟ್ಟಂತಹ ಏನು ಮಾಹಿತಿ ಬೇಕಾಗುತ್ತದೆ ಅದನ್ನು ಕಳಿಸಿಕೊಟ್ಟಿದ್ದೇನೆ. ಇದಕ್ಕೆ ಸ್ಪೆಷಲ್ ಮೆಸೆಂಜರನ್ನು ಕಳಿಸಿದ್ದೇವೆ. ಈಗಾಗಲೇ ಅಂತಹ ಎರಡು ಪ್ರಾಜೆಕ್ಟ್‌ಗಳನ್ನು ಅಂದರೆ ತಮಿಳುನಾಡು, ಆಂಧ್ರದ್ದನ್ನು ಕ್ಲಿಯರ್ ಮಾಡಿದ್ದಾರೆ. ಫೈನಲ್ ಸ್ಟೇಜಿಗೆ ಬಂದಿದೆ. We have accepted all the conditions imposed by the Central Electricity Authority ಅದು ಏನು ಹೇಳಿದ್ದಾರೋ ಒಪ್ಪಿಕೊಂಡಿದ್ದೇವೆ. ಇನ್ನು ಎರಡು ವಾರದಲ್ಲಿ ಕ್ಲಿಯರೆನ್ಸ್ ಬರಬಹುದು. ಮಂಗಳೂರು ಇಂಡಸ್ಟ್ರಿಯಲ್ ಕ್ಯಾಪಿಟಲ್ ಆಗುತ್ತದೆಂದು ನಾನು ಹೇಳಿದೆ. ಈ ಮಾತನ್ನು ಹೇಳಿದಾಗ ಅವರು ಇದ್ದರು. ನೀವು ಸ್ವಲ್ಪ ಸಹಕಾರ ಕೊಡಿ. ಪವರ್ ಸೆಕ್ಟರ್ ಒಂದರಲ್ಲಿ ಹೆಚ್ಚು ಕಮ್ಮಿ 27-28 ಸಾವಿರ ಕೋಟಿ ನಾವು ವಿನಿಯೋಗ ಮಾಡಬೇಕಾಗುತ್ತದೆ. 7 ಸಾವಿರ ಮೆಗಾವ್ಯಾಟಿನ ವಿದ್ಯುತ್ ಅನ್ನು ಉತ್ಪತ್ತಿ ಮಾಡಬೇಕಾದರೆ, ಸಂಪೂರ್ಣವಾಗಿ four barge mounted ಕೊಟ್ಟಿದ್ದೇವೆ ಅದಕ್ಕೆ 2 ಸಾವಿರ ಕೋಟಿ ಹತ್ತಿರ ಆಗುತ್ತದೆ ಸ್ಮಾಲ್ ಸ್ಮಾಲ್ ಪ್ರಾಜೆಕ್ಟ್ ಸೇರಿ ಇಷ್ಟು ಆಗುತ್ತೆ. ಅದಲ್ಲದೆ 19 ಪ್ರಾಜೆಕ್ಟ್‌ಗಳಿಗೆ ನಾವು ಏನು ಕ್ಲಿಯರೆನ್ಸ್ ಅನ್ನು ಕೊಟ್ಟಿದ್ದೇವೆ ಅದಕ್ಕೆ 27-28 ಸಾವಿರ ಕೋಟಿಯಾಗುತ್ತದೆ. ನಮ್ಮ ಬಜೆಟ್ ಸ್ಪೀಚಿನಲ್ಲಿ ಎಷ್ಟು ಎಂಪ್ಲಾಯ್‌ಮೆಂಟ್ ಜನರೇಷನ್ ಆಗುತ್ತದೆಂದು ಹೇಳಿದ್ದಾರೆ, ಅದನ್ನು ನಾನು ಮತ್ತೆ ಪುನರುಚ್ಚಾರ ಮಾಡುವುದಕ್ಕೆ ಆಗುವುದಿಲ್ಲ. ನಾವು ಕ್ಲಿಯರ್ ಮಾಡಿರತಕ್ಕಂತಹ ಪ್ರಾಜೆಕ್ಟ್ ಸುಮಾರು 15 ಮಿಲಿಯನ್ ಟನ್ ಸ್ಟೀಲನ್ನು ಈ ರಾಜ್ಯದಲ್ಲಿ ಪ್ರೊಡ್ಯೂಸ್ ಮಾಡಲಿಕ್ಕೆ ಸಾಧ್ಯವಾಗಿದೆ. ಅಷ್ಟು ಯೋಜನೆಗಳಿಗೆ ನಾವು ಈಗಾಗಲೇ ಕ್ಲಿಯರೆನ್ಸ್ ಕೊಟ್ಟಿದ್ದೇವೆ. 15 ಮಿಲಿಯನ್ ಟನ್ ಇವತ್ತು ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಗಳಿಗೆ ಅನುಮತಿ ಕೊಟ್ಟಿದ್ದೇವೆ. 50 ಸಾವಿರ ಮಕ್ಕಳಿಗೆ ಇದೊಂದು ಬಾಬಿನಲ್ಲಿ ಕೆಲಸ ಸಿಕ್ಕಬಹುದೆಂಬ ನಿರೀಕ್ಷೆ ನಮ್ಮದು ಇದೆ. Karnataka is a poineer state about the steel industries. ಇದೊಂದು ವಿಷಯವನ್ನು ಹೇಳಬೇಕಾಗುತ್ತದೆ.

ಇವತ್ತು ನಮ್ಮಲ್ಲಿ ಸಿಗತಕ್ಕಂತಹ ಉಕ್ಕು, ಅದು ದೋಣಿಮಲೈ ಇರಬಹುದು ಕುದುರೆಮುಖ ಇರಬಹುದು, ಇಲ್ಲಿ ಹಿಂದೆ ಏನು ನಾವು ಕೇಂದ್ರ ಸರಕಾರದ ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಕೆಲವು ಏರಿಯಾಗಳನ್ನು ನಾವು ಬಿಟ್ಟು ಕೊಡಬೇಕೆಂದು ಹೇಳಿ ಮಾನ್ಯ ಪ್ರಧಾನ ಮಂತ್ರಿಗಳಿಗೆ ಈಗಾಗಲೇ ಪತ್ರ ವ್ಯವಹಾರ ಮಾಡಿದ್ದೇನೆ ಅಷ್ಟೇ ಅಲ್ಲ ಇಲ್ಲಿಂದ ಮುಂದಕ್ಕೆ ನಾವು ಐರನ್ ಓರ ಅನ್ನು ಎಕ್ಸ್‌ಪೋರ್ಟ್ ಮಾಡುವುದು ಬೇಡ ಇಲ್ಲಿಗೆ ತಡೆ ಹಾಕಬೇಕಾಗುತ್ತದೆ. ಇಷ್ಟು ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಕೊಟ್ಟಿದ್ದೇವೆಂದು ನಾನು ತಿಳಿಸಿದ್ದೇನೆ. ಮಾನ್ಯ ಕೈಗಾರಿಕಾ ಸಚಿವರು ರಾಜ್ಯದಲ್ಲಿ ಒಂದು ಕೈಗಾರಿಕಾ ಪಾಲಿಸಿಯನ್ನು ತರತಕ್ಕಂಥದ್ದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನು ಒಂದು

ತಿಂಗಳಲ್ಲಿ ಕರ್ನಾಟಕದಲ್ಲಿ ನಮ್ಮ ಇಂಡಸ್ಟ್ರಿಯಲ್ ಪಾಲಿಸಿ ಏನು ಎನ್ನುವುದನ್ನು ಜನತೆಯ ಮುಂದಿಡುತ್ತೇವೆ

1.40 ಪಿ.ಎಂ.

ಬಹುಶಃ ನೀರಾವರಿಗೆ ಚರ್ಚೆ ಬೇರೆ ಮಾಡುವುದಾದರೆ ಆವೊತ್ತೇ ರಿಪ್ಲೈಯನ್ನು ಕೊಡುತ್ತೇನೆ. ನೀವು ಅಷ್ವರ್ನ್‌ಮೆಂಟನ್ನು ಮೋಷನ್ ತಂದಿದ್ದೀರಿ ಎಂದು ಕಾಣುತ್ತದೆ. ಸುಮಾರು 37-38 ಸಾವಿರ ಎಕರೆ ಫಾರೆಸ್ಟ್ ಲ್ಯಾಂಡನ್ನು ಯಾರು 10-20 ವರ್ಷಗಳಿಂದ ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ, ಅಲ್ಲಿ ವಾಸ ಇದ್ದಾರೆ, ಆ ಜನಗಳಿಗೆ ಅದನ್ನು ನಾವು ಖಾಯಂ ಮಾಡುವ ಒಂದು ವ್ಯವಸ್ಥೆ ಮಾಡುತ್ತೇವೆ ಎನ್ನುವುದನ್ನು ಹೇಳಿದೆ. ಅದು ಕೊನೆಯ ಘಟ್ಟಕ್ಕೆ ಬಂದಿದೆ. ಒಂದು ಸಣ್ಣ ಕ್ಲಾರಿಫಿಕೇಷನ್ ಬೇಕು ಎಂದು ಹೇಳಿ ಮೊನ್ನೆ ನಮಗೆ ಕೇಂದ್ರ ಸರಕಾರದ ಸಚಿವರಾಗಿರುವ ಶ್ರೀಮಾನ್ ರಾಜೇಶ್ ಪೈಲಟರವರು ತಿಳಿಸಿದರು. ಅದನ್ನು ಕೂಡ ಕಳುಹಿಸಿಕೊಟ್ಟಿದ್ದೇವೆ. ಬಹುಶಃ ಇನ್ನೊಂದು ವಾರದಲ್ಲಿ ಅವಕ್ಕೆ ಅನುಮತಿ ಬರಬಹುದು ಎಂದು ಕಾಣುತ್ತದೆ. ಒಂದು ಸಣ್ಣ ಕ್ಲಾರಿಫಿಕೇಷನ್. ಏಕೆಂದರೆ ಇಂಡಿವಿಜುಯಲವೈಸ್ ಯಾರ್ಯಾರು ಎಷ್ಟೆಷ್ಟು ಜಮೀನನ್ನು ಮಾಡಿದ್ದಾರೆ ಎನ್ನುವುದರ ಬಗ್ಗೆ ವಿವರಣೆ ಬೇಕು ಎಂದು ಕೇಳಿದ್ದರು. ಅವನ್ನೆಲ್ಲಾ ಮಾಹಿತಿ ಒದಗಿಸಿಕೊಟ್ಟಿದ್ದೇವೆ. ಅದು ಸುಮಾರು 37-38 ಸಾವಿರ ಎಕರೆಗೆ ಅನುಮತಿ ಸಿಕ್ಕುತ್ತದೆ. ಅದನ್ನು ಕೂಡ ಆ ಜನಗಳಿಗೆ ಅವರದೇ ಖಾಯಂ ಆದಂಥ ಒಂದು ನೆರವನ್ನು ಮಾಡಿ ಕೊಡುವುದಕ್ಕೆ ಸಿದ್ಧ ಇದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ಕೊನೆಯದಾಗಿ ಸನ್ಮಾನ್ಯ ಮೊಯಿಲಿಯವರು ಒಂದನ್ನು ಹೇಳಿದರು, ಹಿಂದಿನದೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಬರೀ ಇಷ್ಟು ಮಾತ್ರ ಹೇಳಿಬಿಡುತ್ತೇನೆ. ಹಿಂದಿನದು ಹೇಳಿಕೊಂಡು ಏನು ಆಗಬೇಕು ? ಅದರಿಂದ ಇಷ್ಟು ಸಾಕು. ಕಾಂಪ್ರೆಹೆನ್ಸೀವ್ ಡೆವಲಪಮೆಂಟ್ ಪ್ಲಾನ್ ಎಂದು ಮಾಡಿದ್ದಾರೆ, 94 ರಲ್ಲಿ ಮಾಡಿದ್ದಾರೆ. ಅಬ್ಜೆಕ್ಷನ್ಸ ಎಲ್ಲಾ ಕಾಲಫಾರ್ ಮಾಡಿ ಎಲ್ಲಾ ಅಬ್ಜೆಕ್ಷನ್ ಓವರರೂಲ್ ಮಾಡಿ ಬಿಡಿಎ ರೆಸಲ್ಯೂಷನ್ ಮಾಡಿ, ಸರ್ಕಾರಕ್ಕೆ 94ರಲ್ಲಿ ಕಳುಹಿಸಿ ಕೊಟ್ಟಿದ್ದಾರೆ. ಈಗ ನಾವು ನಾಲ್ಕು ಟೌನ್ ಷಿಫ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಒಂದು ರಾಮನಗರದಲ್ಲಿ, ಮತ್ತೊಂದು ತುಮಕೂರಿನಲ್ಲಿ, ಅತ್ತಿ ಬೆಲೆ ಹತ್ತಿರ, ಇನ್ನೊಂದು ಸೂಪರ್ ಎಕ್ಸಪ್ರೆಸ ಹೈವೇ ಮಾಡಬೇಕು ಎಂದು ಹೇಳಿ ನಿರ್ಣಯ ಮಾಡಿ, ಕ್ಯಾಬಿನೆಟ್‌ನಲ್ಲಿ ಕ್ಲಿಯರ್ ಮಾಡಿದ್ದೇವೆ, ಅದರಲ್ಲಿ ಆರು ಟೌನಷಿಪಗೆ ಅವಕಾಶ ಮಾಡಿದ್ದೇವೆ. ಅದರದೇ ಬಿಲ್ಟ ಓನ್ ಆಪರೇಷನ್. ನಾವೇನು ಕೊಡುವುದಿಲ್ಲ. ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು. ಅವರು ಆ ಟೌನಷಿಪನ್ನು ಮಾಡಿ ಕೊಡುವುದರ ಜೊತೆಗೆ, ಅಲ್ಲಿ ಕೆಲವು ವ್ಯಾಪಾರ ಮತ್ತೊಂದು ಮಗದೊಂದಕ್ಕೆ ಟ್ರೇಡ್ ಇದಕ್ಕೆಲ್ಲಾ ಷಾಪಿಂಗ್ ಕಾಂಪ್ಲೆಕ್ಸಗಳನ್ನೆಲ್ಲಾ ಮಾಡಿಕೊಡುತ್ತಾರೆ. ಮನೆಗಳನ್ನು ಕಟ್ಟಿ ಒದಗಿಸಿಕೊಡುವಂಥದ್ದು ಹೀಗೆ ಅದೊಂದು ಪ್ರಾಜೆಕ್ಟನ್ನು ಕ್ಲಿಯರ್ ಮಾಡಿದ್ದೇವೆ. ಈಗ ಈ ಹಿನ್ನೆಲೆಯಲ್ಲಿ ಇವತ್ತು ಲಾಯಿಡ್ಸ ಕಂಪನಿಗೆ ನೀವು ಏನೋ ಮಾಡಿಬಿಟ್ಟಿದ್ದೀರಿ, ಏನೋ ಮಾಡಿದ್ದೀರಿ ಎನ್ನುವ ದೊಡ್ಡ ಆಪಾದನೆ ನಮ್ಮ ತಲೆಯ ಮೇಲೆ ಅಂದರೆ ಸರ್ಕಾರದಮೇಲೆ ಹೇಳಿದ್ದಾರೆ. ಸಂತೋಷವೇ, ಅದರಲ್ಲೇನು ಇಲ್ಲ ಅವರು ಏನು ಹೇಳಿದ್ದಾರೆ ಎನ್ನುವುದಕ್ಕೆ ಉತ್ತರ ಕೊಟ್ಟಮೇಲೆ ಗೊತ್ತಾಗುತ್ತದೆ. 17 ನವೆಂಬರ್ 1995ರಲ್ಲಿ ಒಂದು ಗೌರ್ನಮೆಂಟ ಆರ್ಡರನ್ನು ಮಾಡಿದ್ದೇವೆ.

``In case where the land has been notified by the BDA but acquistion proceedings are not completed and the land is not vested in BDA, the owner of the land may if desires be permitted to develop the land for formation of the sites for group housing. Where the land owner in his own or with the assistance of the developer takes up the group housing project he shall give 12% of the total built area to the BDA, in case if he forms sites so formed to the BDA. Private devlopers/owners who desires to form sites on the and owned by them but not covered under the land acquisition process may be permitted subject to earmarking of 25% of the total sital area for EWS and LIG. The site should be made available to the deserving persons identified go in for group housing projects, their proposals shall include construction of LIG, MIG-2, HIG 1 & 2 type of houses. The cost of LIG and MIG houses should be so priced that it should be affordable and made available to the deserving persons. Allotment of these will have to be in conformity with the BDA Allotment Rules and the number of such LIG and MIG houses should not be less than 25% of the total number of houses proposed to be built". This was the policy decision that has been taken.

ಈ ಹೌಸಿಂಗ್ ಪಾಲಿಸಿ ಡಿಸಿಷನ್ ತೆಗೆದುಕೊಂಡಿದ್ದು ಜುಲೈಯಲ್ಲಿ ಈ ರಾಜ್ಯದಲ್ಲಿ ನಾವು ಪ್ರೈವೇಟ್ ಬಿಲ್ಡರ್ಸ್‌ಗೆ ಯಾರೇ ಬಂದರೂ ಕೊಡಬೇಕು ಎನ್ನುವ ನಿರ್ಣಯ ಮಾಡಿದೆವು. ಬೆಂಗಳೂರಿನಲ್ಲಿ ಸುಮಾರು ಒಂದುಲಕ್ಷ ಮನೆಗಳನ್ನು ನಾವು ಕಟ್ಟಿಸಬೇಕು ಎನ್ನುವ ನಿರ್ಣಯವನ್ನು ಮಾಡಿದೆವು. It is the cabinet decision and in conformity with that decision, this is only on MOU signed with Malaysian company. ಒಂದು ಮಲೇಶಿಯನ್ ಕಂಪನಿ ಜೊತೆಗೆ, ಇನ್ನೊಂದು ಬಾಂಬೆ ಕಂಪನಿ ಜೊತೆಗೆ ಮತ್ತೊಂದು ಕಲ್ಯಾಣಿ ಗ್ರೂಪ್. ಅರು ಟೌನಷಿಪ್ ಕಟ್ಟುವುದಕ್ಕೆ It is only an MOU. We have not given anybody uptill now, ಚೀಫ್ ಸೆಕ್ರೆಟರಿ ಒಂದು ಪತ್ರ ಬರೆದರೂ ಅದನ್ನು ಪತ್ರಿಕೆಯಲ್ಲಿ ಪಬ್ಲಿ, ಮಾಡಿಬಿಟ್ಟರು. ಆ ಚೀಫ್ ಸೆಕ್ರೆಟರಿ ಬಿಡಿಎ ಛೇರ್ಮನ್‌ಆಗಿದ್ದಾಗಲೇ ಸಿಡಿಪಿ ಆಗಿತ್ತು. ಮುಂದಕ್ಕೆ ಹೋಗಿಲ್ಲ, ಹೋಗುವುದಿಲ್ಲ. ಅಲ್ಲೇನು ನಡೆದಿದೆ ಹಗರಣ ತೆಗೆಯಬೇಕು ಎಂದು ಇದ್ದರೆ, ಆ ಹಗರಣ ತೆಗೆದು ನನಗೆ ಗೊತ್ತಿದೆ, ಏನೇನು ನಡೆದಿದೆ ಎಂದು, ಸಿಡಿಪಿ ವ್ಯಾಪ್ತಿಯೊಳಗೆ ಬರುವ ಜಾಗವನ್ನು ಕೊಂಡುಕೊಂಡಂಥ ಕಾಲದಲ್ಲಿ ಇದಕ್ಕೆ ನನ್ನ ಪರ್ಮಿಷನ್ ಬೇಕಾಗಿಲ್ಲ. This is a document not by me ಯಾವಾಗ ಮುಂದೆ ಬರುತ್ತದೆ, ಅವರು ಕೊಂಡುಕೊಂಡಮೇಲೆ ಅವರೇನು ಪ್ರಾಜೆಕ್ಟ್ ರಿಪೋರ್ಟನ್ನು ಸಬುಮಿಟ ಮಾಡುತ್ತಾರೆ, ಸಬುಮಿಟ್ ಮಾಡಿದಾಗ ಷರತ್ತನ್ನು ಏನು ಈಗ ಓದಿದೆ, Govt. Order dated 17th November 1995

ಇದರಲ್ಲಿ ಏನು ಹೇಳಿದ್ದೇವೆ. ಹೌಸಿಂಗ್ ಪಾಲಿಸಿ ಬಗ್ಗೆ ಪ್ರೈವೇಟ್ ಬಿಲ್ಡರ್ಸ್, ಅವರು ಕಟ್ಟುವ ಕಾಲದಲ್ಲಿ ಬಿಡಿಎ ನವರು ನಾವು ಗುರುತಿಸತಕ್ಕಂಥ ವ್ಯಕ್ತಿಗಳಿಗೆ ಮಾತ್ರ ಇಡಬ್ಲ್ಯೂಎಸ್, ಎಲ್ಐಜಿ, ಎಂ.ಐ.ಜಿ.-1, ಎಂ.ಐ.ಜಿ-2 ಕ್ಯಾಟೆಗರಿ ಮಾಡಿದ್ದೇವೆ, ಅವರಿಗೆ ಕೊಡಬೇಕು -ಕಾಸ್ಟ್ ಕೂಡ ನಿಗದಿ ಮಾಡಿದ್ದೇವೆ. ಒಂದು ಲಕ್ಷ, ಮೂರು ಲಕ್ಷ ಈ ರೀತಿ ಕಾಸ್ಟ್ ನಿಗದಿ ಮಾಡಿದ್ದೇವೆ. ಈ ಹಿನ್ನಲೆಯಲ್ಲಿ ಒಂದು ಹೇಳಿದೆ, ಎಂ.ಓ.ಯು ಎನ್ನುವ ಶಬ್ದವನ್ನು ಯೂಸ್ ಮಾಡಿದ. Preliminary letter has been issued, that does not mean that the plan has been approved; everything is cleared ಎನ್ನುವ ಪ್ರಶ್ನೆಯಲ್ಲ. ಅವರು ಒಂದು ಲಕ್ಷ ಮನೆಯನ್ನು ಈ ರಾಜ್ಯದಲ್ಲಿ ಇವತ್ತು ಕಟ್ಟುತೇನೆ ಎಂದು ಮುಂದೆ ಬಂದಾಗ ಮಲೇಶಿಯನ್ ಕಂಪನಿಗೂ ಅದೇ ರೀತಿ ಒಂದು ಲೆಟರನ್ನು ಕೊಟ್ಟಿದ್ದೇವೆ. ಕಲ್ಯಾಣಿ ಗ್ರೂಫನವರು ಆರು ಟೌನಷಿಪ್ ಮಾಡುತ್ತೇನೆ ಎಂದು ಹೇಳಿದ್ದಾರೆ. ಅವರಿಗೂ ನಾವು ಇವತ್ತು ಎಂ.ಓ.ಯು ಸೈನ್ ಮಾಡಿದ್ದೇವೆ. But final project has to be approved based on the project report submitted by them and the beneficiaries has to be identified by the Bangalore Development Authority. ಅದರ ಮೇಲೆ ಆ ಅಲಾಟಮೆಂಟ್ ನಮಗೆ ಸೇರಿದ್ದುದು. ಅದು ಅವನಿಗೆ ಸೇರಿದ್ದಲ್ಲ. ಕಾಸ್ಟ ಕೂಡ ನಿಗದಿ ಮಾಡಿದ್ದೇವೆ. ಈ ಕಾಸ್ಟನಲ್ಲಿ ಪ್ರಿಲಿಮಿನರಿ ಅಂಡರ್-ಸ್ಟ್ಯಾಂಡಿಂಗ್ ಬಂದಾಗ ಈ ಎಲ್ಲಾ ಷರತ್ತುಗಳಿಗ ಒಪ್ಪಿಕೊಂಡು ಅವರು ಪ್ರಾಜೆಕ್ಟ ರಿಪೋರ್ಟ ಸಬಮಿಟ್ ಮಾಡಿ, ಅದು ಬಿಡಿಎ ಮುಂದೆ ಹೋಗಿ, ಬಿಡಿಎ ಯವರು ರೆಕಮೆಂಡ ಮಾಡಿ, ರಾಜ್ಯಸರ್ಕಾರದ ಮುಂದೆ ಬಂದು ಸಚಿವಸಂಪುಟದಲ್ಲಿ ಅಂತಿಮ ನಿರ್ಣಯವಾಗುವವರೆಗೂ ಒಂದು ಲೆಟರ್ ಕೊಟ್ಟಿರುವುದು ಅವನಿಂದ ನಾವು ಏನೊ ಇದರೊಳಗೆ ಬಾರೀ ಅವ್ಯವಹಾರ ನಡೆದಿದೆ ಎನ್ನುವ ಪ್ರಶ್ನೆ ಇದೆಯಲ್ಲ, ಇದಕ್ಕೆ ಹುರುಳಿಲ್ಲ ಎಂದು ಅಷ್ಟೇ ಸೂಕ್ಷ್ಮವಾಗಿ ಹೇಳುತ್ತೇನೆ. ಇನ್ನು ಅದಕ್ಕಿಂತ ಹೆಚ್ಚು ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಬೇಕಾದರೆ ಆ ಡಾಕ್ಯುಮೆಂಟನ್ನು ಬರೆದಿರುವ ಕಾಗದವನ್ನು ಈ ಸಭೆಯ ಮುಂದೆ ಇಡುತ್ತೇನೆ. ಅದರಲ್ಲೇನೂ ಇಲ್ಲ, ಪ್ರಾಜೆಕ್ಟ ರಿಪೋರ್ಟನ್ನು ಅವನು ನಮಗೆ ಸಬಮಿಟ್ ಮಾಡಿದಮೇಲೆ ಇನ್ನೊಂದು ಸಾರಿ ಸಭೆಯ ಮುಂದೆ ಅದನ್ನೂ ಇಡುತ್ತೇನೆ. ಇದರಲ್ಲೇನು ಯಾರದೂ ದಾಕ್ಷಿಣ್ಯ ಉಳಿದಿಲ್ಲ ಎನ್ನುವುದನ್ನು ಹೇಳುತ್ತೇನೆ. ಒಂದು ಮಾತನ್ನು ನಾನು ಹೇಳಿದೆ.

ಈ ರಾಜ್ಯದಲ್ಲಿ ಯಾವ್ಯಾವ ಎಂ.ಓ.ಯು. ಸೈನ್ ಆಗಿದ್ದಾವೆ, ನಮ್ಮ ಕಾಲದಲ್ಲಿ ಹಿಂದಿನ ಕಾಲದಲ್ಲ ಬೇಡ, ನಾನು ಹಿಂದಿನ ಕಾಲದ್ದರ ಬಗ್ಗೆ ಏನೂ ಚರ್ಚೆ ಮಾಡುವುದಿಲ್ಲ ಬೇಕಾದರೆ ಅದಕ್ಕೆ ಒಂದು ದಿನ ಗೊತ್ತು ಮಾಡಿ ಏನು ಬೇಕಾದರೂ ಚರ್ಚೆ ಮಾಡಲಿಕ್ಕೆ ಚರ್ಚೆ ಮಾಡಲು ನಾನು ಸಿದ್ಧನಾಗಿದ್ದೇನೆ. I am not prepared to Shirk the responsibility so far as the discussions is concered on any MOU; whether it is power, whether it is industry, whether it is Housing. ಯಾವ ಎಂ.ಒ.ಯು ಬಗ್ಗೆ ಬೇಕಾದರೂ ಚರ್ಚೆ ಮಾಡುವುದಾದರೂ ಒಂದು ದಿನ ಗೊತ್ತು ಮಾಡಿ. ಅವರಿಗೆ ಸನ್ಮಾನ್ಯ ನಾಯಕರಿಗೆ ನಾನು ಹೇಳುತ್ತೇನೆ.

Let us have a discussion. ಇದರೊಳಗೆ ಅವರು ಬರೆದಿರುವ ಕಾಗದವನ್ನೂ ಇಡುತ್ತೇನೆ. ಆಮೇಲೆ ನಮ್ಮ ಹೌಸಿಂಗ್ ಪಾಲಿಸಿ ಡಾಕ್ಯುಮೆಂಟೂ ಇಲ್ಲಿ ಇಡುತ್ತೇನೆ. ಕ್ಯಾಬಿನೆಟ್ ಡಿಸಿಷನ್ ಅದಮೇಲೆ ಗವರ್ನಮೆಂಟ್ ಆರ್ಡರ್ ಮಾಡಿರುವುದನ್ನೂ ಇಲ್ಲಿ ಇಡುತ್ತೇನೆ. ಅದರಲ್ಲಿ ಏನೂ ಮುಚ್ಚುಮರೆ ಇಲ್ಲ ಎಂದು ತಿಳಿಸುತ್ತೇನೆ. ಹಿಂದಿನ ಸಿಡಿಪಿ ಮೆಂಬರ್ ಆಗಿದ್ದವರು. ನಿಮಗೆ ಹೆಚ್ಚು ಅನುಭವ ಇದೆ. ಅದಕ್ಕಿಂತ ನಾನು ಹೆಚ್ಚೇನೂ ಹೇಳಬೇಕಾದ ಅವಶ್ಯಕತೆ ಇಲ್ಲ. ಹಾಗೆ ಹೇಳುವುದಕ್ಕೆ ಹೋದರೆ ಬೆಂಗಳೂರಿನದ್ದು ಒಂದು ಹಗರಣ. ಬೆಂಗಳೂರು ವಿಷಯ ಮಾತನಾಡುವುದು ಒಂದು ದೊಡ್ಡ ಹಗರಣ ಆಗುತ್ತದೆ. ಅದು ಯಾವ ಕಾಲಕ್ಕೂ ಸೀಮಿತ ಇಲ್ಲ. ಹಗರಣದ ಬಗ್ಗೆ ಹೋಗುವುದಾದರೆ ಅದನ್ನು ಒಬ್ಬರ ಮೇಲೆ ಹಾಕಿ, ತಿಪ್ಪೆ ಕೆದಕಿದ ಹಾಗೆ ಆಗುತ್ತದೆ. ಅದರ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ. ನೀರಾವರಿ ಬಗ್ಗೆ, ಚರ್ಚೆ ಆದರೆ ಪೂರ್ತಿ ವಿವರಣೆ ಕೊಡುತ್ತೇನೆ. ಚರ್ಚೆ ಆಗದೇ ಹೋದರೆ ಸೂಕ್ಷ್ಮವಾಗಿ ಇಷ್ಟು ಮಾತು ಹೇಳಿರುತ್ತೇನೆ. ಈ ಸದನಲ್ಲಿ ಒಂದು ಮಾತು ಹೇಳಿದ್ದೆ. 800 ಕೋಟಿ ರೂಪಾಯಿಯನ್ನು ನಾವು ಕೃಷ್ಣಾ ಜಲ ಭಾಗ್ಯ ನಿಗಮದಿಂದ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಎರಡು ಗಂಟೆಗಳ ಕಾಲ ಅವಕಾಶ ಕೊಡಿ.

ಶ್ರೀ ಹೆಚ್.ಡಿ. ದೇವೇಗೌಡ : ಹಾಗಿದ್ದರೆ ಈಗ ವಿವರ ಬೇಡ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೃಷ್ಣಾ ಜಲಭಾಗದಲ್ಲಿ ಇನ್ನೊಂದು ಇದೆ. ನೀರು ಅಪ್ಪರ್ ಕೃಷ್ಣಾ ಪ್ರಾಜೆಕ್ಟ ಎರಡು ಸಾವಿರ ಇಸವಿಯೊಳಗಾಗಿ ಮುಗಿಸುತ್ತೇವೆ ಎಂದು ಹೇಳಿದ್ದಿರಿ. ಸಾವಿರ ಕೋಟಿ ರೂಪಾಯಿ ಅದಕ್ಕೆ ಕೊಡುತ್ತೇವೆಂದು ಹೇಳಿದ್ದೀರಿ. ಸವಿಸ್ತಾರವಾಗಿ ಹೊಸದಾಗಿ ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಇದರ ಬಗ್ಗೆ ಅಧ್ಯಕ್ಷರು ಒಂದು ಎರಡು ತಾಸು ನಿಗದಿ ಮಾಡಬೇಕು. ಎರಡು ತಾಸು ಎಂದರೆ ನೀವು ಒಂದು ಗಂಟೆ ಮಾತನಾಡಿ. ನಾವು ಒಂದು ಐದು ನಿಮಿಷ ಮಾತನಾಡುತ್ತೇವೆ.

ಅಧ್ಯಕ್ಷರು : ಮಾನ್ಯ ತಿಮ್ಮಪ್ಪನವರಿಗೂ ನಮಗೂ ಯಾವ ನೀರಾವರಿಯೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಯಾವ ನೀರು ಬರುವುದಿಲ್ಲ ಏನೂ ಇಲ್ಲ. ಎಲ್ಲಾ ನೀರು ಕೆಳಗಡೆ ಹರಿದುಕೊಂಡು ಬರುತ್ತದೆ. ವಿದ್ಯುಚ್ಛಕ್ತಿಗೆ ಕಡಿಮೆ ಇದೆ, ಕೃಷ್ಣಾ ಪ್ರಾಜೆಕ್ಟ ಇಟ್ಟುಕೊಂಡು ಏನು ಮಾಡುತ್ತಾರೆ?

ಶ್ರೀ ಹೆಚ್.ಡಿ. ದೇವೇಗೌಡ : ಚರ್ಚೆಗೆ ಅವಕಾಶ ಕೊಟ್ಟಾಗ ವಿವರಣೆ ಹೇಳುತ್ತೇನೆ. ಈಗ ಒಂದು ಶಬ್ದ ಮಾತ್ರ ಪ್ರಯೋಗ ಮಾಡಿಬಿಡುತ್ತೇನೆ. ಎರಡು ಸಾವಿರ ಇಸವಿಯೊಳಗೆ ಕೃಷ್ಣಾ ನದಿಯ ನೀರು 729 ಟಿಎಂಸಿ ನೀರು ನಮ್ಮದು ಏನು ಇದೆ, ಅಷ್ಟನ್ನೂ ಉಳಿಸಿಕೊಳ್ಳಲಿಕ್ಕೆ ಅವಶ್ಯಕವಾದಂತಹ ಎಲ್ಲಾ ಕ್ರಮ ತೆಗೆದುಕೊಳ್ಳಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ 1000 ಕೋಟಿ ಖರ್ಚು ಮಾಡುತ್ತೇನೆಂದು ಹೇಳಿದ್ದು, ಇಷ್ಟೇ ನಾನು ಹೇಳುತ್ತೇನೆ.

ಅಧ್ಯಕ್ಷರು : ಎರಡು ಸಾವಿರ ಇಸವಿಯೊಳಗೆ ಕೃಷ್ಣಾ ನದಿ ನೀರನ್ನು ಬಳಕೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ಇದು ಬರೀ ಹೇಳಿಕೆ ಅಲ್ಲ. ಈಗ ಬರೀ 500ಕೋಟಿ ರೂಪಾಯಿ ಯುಕೆಪಿ ಒಂದರ ಮೇಲೆ ಖರ್ಚು ಮಾಡುವುದಾಗಿದ್ದರೆ ಹೇಳುತ್ತಿದ್ದೇನೋ? ಇದು ಹೇಳಿಕೆ ಆಯಿತೇ? ಈಗೆಲ್ಲಾ ಹೇಳಿಕೊಂಡು ಬಂದಿದ್ದು ಹೇಳಿಕೆ ಅಲ್ಲ. ನೀವು ಹೊರಗಡೆ ಹೇಳಿ. ನಾನು ಇದನ್ನೂ ಹೇಳುತ್ತೇನೆ. ಇಬ್ಬರು ಹೇಳುವುದನ್ನೂ ಜನ ತೀರ್ಮಾನ ಮಾಡುತ್ತಾರೆ. ಅದಕ್ಕೆ ದೊಡ್ಡ ಚರ್ಚೆ ಆಗಲಿ. ನಾನು ಚರ್ಚೆಗೆ ಸಿದ್ಧವಾಗಿದ್ದೇನೆಂದು ಹೇಳಿದ್ದೇನೆ. ಅದರ ಬಗ್ಗೆ ಈಗ ವ್ಯಾಖ್ಯಾನ ಬೇಡ, ಕೃಷ್ಣಾ ಜಲಭಾಗ್ಯ ನಿಗಮ ಯೋಜನೆ ಬಗ್ಗೆ ಒಂದು ಸಾವಿರ ಕೋಟಿ ರೂಪಾಯಿ ಎರಡು ನೂರು ಕೋಟಿ ಕೃಷ್ಣಾ ಜಲಭಾಗ್ಯ ಯೋಜನೆಯಲ್ಲಿ, ಆ ಹಣವನ್ನು ಸಾರ್ವಜನಿಕರಿಂದ ಮತ್ತು ಖಾಸಗಿ ಸಂಸ್ಥೆಗಳಿಂದ ಕೂಡಿಸಿಕೊಡುತ್ತೇವೆನ್ನುವ ಮಾತನ್ನು ಹೇಳಿದ್ದೆವು. ಅದರಲ್ಲಿ ಸ್ವಲ್ಪಮಟ್ಟಿಗೆ ಹೊಸ ಅನುಭವ. ನಮ್ಮ ಅಧಿಕಾರಿಗಳೇ ಹೇಳುತ್ತಾರೆ. ಫೈನಾನ್ಸ ಕಮೀಷನರ್ ಮತ್ತು ಹಿರಿಯ ಅಧಿಕಾರಿಗಳು ಕೊಟ್ಟ ಸಲಹೆಯ ಮೇರೆಗೆ ನಾನು ಕೆಲಸ ಮಾಡಬೇಕಾಗುತ್ತದೆ. ನಾನೇನು ದೊಡ್ಡ ತಜ್ಞ ಎಂದು ಹೇಳಿ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಮೊದಲನೆಯ ಕಂತನ್ನು ನಾವು ಪ್ರೈವೇಟ್ ಪ್ಲೇಸಮೆಂಟ್ ಮಾಡಿದಂತಹ ಕಾಲದಲ್ಲಿ 183ಕೋಟಿರೂಪಾಯಿ ಬಂತು. ಅದರಲ್ಲಿ ನಾಲ್ಕೈದು ಕೋಟಿ ರೂಪಾಯಿ ಎಂಡೋಮೆಂಟ್ ಸಂಸ್ಥೆಗಳಿಂದ ಬಂದಿದೆ. ಬಾಕಿಯದು ಎಲ್ಲಾ ಬ್ಯಾಂಕುಗಳು ಮತ್ತು ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದ ಬಂದಿದೆ. ಏನು ಪಬ್ಲಿಕ್ ಪ್ಲೇಸಮೆಂಟ್ ನಾವು ಮಾಡಿರುತ್ತೇವೆ,150ಕೋಟಿ ರೂಪಾಯಿ ಅಂದರೆ 20 ಪರ್ಸೆಂಟ್ ಎಕ್ಸಟ್ರಾ ತೆಗೆದುಕೊಳ್ಳಬಹುದು. ಅಂದರೆ 300 ಕೋಟಿ ರೂಪಾಯಿ, ನಾವು ಪ್ರಯತ್ನ ಮಾಡಿದಂತಹ ಕಾಲದಲ್ಲಿ ಸಿ.ಬಿ. ಇಂದ ಕ್ಲಿಯರೆನ್ಸ ಆಗಬೇಕು. ಅದಕ್ಕೆ ಕೆಲವು ಶರತ್ತುಗಳಿವೆ. ಅದು ನಮಗೆ ಗೊತ್ತಿರಲಿಲ್ಲ. ಅದರ ಸ್ವಲ್ಪಮಟ್ಟಿನ ಬ್ಯಾಕಗ್ರೌಂಡ್ ವಿಚಾರ ನಮ್ಮ ಅಧಿಕಾರಿಗಳಿಗೂ ಹೊಸದು. ಇರುವ ವಿಷಯವನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅಲ್ಲಿ ಎರಡು ತಿಂಗಳು ನಮಗೆ ಕಾಲ ಗತಿಸಿಹೋಯಿತು. ಅದು 300 ಕೋಟಿ ರೂಪಾಯಿ ಜೋಡಿಸಿದರೂ ಮಾರ್ಚನಲ್ಲಿ ಇನ್ನು ಉಳಿದ 300 ಕೋಟಿ ರೂಪಾಯಿ ಫರ್ಸ ಇನಸ್ಟಾಲಮೆಂಟ್ ನಾವು ರೈಸ್ ಮಾಡಬೇಕೆಂದು ಮಾಡಿದ್ದೇವೆ. ಈ ತಿಂಗಳು ಸೆಕೆಂಡ್ ಇನಸ್ಟಾಲ್ ಮೆಂಟ್ ಏನು ಇದೆ, ಈ 250ಕೋಟಿ ರೂಪಾಯಿ ನಾವು 300 ಕೋಟಿ ರೂಪಾಯಿಯವರೆಗೆ ಮೊಬಿಲೈಸ್ ಮಾಡಬಹುದು. ಪಬ್ಲಿಕ್ ಪ್ಲೇಸಮೆಂಟನ್ನು 22ನೆಯ ತಾರೀಖಿನಿಂದ ನಾವು ಬಿಡುಗಡೆ ಮಾಡುತ್ತಿದ್ದೇವೆ. ಈಗ ಈ ವರ್ಷ ಸುಮಾರು 500ಕೋಟಿ ರೂಪಾಯಿವರೆಗೆ ನಾವು 31ನೆಯ ಮಾರ್ಚ ಒಳಗೆ ಯುಕೆಪಿ ಒಂದರಲ್ಲಿ ಖರ್ಚು ಮಾಡತಕ್ಕದ್ದಿಕ್ಕೆ ವ್ಯವಸ್ಥೆ ಮಾಡಿದ್ದೇವೆ. ಉಳಿದ ಹಣ ಇದು ಏಪ್ರಿಲ್ ಮೇ ಜೂನ್, ಜುಲೈ ಒಳಗೆ ನಾನೇನು ಈ ಸದನದಲ್ಲಿ ಹೇಳಿದ್ದೆ ಸ್ವಲ್ಪ ಹೆಚ್ಚು ಕಡಿಮೆ 50 ಕೋಟಿ ಕಡಿಮ ಆಗಬಹುದು ಅಥವಾ ಹೆಚ್ಚು ಆಗಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಲೋಕಸಭಾ ಚುನಾವಣೆ ಉದ್ಘಾಟನಾ ಭಾಷಣ ಇದ್ದ ಹಾಗೆ ಇದೆ.

ಅಧ್ಯಕ್ಷರು : ಅವರು ಉದ್ಘಾಟನೆ ಮಾಡುತ್ತಾರೆ ನೀವು ಸಮಾರೋಪ ಮಾಡಿ.

ಶ್ರೀ ಹೆಚ್. ಡಿ. ದೇವೇಗೌಡ : ಅವರು ಹೇಳಿದುದ್ದು ತಪ್ಪೇನೂ ಇಲ್ಲ. ಅದನ್ನು ಹಾಗೆ ಒಪ್ಪಿಕೊಳ್ಳೋಣ, ಸಂತೋಷ ನೀವು ಹೇಳಿದಿರಿ. I have no objection for that. ಅವರೇ ಹೇಳಿದರು ಪೂರ್ ಫರಫಾರ್ಮೆನ್ಸ್ ಎಂದು. ಅದಕ್ಕೆ ಏನು ಮಾಡಿದ್ದೇವೆ ಎಂದು ನಿಮಗೆ ವರದಿ ಕೊಡಬೇಕು. I am bound to reply. ಏಕೆಂದರೆ ಅಪ್ಪೋಜಿಷನ್ ಲೀಡರ್ ಹೇಳಿದಾಗ, ಗೌರವ ಕೊಡದೇ ಹೋದರೆ ಉದ್ಧಟತನ ಎಂದು ಮತ್ತೆ ನೀವು ರೇಗಿಕೊಳ್ಳುತ್ತೀರಿ. ಅದಕ್ಕೆ ಅವಕಾಶ ನಾನು ಕೊಟ್ಟಿಲ್ಲ. ಅದಕ್ಕೆ ನಾನು ಉತ್ತರ ಕೊಡುತ್ತಿದ್ದೇನೆ. ಮೊದಲನೆಯ ಬಾರಿಗೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ ಅವರಿಗೆ ಸ್ಪೆಷಲ್ ಪವರ್ಸ್‌ಕೊಟ್ಟು, ಗವರ್ನಮೆಂಟಿಗೆ ಇದ್ದಂತೆ ಎಲ್ಲಾ ಪವರ್ಸ್ ಡೆಲಿಗೇಟ್ ಮಾಡಿದ್ದೇವೆ. ಮಜಾನದಾರ ಎಂಬ ಒಬ್ಬ ಅಧಿಕಾರಿ. ಇವತ್ತು ನಿಮಗೆ ಹೇಳುತ್ತೇನೆ. ನವೆಂಬರ್ 1996 ರೊಳಗೆ ಆರ ಅಂಡ್ ಆರ ರೂಫ್ ನಾವೇನು 15 ಮೀಟರ್ ಗೇಟು ಇಡುತ್ತೇವೆಂದು ಹೇಳಿದ್ದೇವೋ, ಆ ಲೆವೆಲವರೆಗೆ ಸಂಪೂರ್ಣವಾಗಿ ಆರ್ ಅಂಡ್ ಆರ್ ವರ್ಕನ್ನು ಕಂಪ್ಲೀಟ್ ಮಾಡುತ್ತೇನೆ, ಅದಕ್ಕೆ ಸುಮಾರು 350-360 ಕೋಟಿ ಹಣ ಬೇಕು ಎಂದು ಹೇಳಿದ್ದಾರೆ. I have made all arrangements to provide those funds. ಆರ್ ಅಂಡ್ ಆರ್ ಒಂದು ಬಾಬಿಗೆ ಒಬ್ಬ ಗವರ್ನಮೆಂಟಿಗೆ ಬಂದು ಇಲ್ಲಿ ಅವಾರ್ಡ ಪಾಸಾಗಿ ಪ್ರತಿ ಒಂದು ಹಂತದಲ್ಲಿ ಏನಾದರೂ ಬೇಕಾಗುತ್ತದೆ. ದಯಮಾಡಿ ತಾವೇ ಆ ಭಾಗದಿಂದ ಬಂದಿರತಕ್ಕ ಗೌರವಾನ್ವಿತ ಸದಸ್ಯರುಗಳಿಗೆ ಈ ವಿಚಾರ ಗೊತ್ತಿದೆ. ಗೊತ್ತಿದ್ದೂ ಮರೆ ಮಾಡಬೇಕಾಗಿಲ್ಲ. I have given full powers. ಅದರಲ್ಲಿ ಯಾವುದೇ ಹಸ್ತಕ್ಷೇಪ ಮಾಡುವುದಕ್ಕೆ ನಾನು ಸಿದ್ಧನಿಲ್ಲ. ಎನ್ನುವ ಮಾತನ್ನು ಹೇಳುತ್ತೇನೆ, ಬರೀ ಕೃಷ್ಣಾ ಮೇಲ್ದಂಡೆ ಯೋಜನೆ ಎನ್ನುವಂತಹ ಪ್ರಶ್ನೆ ಅಲ್ಲ. ಬೇರೆ ಬೇರೆ ಕೆಲಸಗಳಿಗೂ ನಾನು ಬೇರೆ ಬೇರೆ ರೀತಿಯ ಹಣ ಒದಗಿಸಿಕೊಡಬೇಕು ಎಂದು ಯೋಚನೆ ಮಾಡುತ್ತಿದ್ದೇನೆ. ಆದರೆ ನಿಮ್ಮೆಲ್ಲರ ಸಹಕಾರದಿಂದ I will try my best to see that the interest of the Krishna Basin waters of 729 TMC will be protected at all costs. ಅದು ನಿಮ್ಮ ಪ್ರಶ್ನೆ ಅಲ್ಲ, ನಮ್ಮ ಪ್ರಶ್ನೆ ಅಲ್ಲ. ರಾಜ್ಯದ ಜನತೆಯ ಪ್ರಶ್ನೆ ಇದೆ. ರಾಜ್ಯದ ಜನತೆಯ ಭವಿಷ್ಯದ ಪ್ರಶ್ನೆ ಇದೆ. ಅದರಲ್ಲಿ ಯಾವುದೇ ರೀತಿಯಾಗಿ ಸಡಿಲಗೊಳಿಸುವುದಕ್ಕೆ ಸಿದ್ಧ ಇಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಾವೇರಿ ಬಗ್ಗೆ ಸ್ವಲ್ಪಮಟ್ಟಿಗೆ ಅಷ್ಟೇ ಸೂಕ್ಷ್ಮವಾಗಿ ಹೇಳುತ್ತೇನೆ. ಇವತ್ತು ಪೂರ್ಣ ಸಮಾಧಾನ ಇದೆ ಎಂದು ಹೇಳದಿದ್ದರೂ ಸ್ವಲ್ಪಮಟ್ಟಿಗಾದರೂ ನಮ್ಮೆಲ್ಲರ ಸಂಘಟಿತವಾದಂತಹ ಪ್ರಯತ್ನಕ್ಕೆ ನಮಗೆ ಸಮಾದಾನವಾದಂತಹ ಪರಿಹಾರ ಸಿಕ್ಕಿದೆ. ಹಾಗೆ ಪರಿಹಾರ ಸಿಕ್ಕಿದೆ ಎನ್ನುವ ಕಾಲದಲ್ಲಿ ನಮ್ಮ ರಾಜ್ಯದ ರೈತರು ಅನುಭವಿಸುತ್ತಿದ್ದಂತಹ ಬವಣೆ ಏನು ಇದೆ, ಕಷ್ಟ ಏನು ಇದೆ. ಅದನ್ನು ಗಮನದಲ್ಲಿಟ್ಟುಕೊಂಡು ಸುಪ್ರೀಂ ಕೋರ್ಟ್ ಕೊಟ್ಟಂತಹ ಐತಿಹಾಸಿಕ ತೀರ್ಪು ಎಂದು ಕರೆಯುತ್ತೇನೆ. It is a historic decision. ಇದರ ಬಗ್ಗೆ ನನ್ನ ಹತ್ತಿರ ಕಾಗದ ಪತ್ರಗಳು, ಲೇಖನಗಳು ಇದ್ದಾವೆ. ಒಂದು ಟ್ರಿಬ್ಯುನಲ್ ಆರ್ಡರ್ ಬಗ್ಗೆ ಸುಪ್ರೀಂ ಕೋರ್ಟ್ ಮೊದಲನೆಯ ಬಾರಿಗೆ ಎರಡೂ ರಾಜ್ಯದ ಬೆಳೆಯನ್ನು ಉಳಿಸಬೇಕೆಂದು ಹೇಳಿ ಕೊಟ್ಟಂತಹ ಸೂಚನೆಯ ಆಧಾರದ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳು ನಮ್ಮನ್ನೆಲ್ಲಾ ಕರೆದು ಕೇಳಿದಾಗ, ನಾವೆಲ್ಲ ಒಟ್ಟಿಗೆ ಹೋದೆವು.

ಅವಶ್ಯಕವಾದಂತಹ ಎಲ್ಲಾ ಮಾಹಿತಿಗಳನ್ನು ತಮಿಳುನಾಡಿನ ರಾಜ್ಯದ ಪರಿಸ್ಥಿತಿ, ನಮ್ಮ ರಾಜ್ಯದ ಪರಿಸ್ಥಿತಿ, ಪ್ರಧಾನ ಮಂತ್ರಿಗಳಿಗೆ ಮನ ಮುಟ್ಟುವಂತಹ ರೀತಿಯಲ್ಲಿ ನಾವೇನು ವಿಷಯ ಮಂಡನೆ ಮಾಡಿದ್ದೇವೆ, ಅದರ ಆಧಾರದ ಮೇಲೆ ಒಂದು ಎಕ್ಸಪರ್ಟ್ ಟೀಂ ಕಳಿಸಿದರು. ಆ ಎಕ್ಸಪರ್ಟ್ ಕಮಿಟಿ ಕೊಟ್ಟಂತಹ ಸಲಹೆಯ ಮೇರೆಗೆ ಇವತ್ತು 11 ಟಿ.ಎಂ.ಸಿ. ಬದಲಾಗಿ ಆರು ಟಿ.ಎಂ.ಸಿ. ನೀರು ಬಿಟ್ಟು, ಕರ್ನಾಟಕದ ಬೆಳೆಯನ್ನೂ ಉಳಿಸಿಕೊಳ್ಳಬೇಕು, ತಮಿಳುನಾಡಿನ ಬೆಳೆಯನ್ನೂ ಉಳಿಸಿಕೊಳ್ಳಬೇಕು ಎನ್ನುವ ಮಾತನ್ನು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಇದೊಂದು ಹೊಸ ಬೆಳವಣಿಗೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಯಾವುದೇ ಕೋರ್ಟಿನ, ಟ್ರಿಬ್ಯುನಲಿನ ನಾಲ್ಕು ಗೋಡೆಯ ಮಧ್ಯ ಕುಳಿತು ಇಂತಹ ಒಂದು ಸೂಕ್ಷ್ಮವಾದ ವಿಚಾರದ ಬಗ್ಗೆ, ವಸ್ತುಸ್ಥಿತಿ ಏನು ಇದೆ? ಇವತ್ತು ಗ್ರೌಂಡ್ ಲೆವಲನಲ್ಲಿರತಕ್ಕದ್ದನ್ನು ತಿಳಿದುಕೊಳ್ಳದೇ ಬರೀ ಕಾನೂನಿನ ಚೌಕಟ್ಟಿನ ಮೇಲೆ ವಾದ ವಿವಾದವನ್ನು ಕೇಳಿ ತೀರ್ಪು ಕೊಡತಕ್ಕದ್ದರಿಂದ ಆಗತಕ್ಕ ಅನಾಹುತ ಏನು ಎಂದು ಮನಗಂಡು ಸುಪ್ರೀಂ ಕೋರ್ಟಿನವರು ಮಾನ್ಯ ಪ್ರಧಾನಮಂತ್ರಿಗಳಿಗೆ ಜವಾಬ್ದಾರಿ ಕೊಟ್ಟು ಇದನ್ನು ನಿರ್ವಹಣೆ ಮಾಡಬೇಕು ಎಂದು ಅಂತರ್ ರಾಜ್ಯ ನದಿಗಳ ನೀರಿನ ಹಂಚಿಕೆಯ ವಿಷಯದಲ್ಲಿ ಹೇಳಿದ್ದು ಒಂದು ಹೊಸ ಬೆಳವಣಿಗೆ. ಇಡೀ ರಾಷ್ಟ್ರದಲ್ಲಿ ಮೊದಲನೆಯ ಸಾರಿ ಇದು ಒಂದು ಐತಿಹಾಸಿಕ ನಿರ್ಣಯ ಆಗಿದ್ದು ಅದರ ಫಲಶ್ರುತಿ ಕರ್ನಾಟಕ್ಕೆ ಅತೀ ಹೆಚ್ಚಿನ ಅನಾಹುತ ಆಗತಕ್ಕದ್ದು ಸ್ವಲ್ಪ ತಪ್ಪಿಸುವುದಕ್ಕೆ ಸಾಧ್ಯ ಆಗಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮುಂದೂ ಕೂಡ ಆ ವಿಷಯದಲ್ಲಿ ನಾವೆಲ್ಲ ಒಟ್ಟುಗೂಡಿ ಹೇಗೆ ಈ ರಾಜ್ಯದ ನದಿಯ ನೀರಿನ ಬಳಕೆ ಬಗ್ಗೆ ಆಗತಕ್ಕ ಅನಾಹುತವನ್ನು ತಪ್ಪಿಸತಕ್ಕದ್ದರಲ್ಲಿ ಪಕ್ಷ ರಾಜಕಾರಣವನ್ನು ಮರೆತು ನಾವೆಲ್ಲ ಒಟ್ಟುಗೂಡಿ ಕೆಲಸ ಮಾಡೋಣ ಎಂದು ಹೇಳುತ್ತೇನೆ. ಕೊನೆಯದಾಗಿ, ನಾನು ಮತ್ತೊಮ್ಮೆ ಈ ಮಾತನ್ನು ಹೇಳುತ್ತೇನೆ. ನಾವು ಖಾಸಗೀ ಬಂಡವಾಳಕ್ಕೆ ಹೆಚ್ಚು ಎಡೆ ಮಾಡಿಕೊಟ್ಟಿದ್ದೇವೆಂಬ ಒಂದೇ ಒಂದು ಕಾರಣದಿಂದ ಇವೊತ್ತು ಈ ಸರ್ಕಾರಕ್ಕೆ ಶ್ರೀಮಂತರ ಪರವಾಗಿದೆಯೆನ್ನುವ ಮಾತನ್ನಾಡಿದರೆ ಅದಕ್ಕೆ ಹುರುಳಿಲ್ಲವೆಂದು ಹೇಳುತ್ತೇನೆ. There is no basis for that. The very object of this Government is to take advantage of the liberalisation and see that sufficient capital is invested in certain sectors. ಟೂರಿಸಂ ಇರಬಹುದು, ಹೈ-ಟೆಕ್ ಇಂಡಸ್ಟ್ರೀಸ್ ಇರಬಹುದು, ಪವರ್ ಸೆಕ್ಟಾರ್ ಇರಬಹುದು, ಹೌಸ್ ಬಿಲ್ಡಿಂಗ್ ಆಕ್ಟಿವಿಟೀಸ್ ಇರಬಹುದು. ಯಾರು ಏನೇ ಹೇಳಿದರೂ ಈ ರಾಜ್ಯದ ಬಗ್ಗೆ ನನ್ನ ಆಸೆಯೇನಿದೆಯೋ ಅದನ್ನು ಈಡೇರಿಸಬೇಕೆನ್ನುವ ಪ್ರಾಮಾಣಿಕ ಪ್ರಯತ್ನ ಮಾಡುವುದಕ್ಕೆ ಸಿದ್ಧನಿದ್ದೇನೆ. ನಾನು ದಿನಕ್ಕೆ 18-19 ಗಂಟೆಗಳ ಕಾಲ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ. ಕರ್ನಾಟಕ ರಾಜ್ಯ ಇಡೀ ಹಿಂದೂಸ್ತಾನದ ಎಲ್ಲಾ ರಾಜ್ಯಗಳಿಗಿಂತ ಮೊದಲ ಸ್ಥಾನಕ್ಕೆ ಬರಬೇಕೆಂಬುದೇ ನನ್ನ ಪ್ರಾಮಾಣಿಕ ಆಸೆ.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳ ಮೇಜು ತಟ್ಟುತ್ತಾ ತಮ್ಮ ಸಂತಸವನ್ನು ವ್ಯಕ್ತಪಡಿಸಿದರು)

ನಾನು ದೈವಸಾಕ್ಷಿಯಾಗಿ ಹಾಗೂ ವಿನಮ್ರತೆಯಿಂದ ಹೇಳುತ್ತೇನೆ: I want to take

advantage of this liberalised economy and see that the State industrial growth is there and the problem of the power sector should be solved. This is number one. ಇವೊತ್ತು ನಿಮ್ಮೆಲ್ಲರನ್ನೂ ಕೈಮುಗಿದು ಪ್ರಾರ್ಥಿಸಿಕೊಳ್ಳುತ್ತೇನೆ. ಹೆಲ್ತ್ ಸೆಕ್ಟಾರ್, ಎಜುಕೇಶನ್, ರೂರಲ್ ಡೆವಲಪಮೆಂಟ್ Let us honestly debate. ಇದರಲ್ಲಿ ಯಾವುದೇ ರೀತಿ ನಮ್ಮ ಮನಸ್ಸಿಗೆ ವಂಚಿಸಿ ಕೊಳ್ಳುವುದೇ ಬೇಡ. ಬಡವರಿಗೆ ಕಡಿಮೆ ದರದಲ್ಲಿ ಅಕ್ಕಿ ವಿತರಿಸುವ ಬಗ್ಗೆ ಹೇಳುವುದಾದರೆ, ನಗರ ಪ್ರದೇಶಗಳಲ್ಲಿ ಬಡವರಿಗೆ ಅಕ್ಕಿ ಕೊಡುವುದು, ಗ್ರಾಮಾಂತರ ಪ್ರದೇಶಗಳಲ್ಲಿರುವ ವ್ಯವಸಾಯಗಾರರಿಗೆ ಶಕ್ತಿ ತುಂಬಲು ನಾವು ರೂಪಿಸಿರತಕ್ಕ ಕಾರ್ಯಕ್ರಮ, ಖಾದಿ ಗ್ರಾಮೋದ್ಯೋಗಕ್ಕೆ ಸುಮಾರು 78 ಕೋಟಿ ರೂಪಾಯಿಗಳನ್ನು ಒದಗಿಸಿ, ಗ್ರಾಮೀಣ ಗುಡಿ ಕೈಗಾರಿಕೆಗಳಲ್ಲಿ ಹಲವಾರು ಜನರು ತೊಡಗಲು ವ್ಯವಸ್ಥೆ ಮಾಡುತ್ತಿದ್ದೇವೆ. ಮಾನ್ಯ ಮೊಯಿಲಿಯವರೂ ವಾರ್ಷಿಕ ಯೋಜನೆ ಮಾಡಿದ್ದಾರೆ, ಬಂಗಾರಪ್ಪನವರೂ ವಾರ್ಷಿಕ ಯೋಜನೆ ಮಾಡಿದ್ದಾರೆ, ಹಿಂದೆ ಇದ್ದಂಥ ಎಲ್ಲಾ ಮುಖ್ಯಮಂತ್ರಿಗಳೂ ಸಹ ವಾರ್ಷಿಕ ಯೋಜನೆಗಳನ್ನು ಮಾಡಿ, ಗುರಿ ತಲುಪುವುದರ ಬಗ್ಗೆ ಏನೇನಾಗಿದೆ ಎಂಬುದನ್ನು ಅದರ ಅವಶ್ಯಕತೆಯಿದ್ದಾಗ ಚರ್ಚಿಸೋಣ. ಅದರ ಗುರಿ ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಇವೊತ್ತಿನವರೆವಿಗೂ ನಾವು ತಗೆದುಕೊಂಡಿರುವ ನಿರ್ಣಯಗಳೇನಿವೆ ಅವೆಲ್ಲವೂ ಸಮಾಜಕ್ಕೆ ಹಿತವಾಗಿಯೇ ಹೆಚ್ಚು ಹಣ ಕೊಡಲಾಗುವುದೆಂದು ಈಗಾಗಲೇ ಹೇಳಿದ್ದೇನೆ. ಅಲ್ಲದೆ, ನಾವು ಎಷ್ಟೆಷ್ಟು ಮಾಡಿದ್ದೇವೆಂಬುದನ್ನು ಹೇಳಿದ್ದೇನೆ. ಇದು ಉತ್ಪ್ರೇಕ್ಷೆಯ ಮಾತಲ್ಲ. ಶಿಕ್ಷಣ, ಸಮಾಜ ಕಲ್ಯಾಣ, ಆರೋಗ್ಯ ಗ್ರಾಮೀಣಾಭಿವೃದ್ಧಿ ಈ ಕ್ಷೇತ್ರಗಳಲ್ಲಿ ಏನೇನು ಮಾಡಿದ್ದೇವೆಂದು ಹೇಳಿದ್ದೇವೆ. ಇವೊತ್ತು ರಾಜ್ಯದಲ್ಲಿರುವ 27 ಸಾವಿರ ಹಳ್ಳಿಗಳಿಗೆ ಮುಂಬರುವ ನಾಲ್ಕು ವರ್ಷಗಳಲ್ಲಿ 'ಸರ್ವ ಋತು ರಸ್ತೆ' ಗಳನ್ನು ಮಾಡಿಸಬೇಕೆಂಬುದು ನನ್ನ ಮನಸ್ಸಿನಲ್ಲಿದ್ದರೆ it does not mean that it is only election speech. ಚುನಾವಣಾ ಭಾಷಣವಲ್ಲ. ನಾನು ಹಳ್ಳಿಯ ಹೆದ್ದಾರಿಗೆ ಸಂಬಂಧಿಸಿದಂತೆ ಒಂದು ಕಾರ್ಯಕ್ರಮವನ್ನು ಘೋಷಿಸಿದ್ದೇನೆ. ಹಿಂದೆ ನಾನು ಲೋಕೋಪಯೋಗಿ ಸಚಿವನಾಗಿದ್ದಾಗ 'ಸೇತು ಬಂಧನ' ವೆಂಬ ಒಂದು ಕಾರ್ಯಕ್ರಮ ಘೋಷಿಸಿದ್ದೆ. ಹಾಗೆಯೇ ಪರಿಶಿಷ್ಟ ಜಾತಿ:ವರ್ಗದವರ ಏಳಿಗೆಗಾಗಿ 'ಗಂಗಕಲ್ಯಾಣ' ಕಾರ್ಯಕ್ರಮ ಘೋಷಿಸಿದೆ. ಅದೇನೇ ಆಗಲಿ, ಮಧ್ಯೆ ಕೆಲವು ರಾಜಕೀಯ ಬಿಕ್ಕಟ್ಟುಗಳು ಎಲ್ಲಾ ಪಕ್ಷಗಳಲ್ಲೂ ಬರುತ್ತದೆ. ಬಿಕ್ಕಟ್ಟು ನಮ್ಮಲ್ಲೂ ಬಂತು, ನಿಮ್ಮಲ್ಲೂ ಇದೆ. ಬಿಕ್ಕಟ್ಟು ಯಾರಲ್ಲಿ ಇಲ್ಲ? ಇವೊತ್ತು ರಾಜ್ಯದ ಜನತೆ ಪುನಃ ನಮ್ಮ ಕೈಗೆ ಅಧಿಕಾರ ಕೊಟ್ಟಂಥ ಕಾಲದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಈ ರಾಜ್ಯದಲ್ಲಿ ಅದರಲ್ಲೂ ಗ್ರಾಮೀಣ ಜನರಿಗೆ ಕುಡಿಯುವ ನೀರಿನ ಸೌಕರ್ಯವಿರಬಹುದು, ರಸ್ತೆ ಸಂಪರ್ಕವಿರಬಹುದು ಹಾಗೂ ರೈತ ಬೆಳೆದಂಥ ಬೆಳೆಗೆ ಹೆಚ್ಚು ಬೆಲೆ ಸಿಗಬೇಕೆನ್ನುವುದರ ಬಗ್ಗೆ ಇರಬಹುದು ಇವೊತ್ತು ಹೊಸ-ಆರ್ಥಿಕ ನೀತಿಯೇನಿದೆ, ಈ ವ್ಯಾಪ್ತಿಯೊಳಗೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ನೀವು ಗುಲಾಂ ನಬಿ ಆಜಾದರವರನ್ನು ಏರಪೋರ್ಟ್‌ಗೆ ಕರೆದುಕೊಂಡು ಬಂದು ಗುದ್ದಲಿ ಪೂಜೆಮಾಡಿಸಿದಿರಿ, ಸುಮಾರು ಒಂದು ಕೋಟಿ ರೂಪಾಯಿಯಷ್ಟು ಹಣ ಕೊಟ್ಟರೆಂದು ಕಾಣುತ್ತದೆ. ನನ್ನ ಹತ್ತಿರ ದುಡ್ಡಿಲ್ಲ, ನನಗೆ ಗೊತ್ತಿದೆ I know my limitations and I know my finance Minister's struggle.

ಪ್ರತಿ ದಿನ ರಾಜ್ಯ ಸರ್ಕಾರದಿಂದ ಹನ್ನೆರಡು ಕೋಟಿ ರೂಪಾಯಿಗಳಷ್ಟು ಮೌಲ್ಯದ ಸರಕನ್ನು ತುಂಬಿಕೊಂಡು ಒಂದು ಕಾರ್ಗೋ ಹೋಗಬಹುದು. ನನ್ನ ರೈತನಿಗೋಸ್ಕರ ಇವೊತ್ತು ಈ ರಾಜ್ಯದಲ್ಲಿ ಮೊದಲ ಬಾರಿಗೆ ಒಂದು ಫ್ಲವರ್ ಆಕ್ಷನ್ ಯಾರ್ಡ್ ಮಾಡಿದ್ದೇನೆ. ಹಿಂದೂಸ್ತಾನದ ಯಾವುದೇ ರಾಜ್ಯ ಇದುವರೆಗೂ ಮಾಡಿಲ್ಲದಿರುವುದನ್ನು ಈ ರಾಜ್ಯದಲ್ಲಿ ಮಾಡಿದ್ದೇವೆ. ರಾಜ್ಯದ ಕೋಲಾರ, ಬೆಂಗಳೂರು ಮುಂತಾದ ಭಾಗಗಳಿಂದ ರೈತರು ಬೆಳೆದಂಥ ಹೂವು, ಹಣ್ಣು-ತರಕಾರಿಗಳನ್ನು ತೆಗೆದುಕೊಂಡು ಬಂದು ಹರಾಜು ಹಾಕುತ್ತಾರೆ. ಇವೊತ್ತು ಪ್ರತಿದಿನ ಒಂದು ಲೋಡ್ ಏರಕ್ರಾಫ್ಟನಲ್ಲಿ ಇಲ್ಲಿನ ರೈತರು ಬೆಳೆದಂಥ ಉತ್ಪನ್ನಗಳು ಬೇರೆ ರಾಷ್ಟ್ರಗಳ ಮಾರುಕಟ್ಟೆಗಳಿಗೆ ಹೋಗುತ್ತವೆ. ಇದರಿಂದ ರೈತರ ಆರ್ಥಿಕ ಶಕ್ತಿ ಹೆಚ್ಚಾಗುತ್ತದೆ ಎನ್ನುವ ಪ್ರಾಮಾಣಿಕ ಉದ್ದೇಶವನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ ಮತ್ತು ಆ ದಿಕ್ಕಿನಲ್ಲಿ ನಾನು ಕಾರ್ಯಕ್ರಮಗಳನ್ನು ರೂಪಿಸಿ ಕೆಲಸ ಮಾಡುತ್ತಿದ್ದೇನೆ. ಇನ್ನು ರಾಷ್ಟ್ರೀಯ ಕ್ರೀಡೆಗಳ ಕುರಿತು ಹೇಳುವುದಾದರೆ, ಇವೊತ್ತು ಕೇಂದ್ರ ಸರ್ಕಾರದಿಂದ ಒಂದು ರೂಪಾಯಿಯಷ್ಟು ಸಹಾಯ ಬಂದಿಲ್ಲ. Not even a rupee. ರಾಜ್ಯದ ಮರ್ಯಾದೆ ಹೋಗುತ್ತದೆ. ನಾವೇನು ಮಾಡಬೇಕು ? ಈ ಬಗ್ಗೆ ನಾನು ಒಂದು ಮಾತನ್ನು ಕೇಳುತ್ತೇನೆ. ಹೌದು, ಕೆಲವು ಕಡೆ 28 ಕೋಟಿ ರೂಪಾಯಿಗಳಷ್ಟು ಹಣ, ಸದನದಲ್ಲಿ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರಾದ ಅಜಯಕುಮಾರು ಸರನಾಯಕ್ ರವರು ಇರಬಹುದೆಂದು ಕಾಣುತ್ತದೆ. ಅದಕ್ಕೆ ಸುಮಾರು 80 ಕೋಟಿ ರೂಪಾಯಿಗಳು ಬೇಕಾಗುತ್ತದೆ. I don't know how I could mobilise that fund. Rs. 29 crore up till now we have spent. Government of India has not given any money. Sir, these are all the problems we have. ಮುನಿಸಿಪಾಲಿಟಿಗಳಿಗೆ, ಕಾರ್ಪೋರೇಷನಗಳಿಗೆ 28 ಕೋಟಿ ರೂಪಾಯಿಗಳನ್ನು we have given as discretionary grants. 2 ಕೋಟಿ, 3 ಕೋಟಿ ರೂಪಾಯಿಗಳಿಗಿಂತ ಮೇಲ್ಪಟ್ಟು ಯಾವುದೇ ವರ್ಷ ಕೊಟ್ಟಿಲ್ಲ. 1 ಲಕ್ಷ, 2 ಲಕ್ಷ ರೂಪಾಯಿಗಳೇ ಗುದ್ದಾಡುತ್ತೇವೆ. ಈ ಸಲ ಎಲ್ಲಾ ತರಹದ ಆಪಾದನೆಗಳು, ಏನೆಂದರೆ, ದೇವೇಗೌಡರು ಬಂದು ನಂತರ ರಸ್ತೆಗಳೆಲ್ಲಾ ಗುಂಡಿಗಳಾಗಿವೆಯೆಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುನಿಸಿಪಾಲಿಟಿ ಚುನಾವಣೆ ಇತ್ತಲ್ಲ.

ಶ್ರೀ ಹೆಚ್. ಡಿ. ದೇವೇಗೌಡ : ನೀವು ಚುನಾವಣೆ ಇದ್ದಾಗ ಕೊಟ್ಟಿದ್ದೀರಾ? ಚುನಾವಣೆ ಇದ್ದಾಗ ಕೊಟ್ಟಿದ್ದರೆ ಸಂತೋಷ.

ಶ್ರೀ ಹೆಚ್. ಶಿವಪ್ಪ : ಹಣವನ್ನು ಅಭಿವೃದ್ಧಿ ದೃಷ್ಟಿಯಿಂದ ಕೊಟ್ಟಿರುವುದೇ ವಿನಹ ಚುನಾವಣಾ ದೃಷ್ಟಿಯಿಂದಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ನಾವೆಲ್ಲರೂ ಚುನಾವಣೆಯಲ್ಲಿ ಗೆಲ್ಲಬೇಕೆಂದೇ ಮಾಡುವುದು. ನಾವು ಯಾರಾದರೂ ಸೋಲಬೇಕೆಂದು ಯೋಚಿಸುತ್ತೇವೆಯೇ? ನೀವು ಸೋಲಬೇಕೆಂದು ಯೋಚಿಸುತ್ತೀರೋ? ಯಡಿಯೂರಪ್ಪನವರು ಸೋಲಬೇಕೆಂದು ಯೋಚಿಸುತ್ತಾರೆಯೇ? ಎಲ್ಲರೂ ಗೆಲ್ಲಬೇಕೆಂದೇ ಹೋರಾಟ ಮಾಡುವುದು. ಆದರೆ, ಅಂತಿಮ ತೀರ್ಪು ಕೊಡತಕ್ಕಂಥ ಮಹಾನುಭಾವರು ಹೊರಗಡೆಯಿದ್ದಾರೆ. ಅಲ್ಲಿ ಪುಟ್ಟಣ್ಣಯ್ಯನವರು ಮಾಡುವುದೂ ಅದೇ ಕೆಲಸವೇ. ರಸ್ತೆ ತಡೆ ಹಿಡಿದರ

ಸಂಚಾರ ಸ್ಥಗಿತಗೊಳ್ಳಬಹುದೆಂದು ಅವರು ಲೆಕ್ಕ ಹಾಕುತ್ತಾರೆ, ಆದರೆ, ಅದು ಆಗುವುದಿಲ್ಲ. ಆದುದರಿಂದ, ತೀರ್ಮಾನ ಮಾಡುವ ಜನರು ಹೊರಗಡೆಯಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಪದೇ ಪದೇ 'ರಸ್ತೆ ತಡೆ' ಎಂದು ಹೇಳುತ್ತಾರೆ. ಅದೇನೆಂದು ನನಗೆ ಗೊತ್ತಾಗುವುದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಎಲ್ಲರೂ ಮಾಡುವುದೂ ಚುನಾವಣೆಯಲ್ಲಿ ಗೆಲ್ಲುವುದಕ್ಕೆಂದೇ. ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂದ ನಂತರ ನಾವು ಆ ಋಣ ತೀರಿಸಬೇಕಲ್ಲ! ಋಣ ತೀರಿಸಬೇಕಾಗುತ್ತದೆ. ಈ ಜಾಗದಲ್ಲಿ ಕುಳಿತುಕೊಂಡು ನಾನು ನನ್ನ ಕೆಲಸ ಮಾಡುತ್ತೇನೆ, ನೀವೂ ಈ ಜಾಗದಲ್ಲಿದ್ದಾಗ ನಿಮ್ಮ ಕೆಲಸ ಮಾಡಿದ್ದೀರಿ. ಎರಡನ್ನೂ ಹೋಲಿಕೆ ಮಾಡಿಕೊಳ್ಳುವಷ್ಟು ರಾಜಕೀಯ ಪ್ರಭುದ್ಧತೆ, ರಾಜಕೀಯ ಜಾಗ್ರತೆ ಈ ನಾಡಿನ ಮಹಾ ಜನತೆಯಲ್ಲಿ ಬೆಳೆದಿಯೆಂಬುದಕ್ಕೆ, ಇತ್ತೀಚೆಗೆ ನಡೆದಂಥ ಮೂರು ಚುನಾವಣೆಗಳೇ ಸಾಕ್ಷಿ. ಅವು ಜಿಲ್ಲಾ ಪಂಚಾಯತ್ ಚುನಾವಣೆಯಾಗಿರಬಹುದು. ನೀವು ನಮ್ಮ ಸರ್ಕಾರವನ್ನು non-performance Government ಎಂದು ಹೇಳಿದ್ದಕ್ಕೆ ಇಷ್ಟೆಲ್ಲಾ ವಿವರಣೆ ಕೊಟ್ಟಿದ್ದೇನೆಯೇ ವಿನಹ ಮತ್ತೇನೂ ಇಲ್ಲ. ಇನ್ನು ಏನನ್ನೂ ಹೇಳಲು ಹೋಗುವುದಿಲ್ಲ. ಇಷ್ಟು ಹೊತ್ತು ನನ್ನ ಮಾತುಗಳನ್ನು ಸಾವಧಾನದಿಂದ ಆಲಿಸಿದ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ಹಾಗೂ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಕೆಲವು ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳಿಂದ ಸ್ಪಷ್ಟೀಕರಣ ಪಡೆಯ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಭಾಷಣದ ಸಂದರ್ಭದಲ್ಲಿ ಕೊಟ್ಟಿರತಕ್ಕ ಅಂಕಿ-ಅಂಶಗಳನ್ನು ನೋಡಿದರೆ ಬಹುಶಃ ಲಕ್ಷ, ಕೋಟಿ ರೂಪಾಯಿಗಳಿಗೂ ಮೀರಿದ ಕಾರ್ಯಕ್ರಮಗಳನ್ನು ತಾವು ಘೋಷಿಸಿದ್ದೀರಿ. ನಿಮ್ಮ ಭಾಷಣದ ವರದಿಯನ್ನು ನಾಳೆ ರಾಜ್ಯದ ಜನರು ಓದಿದರೆ ಕರ್ನಾಟಕ ರಾಜ್ಯ ನಂದನವನ ಆಗಿಬಿಡುತ್ತದೆಂಬ ಒಂದು ಭ್ರಮೆಯಲ್ಲಿರುವ ಪರಿಸ್ಥಿತಿ ಖಂಡಿತವಾಗಿಯೂ ಕಾಣುತ್ತಿದೆ. ಯಾವಾಗ ನಿಮ್ಮ ಮಾತಿಗೆ ಬೆಲೆ ಬರುತ್ತದೆಂದರೆ, ಕಳೆದ 14-15 ತಿಂಗಳುಗಳಲ್ಲಿ ರಾಜ್ಯದ ಜನತೆಗೆ ತಾವು ಏನು ಹೇಳಿದ್ದೀರಿ - ಅದು ಆಗಿದ್ದರೆ, ಈಗ ನೀವು ಏನು ಹೇಳಿದ್ದೀರಿ, ಅದೆಲ್ಲವನ್ನೂ ನಾನು ಖಂಡಿತ ನಂಬುತ್ತಿದ್ದೆ.

2.10 ಪಿ.ಎಂ.

ಗುಲ್ಬರ್ಗಾದಲ್ಲಿ ಪತ್ರಿಕೋದ್ಯಮಿಗಳನ್ನು ಉದ್ದೇಶಿಸಿ ಮಾತನಾಡುತ್ತ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೃಷ್ಣ ಜಲಾನಯನ ಯೋಜನೆಗೆ ಖರ್ಚು ಮಾಡಿಯೇ ತೀರುತ್ತವೆ, ಕದ್ದಾದರೂ ಹಣವನ್ನು ತರುತ್ತೇವೆ, ಎಷ್ಟೇ ಕಷ್ಟ ಬಂದರು ಅಷ್ಟು ಹಣವನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ, ಒಂದು ಬಾರಿ ಮುಖ್ಯಮಂತ್ರಿಗಳು ಆ ರೀತಿ ಮಾತನ್ನು ಹೇಳಿದಾಗ, ಅದನ್ನು ಮಾಡಿಯೇ ಮಾಡುತ್ತಾರೆಂದು ಜನರು ನಂಬಿದಾಗ, ತಾವು ಈವತ್ತು ಆ ಕೆಲಸವನ್ನು ಮಾಡಲಿಲ್ಲ. ಆರುನೂರು

ಮೆಗಾವ್ಯಾಟ್ ವಿದ್ಯುತ್ ಆರು ತಿಂಗಳುಗಳಲ್ಲಿ ಉತ್ಪಾದನೆ ಮಾಡುತ್ತೇವೆಂದು ತಾವು ಹೇಳಿದ್ದೀರಿ, ಒಂದು ವೇಳೆ ಆ ರೀತಿ ಆಗದಿದ್ದರೆ ಸಂಬಂಧಪಟ್ಟ ಉತ್ಪಾದಕರಿಗೆ ಪ್ರತಿನಿತ್ಯ ದಂಡವನ್ನಾಕುವ ಕಾರ್ಯಕ್ರಮವನ್ನು ಮಾಡಿದ್ದೇವೆಂದು ಹೇಳಿದ್ದೀರಿ. ರಾಷ್ಟ್ರೀಯ ಕ್ರೀಡೆಗಳೇನು ಜನವರಿಯಲ್ಲಿ ಬೆಂಗಳೂರಿನಲ್ಲಿ ನಡೆಯಬೇಕಾಗಿತ್ತೋ ಅದು ಯಾವುದೋ ಕಾರಣಕ್ಕಾಗಿ ಮುಂದಕ್ಕೆ ಹೋಯಿತು. ತರಾತುರಿಯಲ್ಲಿ ಸರ್ಚ್ ಲೈಟಗಳನ್ನು ಹಾಕಿಕೊಂಡು ಕೆಲಸ ಮಾಡಿಸಿ ಕ್ರೀಡೆ ನಡೆಯಲೇ ಬೇಕೆಂದು ಸುಮಾರು ನಲವತ್ತೈದು ಪರಸೆಂಟ ಹಣವನ್ನು ಎಸ್ಟಿಮೇಟಗಿಂತ ಜಾಸ್ತಿ ಕೊಟ್ಟಿರಿ. ಈ ಸದನದಲ್ಲಿ ನನಗೆ ಉತ್ತರವನ್ನು ಕೊಡುತ್ತ ಇದನ್ನು ಒಂದು ವರ್ಷದಲ್ಲಿ ಮುಗಿಸಬೇಕೆಂದು ಹೇಳಿದ್ದಿರಿ. ಇಲ್ಲಿನ ಕೆಲಸವನ್ನು ಮಾಡಲು ಗುತ್ತಿಗೆ ಕೊಟ್ಟಿರುವವರಿಗೆ ತಾವು ಜನವರಿಯೊಳಗೆ ಈ ಕಟ್ಟಡವನ್ನು ಕಟ್ಟಿ ಪೂರ್ಣಮಾಡಿಕೊಡದಿದ್ದರೆ ಪ್ರತಿನಿತ್ಯ ಐವತ್ತು ಸಾವಿರ ರೂಪಾಯಿಗಳ ದಂಡವನ್ನು ಹಾಕುತ್ತೇವೆಂದು ಹೇಳಿದ್ದೀರಿ. ಹಾಗಾದರೆ ತಾವು ಇದುವರೆಗೆ ಎಷ್ಟು ರೂಪಾಯಿಗಳನ್ನು ಅವರ ಮೇಲೆ ದಂಡವನ್ನಾಕಿದ್ದೀರಿ? ರಾಷ್ಟ್ರೀಯ ಕ್ರೀಡೆಗಳ ಮುಂದೂಡಲ್ಪಟ್ಟಿರುವ ಈ ಸಮಯದಲ್ಲಿ ಆ ಕಟ್ಟಡಗಳ ಕೆಲಸವನ್ನು ಹಾಗೆಯೇ ಮುಂದುವರೆಸಲ್ಪಡುತ್ತೀರೋ? ಇಲ್ಲದಿದ್ದರೆ ಅದಕ್ಕೆ ಮುಕ್ತಿಯನ್ನೇನಾದರೂ ಮಾಡುತ್ತೀರೋ? ಇದರ ಬಗ್ಗೆ ಅನೇಕಬಾರಿ ಇಲ್ಲಿ ಚರ್ಚೆಯಾಗಿವುದರಿಂದ ಮುಖ್ಯಮಂತ್ರಿಯವರು ಉತ್ತರವನ್ನು ಕೊಡಬೇಕಾಗುತ್ತದೆ. ಅದರ ಬಗ್ಗೆ ಈಗಲಾದರೂ ನೇರವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಯವರಿಂದ ನಿರೀಕ್ಷೆ ಮಾಡುತ್ತೇನೆ.

ತಾವು ವಾಹನಗಳ ಮೇಲೆ ಜೀವಂತ ತೆರಿಗೆಯನ್ನಾಗಿ ಸುಮಾರು 90 ಕೋಟಿ ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದೀರಿ. ಆ ಹಣದ ಜೊತೆಗೆ ಮಾಸ್ಟರ ಪ್ಲಾನನನ್ನು ಮಾಡಿ ಇನ್ನೂ ಸ್ವಲ್ಪ ಹಣವನ್ನು ಸೇರಿಸಿದ್ದರೆ, ಕನಿಷ್ಠ ಐದುನೂರು ಕಿಲೋ ವಾಹನಗಳ ಮೇಲೆ ಜೀವಂತ ಅಭಿವೃದ್ಧಿ ಪಡಿಸಬಹುದಾಗಿತ್ತು. ಯಾವ ಉದ್ದೇಶದಿಂದ ವಾಹನಗಳ ಮೇಲೆ ಜೀವಂತ ತೆರಿಗೆಯನ್ನು ಹಾಕಿ ಹಣವನ್ನು ವಸೂಲಿ ಮಾಡಿದ್ದೀರೋ ಅದನ್ನು ರಸ್ತೆಗಳ ಅಭಿವೃದ್ಧಿಗಾಗಿ ಉಪಯೋಗ ಮಾಡಲಿಲ್ಲ. ಅದರ ಬಗ್ಗೆ ಗಮನ ಕೊಡಲಿಲ್ಲ. ಎ.ಪಿ.ಎಂ.ಸಿ. ಹಣದ ಮೂಲಕ ಪ್ರತಿಯೊಂದು ಕ್ಷೇತ್ರದಲ್ಲೂ 35-40 ಕಿ.ಮೀ ರಸ್ತೆಯ ಕೆಲಸವನ್ನು ಈ ವರ್ಷದಲ್ಲಿ ಮುಗಿಸುತ್ತೇವೆಂದು ಹೇಳಿದ್ದೀರಿ. ಅದು ಪತ್ರಿಕೆಗಳ ಮುಖಪುಟದಲ್ಲೂ ಬಂತು. ಮೂವತ್ತು ಲಕ್ಷ ರೂಪಾಯಿಗಳ ಕೆಲಸವನ್ನು ಪ್ರತಿಯೊಂದು ಶಾಸಕರ ಕ್ಷೇತ್ರದಲ್ಲಿ ಮುಗಿಸುತ್ತೇವೆಂದು ಹೇಳಿದ್ದಿರಿ. ನಾನು ಕೇಳುತ್ತೇನೆ ತಾವು ಒಂದು ರೂಪಾಯಿಯನ್ನಾದರೂ ಖರ್ಚು ಮಾಡಿದ್ದೀರೋ? ಒಂದು ತಾಲ್ಲೂಕಿನಲ್ಲಿ ರಸ್ತೆಗಳಾಗಲಿಲ್ಲ, ಪತ್ತು ಬ್ಯಾರಲ್ ಟಾರು ಸಿಗಲಿಲ್ಲ, ಇದರ ಬಗ್ಗೆ ತಾವು ನೇರವಾದಂಥ ಉತ್ತರವನ್ನು ಕೊಡಬೇಕು. ಮತ್ತು, ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೇನು ಎನ್.ಆರ್.ಐ. ನವರನ್ನು ಅಡ್ಮಿಟ್ ಮಾಡಿಕೊಳ್ಳುತ್ತೀರಿ, ಇದರಿಂದ ವ್ಯಾಪಕವಾದ ಭ್ರಷ್ಟಾಚಾರಕ್ಕೆ ಅವಕಾಶವಾಗುತ್ತದೆ. ಕನ್ನಡ ನಾಡಿನ ಮಕ್ಕಳಿಗೆ ಇದರಿಂದ ಅನ್ಯಾಯವಾಗುತ್ತದೆ. ಈ ರೀತಿ ನಿಗದಿಯಾಗಿರುವುದಕ್ಕಿಂತ ಹೆಚ್ಚಿನ ಹಣವನ್ನು ಒಬ್ಬ ವಿದ್ಯಾರ್ಥಿಯಿಂದ ವಸೂಲಿ ಮಾಡಿದ್ದರೆ, ಅದನ್ನು ವಾಪಸ್ ಕೊಡಬೇಕೆಂದು ಈಗಾಗಲೇ ಬಾಂಬೆಯ ಹೈಕೋರ್ಟ ಆದೇಶವನ್ನು ನೀಡಿದೆ. ಆದ್ದರಿಂದ ಇದು ಒಂದು ವ್ಯಾಪಾರಿ ಕೇಂದ್ರದಂತೆ ಆಗಬಾರದು. ಆದ್ದರಿಂದ ತಾವೇನು ಎನ್.ಆರ್.ಐ. ನವರನ್ನು

ವೈದ್ಯಕೀಯ ಕಾಲೇಜುಗಳಿಗೆ ಸೇರಿಸಿಕೊಳ್ಳಬೇಕೆಂದಿದ್ದೀರಿ ಅದನ್ನು ದಯಮಾಡಿ ಮುಂದುವರೆಸಬೇಡಿ, ಅದನ್ನು ಕೈಬಿಡಬೇಕೆಂದು ತಮ್ಮಲ್ಲಿ ಹೇಳಬಯಸುತ್ತೇನೆ.

ಹೌಸಿಂಗ್ ಬಗ್ಗೆ ತಾವು ಬಹಳವಾಗಿ ಮಾತನಾಡಿದ್ದೀರಿ. ಎಲ್ಲಾ ಶಾಸಕರುಗಳು ನಿವೇಶನವಿಲ್ಲದವರಿಗೆ, ಮನೆಗಳಿಲ್ಲದವರಿಗೆ ಅವುಗಳನ್ನು ಒದಗಿಸಿಕೊಡುವ ಸಲುವಾಗಿ ಅರ್ಜಿಯನ್ನು ಕೊಟ್ಟಿರು. ತಾವು ಅಧಿಕಾರಕ್ಕೆ ಬಂದು ಹದಿನೈದು ತಿಂಗಳುಗಳಾಗಿ ಇಂದು ಉತ್ತರವನ್ನು ಕೊಡುತ್ತಿರತಕ್ಕ ಸಮಯದಲ್ಲಿ ಯಡಿಯೂರಪ್ಪನವರೆ ಇಷ್ಟು ಮನೆಗಳನ್ನು, ಇಷ್ಟು ನಿವೇಶನಗಳನ್ನು ಇಂಥ ಕ್ಷೇತ್ರದಲ್ಲಿ ವಿತರಣೆ ಮಾಡಿದ್ದೇವೆ, ಇನ್ನು ಮುಂದೆ ಏನು ಮಾಡಬೇಕು ಎಂಬುದನ್ನು ಅನಂತರ ನೋಡೋಣವೆಂದೇನಾದರೂ ಹೇಳಿದ್ದೀರ, ಯಾವುದೂ ಇಲ್ಲ. ಅದರ ಬಗ್ಗೆ ಯಾವುದೇ ರೀತಿಯಾದ ವಾಸ್ತವಿಕವಾದ ಅಂಶವನ್ನು, ಚಿತ್ರಣವನ್ನು ತಮ್ಮ ಉತ್ತರದಲ್ಲಿ ಕೊಡಲು ಇಂದು ಸಾಧ್ಯವಾಗಲಿಲ್ಲ. ದಯಮಾಡಿ ತಾವು ನಾನು ಕೇಳಿರುವ ಮೂರ್ನಾಲ್ಕು ಅಂಶಗಳ ಬಗ್ಗೆ ಉತ್ತರವನ್ನು ಹೇಳಬೇಕು. ಕೃಷ್ಣಾ ಜಲಾನಯನದ ಬಗ್ಗೆ ತಾವೇನೂ ಕೃಷ್ಣಾರ್ಪಣೆ ಮಾಡಬೇಕೆಂದಿದ್ದೀರೋ, ಎರಡು ಸಾವಿರ ಇಸವಿಯೊಳಗೆ ಅದು ಮುಗಿಸಬೇಕೆಂದು ಪ್ರತಿ ವರ್ಷ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಅದು ಸಾಕಾಗುವುದಿಲ್ಲವೆಂದು ಗೊತ್ತಿದ್ದರೂ ಯಾವ ಕಾಲದಲ್ಲಿ ತಾವು ನೀರಾವರಿಗೆ ಹೆಚ್ಚು ಹಣವನ್ನು ಕೊಡಲಿಲ್ಲ ಅಂದು ರಾಜೀನಾಮೆಯನ್ನು ಕೊಟ್ಟು ಹೊರಗೆ ಬಂದಿರೋ, ತಾವು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ನಾವು ಶಹಬಾಸಗಿರಿಯನ್ನು ಹೇಳುತ್ತಿದ್ದೆವು. ಖಂಡಿತವಾಗಿ ತಾವು ಸಾಧನೆ ಮಾಡಿದ್ದೀರೆಂಬುದನ್ನು ನಂಬುತ್ತಿದ್ದೆವು. ಆದರೆ ತಮ್ಮಿಂದ ಆ ಕೆಲಸವಾಗಲಿಲ್ಲ. ನಿಮ್ಮ ಆದ್ಯತೆಯಾವುದು ಎಂಬುದು ಗೊತ್ತಾಗಲಿಲ್ಲ. ಒಂದು ಮೆಗಾವ್ಯಾಟ್ ವಿದ್ಯುತನ್ನು ತಾವು ಹೊಸದಾಗಿ ಉತ್ಪಾದನೆ ಮಾಡಲಿಲ್ಲ. ಆದ್ದರಿಂದ ನಾನು ಹೇಳಿರುವ ಮೂರು ವಿಷಯಗಳಾದ ಕೋರಮಂಗಲದ ಬಗ್ಗೆ, ವೈದ್ಯಕೀಯ ಕಾಲೇಜುಗಳಲ್ಲಿ ಎನ್.ಆರ್.ಐ. ವಿದ್ಯಾರ್ಥಿಗಳನ್ನೇನು ಸೇರಿಸಿಕೊಳ್ಳುತ್ತಿದ್ದೀರಿ ಆ ಪದ್ಧತಿಯನ್ನು ಮುಂದುವರೆಸದಿರುವ ಬಗ್ಗೆ, ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಯಾವ ಒಂದು ಸುಳ್ಳು ಭರವಸೆಯನ್ನು ಕೊಟ್ಟಿರಿ, ಒಬ್ಬರು ಮುಖ್ಯಮಂತ್ರಿಯವರಾಗಿ ಬಜೆಟನಲ್ಲಿ ಹೇಳಿ, ರಾಜ್ಯಪಾಲರ ಭಾಷಣದಲ್ಲಿ ಆ ವಿಷಯದ ಬಗ್ಗೆ ಹೇಳಿ ಅದನ್ನು ಜಾರಿಗೆ ತರಲು ಯಾವಾಗ ಸಾಧ್ಯವಾಗಲಿಲ್ಲವೋ, ಬಹುಶಃ ತಾವು ಇಲ್ಲಿ ನಿಂತು ಜನರ ಕ್ಷಮೆಯನ್ನು ಕೇಳಬೇಕಾಗುತ್ತದೆ. ಹಿಂದಿನ ಸರ್ಕಾರ ಇತ್ತು, ಆ ಸರ್ಕಾರ ಖರ್ಚು ಮಾಡಿರುವುದಕ್ಕಿಂತ ಹೆಚ್ಚು ಇಲ್ಲಿ ಖರ್ಚು ಮಾಡಿದ್ದೇನೆಂದು ತಾವು ಹೇಳಬಹುದು, ಆದರೆ ಇಂಥ ಕತೆಗಳನ್ನು ಜನರು ನಂಬುವುದಿಲ್ಲ. ತಾವೇನು ಭರವಸೆಯನ್ನಿತ್ತು ಹೇಳಿದ್ದೀರಿ ಅದು ಆಗಲಿಲ್ಲ. ತಾವು ಬಡವರ ಬಗ್ಗೆ ಇಷ್ಟೆಲ್ಲಾ ಮಾತನಾಡಿದಿರಿ, ಕಳೆದ ಹತ್ತಾರು ವರ್ಷಗಳಿಂದ ಯಾರ್ಯಾರಿಗೆ ಹಸಿರು ಕಾರ್ಡು ಸಿಕ್ಕಿಲ್ಲ ಅದರ ಪಟ್ಟಿಯನ್ನು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕೊಟ್ಟಿದ್ದಾರೆ. ಹೋದ ವರ್ಷ ಇದೇ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ಮಾಡತಕ್ಕ ಕಾಲದಲ್ಲಿ ಹಸಿರು ಕಾರ್ಡುಗಳು ಪ್ರಿಂಟ್ ಆಗುತ್ತಿದೆ, ಕೊಡುತ್ತೇವೆಂದು ಹೇಳಿದ್ದರು. ಹದಿನೈದು ತಿಂಗಳುಗಳಾಯಿತು ಒಬ್ಬರು ಬಡವರಿಗೂ, ಫಲಾನುಭವಿಗೂ ಕಾರ್ಡುಗಳು ಸಿಗಲಿಲ್ಲ. ಈ ರೀತಿ ತಮ್ಮ ಸರ್ಕಾರದ ಕಾರ್ಯಕ್ರಮಗಳು ನಡೆಯುತ್ತಿವೆ. ಆದ್ದರಿಂದ ತಾವೇನು ಹೇಳಿದ್ದೀರಿ ಅದನ್ನು ಕಾರ್ಯರೂಪಕ್ಕೆ

ತರುವಂಥದನ್ನು ಹೇಳಿ. ಹೀಗಾಗಬೇಕಾಗಿತ್ತು, ಆ ರೀತಿಯಾಗಿದ್ದರ ಆಗುತ್ತಿತ್ತು ಎಂದು ಗಾಳಿಗೋಪುರದ ಮಾತುಗಳನ್ನು ಹೇಳಬೇಡಿ. ಅದು ಯಾವುದೂ ಸಹ ಕಾರ್ಯರೂಪಕ್ಕೆ ಬರುವುದಿಲ್ಲ. ನಾನು ಕೇಳಿದ ಎರಡು ಮೂರು ಪ್ರಶ್ನೆಗಳ ತಮ್ಮಿಂದ ಕ್ಲಾರಿಫಿಕೇಷನ್ ಬಯಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಯವರು) : ನಿಜವಾಗಿ ಮಲಗಿದ್ದವರನ್ನು ಎಬ್ಬಿಸಬಹುದು ಸುಮ್ಮನೆ ಮಲಗಿದಂತೆ ನಟನೆ ಮಾಡುವವರನ್ನು ಎಬ್ಬಿಸಲು ಆಗುವುದಿಲ್ಲ. ನಾವು ಇಷ್ಟೊಂದು ಹೇಳಿದರೂ ನೀವು ಮಾಡಿಲ್ಲವೆಂದರ ಏನು ಮಾಡುವುದಕ್ಕಾಗುತ್ತದೆ. ನಾವು ಮಾಡಿದ್ದೇವೆಂದರೆ ತಾವು ಮಾಡಿಲ್ಲವೆಂದರೆ ಹೀಗೆಯೇ ಅರ್ಥವಾಗುವುದು.

ಡಾ: ಯು. ಚಿತ್ತರಂಜನ್ : ಒಂದು ಯೂನಿಟ್ ವಿದ್ಯುತನ್ನು ಹೆಚ್ಚಾಗಿ ಉತ್ಪಾದನೆ ಮಾಡಲಿಲ್ಲ ಎಂಬುದಕ್ಕೆ ನಾನು ಬೆಂಬಲ ನೀಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಕಪ್ಪದ ಗುಡ್ಡದಲ್ಲಿ ವಿಂಡ್ ಮೂಲಕ ಎರಡು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವ ಕೇಂದ್ರವನ್ನು ನಾಳೆ ಉದ್ಘಾಟನೆ ಮಾಡುತ್ತಿದ್ದೇವೆ. ತಾವೂ ಬನ್ನಿ. ಇದು ನಮ್ಮ ಕಾಲದಲ್ಲೇ ಪ್ರಾರಂಭ ಮಾಡಿ ಮುಗಿಸಿರತಕ್ಕದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಸುಮಾರು ಮೂರೂವರೆ ಗಂಟೆಗಳ ಕಾಲ ಮಾತನಾಡಿ ಬಹಳ ದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇವಲ ಮೂರು ಪ್ರಶ್ನೆಗಳನ್ನು ಅವರಲ್ಲಿ ಕೇಳಬಯಸುವೆ. ಮೊದಲನೆಯದಾಗಿ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಇವತ್ತ ಒಂದು ಹೇಳಿಕೆಯನ್ನು ಕೊಟ್ಟು ಆಲಮಟ್ಟಿ ಜಲಾಶಯದ ಎತ್ತರವನ್ನು ಜಾಸ್ತಿ ಮಾಡಿದರೆ, ನಾವು ಸುಪ್ರೀಮ್ ಕೋರ್ಟಗೆ ಹೋಗಬೇಕಾಗುತ್ತದೆ, ಅದರ ಬಗ್ಗೆ ಕೇಂದ್ರ ಸರ್ಕಾರದ ರಾಜ್ಯ ಸರ್ಕಾರದ ವಿರುದ್ಧ ಚಳುವಳಿಯನ್ನು ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಇದರ ಬಗ್ಗೆ ತಮ್ಮ ಮತ್ತು ಅವರ ನಡುವೆ ಏನಾದರೂ ಚರ್ಚೆಯಾಗಿತೆಯೇ? ಅವರು ಇದರ ಬಗ್ಗೆ ಏನಾದರೂ ಕೇಳಿಕೊಂಡಿದ್ದರೆ, ಯಾವ ಕ್ರಮವನ್ನು ತಾವು ಹಾಕಿಕೊಂಡಿರಿ ಎಂಬ ಬಗ್ಗೆ ತಿಳಿಸಬೇಕು. ಒಂದು ಕಡೆ ಬಾಗಲಕೋಟೆಯ ಪುನರ್ವಸತಿ ಕಾರ್ಯಕ್ರಮವನ್ನು ತೀವ್ರಗತಿಯಲ್ಲಿ ಮಾಡಬೇಕೆಂದು ತಾವು ಆರ್.ಅಂಡ್ ಆರ್. ಕಾರ್ಯಕ್ರಮವನ್ನು ತೆಗೆದುಕೊಂಡು ಅಲ್ಲಿರತಕ್ಕ ಅಧಿಕಾರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು, ಕಂದಾಯ ಇಲಾಖೆಯ ಕಾರ್ಯದರ್ಶಿಯವರಿಗೆ ಇರತಕ್ಕ ಎಲ್ಲಾ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ತಾವು ಈ ಕಡೆ ಇಂಥ ಕಾರ್ಯಕ್ರಮವನ್ನಿಟ್ಟುಕೊಂಡಿರುವಾಗ ಮತ್ತೊಂದು ಕಡೆ ಆಂಧ್ರಪ್ರದೇಶದವರು ಇದಕ್ಕೆ ಅಡಚಣೆಯನ್ನುಂಟು ಮಾಡಲು ಪ್ರಯತ್ನ ಮಾಡುತ್ತಿದ್ದಾರೆ ಎನ್ನತಕ್ಕ ವರದಿಯು ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ತಮ್ಮ ಕ್ರಮವನ್ನೇನು ಎನ್ನತಕ್ಕದ್ದು ಮೊದಲ ಪ್ರಶ್ನೆ. ಎರಡನೆಯದಾಗಿ, ಜುರಾಲ ಪ್ರಾಜೆಕ್ಟ ಬಗ್ಗೆ ಆಂಧ್ರ ಪ್ರದೇಶದವರು ಈಗಾಗಲೇ ಡ್ಯಾಮಿನ ಎತ್ತರವನ್ನು ಜಾಸ್ತಿ ಮಾಡಿ ನಮಗೆ ತೊಂದರೆಯನ್ನು ಕೊಡುವ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ ನಿರ್ಗತಿಕರಾದವರಿಗೆ ಪುನರ್ವಸತಿ ಒದಗಿಸಲು, ಆಂಧ್ರಪ್ರದೇಶದವರು ಎಂಟು ಕೋಟಿ ರೂಪಾಯಿಗಳನ್ನು

ಕೊಡಬೇಕಾಗಿತ್ತು, ಅದರ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು. ಮೂರನೆಯದಾಗಿ ವಾರ್ಷಿಕ ಯೋಜನೆಯು 3,758 ಕೋಟಿ ರೂಪಾಯಿಗಳು ಇತ್ತು. ಅದನ್ನು ತಾವು ಕಡಿತಗೊಳಿಸಿ 2,675 ಕೋಟಿಗಳಿಗೆ ತಂದು ನಿಲ್ಲಿಸಿದ್ದೀರಿ. ಈಗ ಅದನ್ನು 3,100ಕೋಟಿ ರೂಪಾಯಿಗಳಿಗೆ ಮಾಡುತ್ತೇವೆಂದು ಹೇಳಿದ್ದೀರಿ. ಇದರಿಂದ ಸುಮಾರು 600-700 ಕೋಟಿ ರೂಪಾಯಿಗಳು ಹೆಚ್ಚುಕಡಿಮೆ ಕಡಿತವಾಗುತ್ತದೆ, ಇದಕ್ಕೆ ಕಾರಣವನ್ನು ತಾವು ಹೇಳಬೇಕು. ಮಾನ್ಯ ಉಪ ಮುಖ್ಯಮಂತ್ರಿಯವರು ಮಾತನಾಡುತ್ತ ಮಲಗಿದವರಿಗೆ ಎಬ್ಬಿಸಬಹುದು, ಆದರೆ ಎಚ್ಚರವಿದ್ದು ಮಲಗಿದಂತೆ ನಟನೆ ಮಾಡಿದವರಿಗೆ ಎಬ್ಬಿಸಲು ಆಗುವುದಿಲ್ಲವೆಂದು ಹೇಳಿದರು. ತಾವು ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟರೆ ಒಳ್ಳೆಯದು. ತಮ್ಮ ಹೌಸಿಂಗ್ ಕಾರ್ಯಕ್ರಮದಲ್ಲಿ ಮನೆಗಳನ್ನು, ನಿವೇಶನಗಳನ್ನು ವಿತರಣೆ ಮಾಡಲು ಗುರಿ ಇರತಕ್ಕದ್ದು 78,500, ಆದರೆ ಇಲ್ಲಿಯವರೆಗೆ ಸಾಧಿಸಿರತಕ್ಕದ್ದು 3578 ಮಾತ್ರ. ಅಷ್ಟು ನಿವೇಶನಗಳನ್ನು ಮಾತ್ರ ವಿತರಣೆ ಮಾಡಿದ್ದೀರಿ.

ಶೇಕಡ 8 ಎಂದು ಹೇಳಿ, ಕಳೆದ ತಿಂಗಳ 20 ಅಂಶಗಳ ಕಾರ್ಯಕ್ರಮದ ರಿವ್ಯೂ ಮೀಟಿಂಗನಲ್ಲಿ ನೀಡಿದ ಅಂಕಿಅಂಶಗಳಿಂದ ತಿಳಿದು ಬರುತ್ತದೆ. ಮನೆಗಳನ್ನು ಕಟ್ಟಿಸಿ ಕೊಡತಕ್ಕ ಡಾ: ಅಂಬೇಡ್ಕರ ಯೋಜನೆಯಡಿಯಲ್ಲಿ 1995-96ರಲ್ಲಿ 25 ಸಾವಿರ ಮನೆಗಳನ್ನು ಕಟ್ಟಿಸಿಕೊಡುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ಕಳೆದ ತಿಂಗಳು ನಡೆದ ರಿವ್ಯೂ ಮೀಟಿಂಗನಲ್ಲಿ ಒದಗಿಸಲಾದ ಮಾಹಿತಿ ಪ್ರಕಾರ ಈ ವರ್ಷ ಇಲ್ಲಿಯವರೆಗೂ ಕೇವಲ 41 ಮನೆಗಳನ್ನು ಮಾತ್ರ ಕಟ್ಟಿಸಲಾಗಿದೆ. ಅಂದರೆ ಶೇಕಡ 4 ರಷ್ಟು ಗುರಿಯನ್ನು ಮಾತ್ರ ಸಾಧಿಸಲಾಗಿದೆ. ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 60 ಸಾವಿರ ಮನೆಗಳನ್ನು ಕಟ್ಟಿಸಿಕೊಡುವ ಗುರಿ ಇತ್ತು, ಆದರೆ ಕೇವಲ 9559 ಮನೆಗಳನ್ನು ಮಾತ್ರ ಕಟ್ಟಿಸಲಾಗಿದೆ. ಅಂದರೆ ಶೇಕಡ 21 ರಷ್ಟು ಗುರಿಯನ್ನು ಮಾತ್ರ ಸಾಧಿಸಲಾಗಿದೆ. ನಾನು ವಾರ್ಷಿಕ ಗುರಿಯನ್ನು ಇಲ್ಲಿ ಹೇಳುತ್ತಿದ್ದೇನೆ. ಈಗ ಹೇಳಿದ ಅಂಕಿ ಅಂಶಗಳು ನಾವು ಸಂಗ್ರಹಿಸಿರುವುದಿಲ್ಲ. ಇವು ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ 20 ಅಂಶಗಳ ಕಾರ್ಯಕ್ರಮದ ಪ್ರಗತಿ ಬಗ್ಗೆ ರಿವ್ಯೂ ಮಾಡತಕ್ಕ ಸಮಿತಿಯಲ್ಲಿ ಕೊಟ್ಟಂತಹ ಅಂಕಿ ಅಂಶಗಳಾಗಿವೆ. ಈ ಅಂಕಿ ಅಂಶಗಳಿಂದ ನಾವು ಮಲಗಿದ್ದೇವೋ, ನೀವು ಮಲಗಿದ್ದೀರೋ ಎಂಬುದು ನಿಮಗೇ ಗೊತ್ತಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಒಂದು ವಿಷಯ ನಾನು ಶ್ರೀಮಾನ್ ಖರ್ಗೆಯವರು ಹೇಳಿದಕ್ಕೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಕೋರಮಂಗಲದ ವಿಷಯ ಹೇಳುವುದಿಲ್ಲವೇ?

ಶ್ರೀ ಹೆಚ್.ಡಿ. ದೇವೇಗೌಡ : ಕೋರಮಂಗಲದ ಬಗ್ಗೆ ಅದರಲ್ಲಿ 205 ಕೋಟಿ ರೂಪಾಯಿಗಳ ಭ್ರಷ್ಟಾಚಾರ ಆಯಿತು, ಮೊನ್ನೆ ಮೆಡಿಕಲ್ ಸೀಟಿನ ಹಂಚಿಕೆಯಲ್ಲಿ 120 ಕೋಟಿ ರೂಪಾಯಿಗಳ ಭ್ರಷ್ಟಾಚಾರ ಆಯಿತು ಎಂದು ನೀವು ಊರು ಊರೆಲ್ಲಾ ಕಿರು ಹೊತ್ತಿಗೆ ಮಾಡಿಸಿ ಹಂಚಿದ್ದೀರಿ. ಆ ಬಗ್ಗೆ ನೀವೇ ತೀರ್ಪು ಕೊಟ್ಟಿರಿ ಎಂದು ಕಾಣುತ್ತದೆ. ಅದನ್ನೆಲ್ಲಾ ಹೇಳಿಯಾಗಿದೆ. ಜನಗಳನ್ನು ಕೇಳಿ ಆಯಿತು...

ಶ್ರೀ ಬಿ.ಎಸ್. ಯಡಿಯೂರಪ್ಪ : ಜನವರಿ ತಿಂಗಳೊಳಗೆ ಕ್ರೀಡಾಂಗಣ ನಿರ್ಮಾಣ ಆಗದಿದ್ದರೆ, 50 ಸಾವಿರ ರೂಪಾಯಿಗಳನ್ನು ದಂಡ ಹಾಕುತ್ತೇವೆ ಎಂದು ಹೇಳಿದ್ದೀರಿ. ಇವತ್ತು ಸಭೆಯ ಮುತಕ್ಕೆ ಒಂದು... (ಗೊಂದಲ) ಅಧ್ಯಕ್ಷರೇ ಇದು ಕ್ರಮವಲ್ಲ. ನಾನು ಕೆಲವು ಕ್ಲಾರಿಫಿಕೇಷನ್ ಕೇಳಿದ್ದೆ. ನೀವು ಸ್ಪಷ್ಟೀಕರಣ ಕೊಡುವುದಿಲ್ಲ ಎನ್ನುವುದಾದರೆ ನೀವು, ನಿಮ್ಮ ಆಡಳಿತ ವೈಖರಿ, ನೀವು ಹೇಳಿದಂತಹ ಯಾವುದೇ ಭರವಸೆಯನ್ನು ಈಡೇರಿಸದೇ ಇರುವಂತಹ ಒಂದು ಬೇಜವಾಬ್ದಾರಿ ಹೇಳಿಕೆ ಇದಾಗಿದೆ. ಇದನ್ನು ಪ್ರತಿಭಟನೆ ಮಾಡುತ್ತೇನೆ. ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ನಡೆದಂತಹ ಚರ್ಚೆಗೆ ನೀವು ನೀಡಿರುವ ಉತ್ತರದಲ್ಲಿ ಈ ರಾಜ್ಯದ ಜನತೆಗೆ ಬೇಕಾದಂತಹ ಯಾವುದೇ ವಿಷಯವಲ್ಲ. (ಗೊಂದಲ) ಜನರಿಗೆ ದ್ರೋಹ ಮಾಡುವಂತಹ ಒಂದು ಕಟ್ಟುಕಥೆಯ ಹೇಳಿಕೆ ಇದಾಗಿದೆ. (ಗೊಂದಲ) ಆದಕ್ಕಾಗಿ ಇದನ್ನು ಪ್ರತಿಭಟನೆ ಮಾಡಿ ನಾವು ಹೊರಗೆ ಹೋಗುತ್ತೇವೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಕರೆಕ್ಟಾಗಿ ಉತ್ತರ ಸಮಯಕ್ಕೆ ಪ್ರತಿಭಟನೆ ಮಾಡುವುದು ಯಾವ ನ್ಯಾಯ ಸ್ವಾಮಿ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆಂದರೆ ನನಗೆ ಅಧಿಕಾರ ಇಲ್ಲವೇ? ಕೋರಮಂಗಲದಲ್ಲಿ ರಾಷ್ಟ್ರೀಯ ಕ್ರೀಡೆಗಳ ಸಲುವಾಗಿ ವಸತಿ ಸಮುಚ್ಚಯ ನಿರ್ಮಿಸಲು ಶೇಕಡ 45ಕ್ಕೂ ಹೆಚ್ಚಿನ ರೇಟ್‌ಕೊಟ್ಟು ಒಪ್ಪಂದ ಮಾಡಿಕೊಂಡಿರಿ. ಇದುವರೆವಿಗೂ ಸುಮಾರು 100 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ವ್ಯಯ ಮಾಡಿದ್ದೀರಿ. ಇವತ್ತಿನವರೆಗೂ ಅದು ಪೂರ್ಣಗೊಂಡಿಲ್ಲ. ತರಾತುರಿಯಲ್ಲಿ ಅಲ್ಲಿ ನೀವು ಕಟ್ಟಡ ಕಟ್ಟುತ್ತಿದ್ದೀರಿ. ನಿಗದಿತ ಅವಧಿಯೊಳಗೆ ಅದು ಪೂರ್ಣಗೊಳ್ಳದಿದ್ದರೆ ಪ್ರತಿನಿತ್ಯ 50 ಸಾವಿರ ರೂ.ಗಳ ದಂಡ ಹಾಕುತ್ತೇವೆ ಎಂದು ಹೇಳಿದ್ದೀರಿ. ಆ ರೀತಿ ತಾವು ಮಾಡಿದ್ದೀರೋ ಇಲ್ಲವೋ ಎಂದು ನಾನು ಕೇಳಿದ್ದೇನೆ. ಅದಕ್ಕೆ ನೀವು ಉತ್ತರ ಕೊಡಬೇಕಲ್ಲ. ನೀವು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿದ್ದೀರಿ? ಇವತ್ತು ನಾನು ಹೇಳಲಿಲ್ಲ, ಜನ ಮಾತನಾಡಿಕೊಳ್ಳುತ್ತಿದ್ದಾರೆ, ಏನೆಂದರೆ ಗ್ರಾನೈಟ್ ವ್ಯವಹಾರದಲ್ಲಿ 40-50 ಕೋಟಿ ರೂಪಾಯಿಗಳನ್ನು ಕೊಟ್ಟು ಮದನಗೋಪಾಲ್ ಎಂಬ ಅಧಿಕಾರಿಯನ್ನು ಗಣಿ ಮತ್ತು ಭೂವಿಜ್ಞಾನ ನಿರ್ದೇಶಕರ ಹುದ್ದೆಯಿಂದ ವರ್ಗಾವಣೆ ಮಾಡಲಾಯಿತು ಎಂದು ಈ ರೀತಿ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಆ ಬಗ್ಗೆ ನಾನು ನಿಮ್ಮ ಮೇಲೆ ಆರೋಪ ಮಾಡಲಿಲ್ಲ, ಏಕೆಂದರೆ ನಾನು ಇದಕ್ಕೆ ಸಾಕ್ಷ್ಯ ಎಲ್ಲಿಂದ ತರಲಿ? ಆಧಾರ ಎಲ್ಲಿಂದ ತರಲಿ? ಅದಕ್ಕಾಗಿ ನಾನು ಈ ವಿಷಯ ಮಾತನಾಡುತ್ತಿಲ್ಲ. ಇದಕ್ಕೆ ಏನು ಹೇಳುತ್ತೀರಿ? ಹುಡ್ಕೋದಿಂದ ಸಾಲ ಪಡೆದು ತರಾತುರಿಯಲ್ಲಿ ಬಡವರ ಮನೆ ಕಟ್ಟಲಿಲ್ಲ. ಆದರೆ ಇಲ್ಲಿ ಇವತ್ತು ಇದಕ್ಕಾಗಿ 250 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೀರಿ. ಇದು ಯಾರ ದುಡ್ಡು? ಅದರ ಅಗತ್ಯ ಇದೆಯೇನು? ನಿಮ್ಮ ಆದ್ಯತೆ ಏನು?

ಶ್ರೀ ಹೆಚ್. ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಜನ ಮಾತನಾಡುವುದಕ್ಕೆ ಜನಗಳ ಮುಂದೆ ಉತ್ತರ ಕೊಡುತ್ತೇನೆ. ಜನರು ಮಾತನಾಡುತ್ತಾರೆ ಎಂದು ಇವರು ಇಲ್ಲಿ ಹೇಳುತ್ತಾರೆ. ಅದಕ್ಕೆ ನಾನು

ಜನಗಳ ಮುಂದೆಯೇ ಹೋಗಿ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದೊಂದು ಉದ್ಧಟತನದ ಉತ್ತರ. ಇದನ್ನು ಪ್ರತಿಭಟನೆ ಮಾಡಿ, ಈ ಸರ್ಕಾರ ಜನರಿಗೆ ಕೊಟ್ಟಂತಹ ವಚನವನ್ನು ಈಡೇರಿಸುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ, ಒಂದು ಕಟ್ಟುಕಥೆಯನ್ನು ಇಲ್ಲಿ ಹೇಳಿದ್ದೀರಿ. ನಾಳೆ ಇದನ್ನು ಟೇಪ್ ಮಾಡಿ ಬಿಟ್ಟು ಎಲ್ಲಾ ಶಾಸಕರಿಗೆ ಚುನಾವಣಾ ಸಭೆಯಲ್ಲಿ ಬಾಷಣ ಮಾಡಲಿಕ್ಕೆ ಹೇಳಿ. ಇದನ್ನು ಪ್ರತಿಭಟನ ಮಾಡಿ ನಾವು ವಾಕೌಟ್ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ ಶಾಸಕರು ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ಎಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಮೊದಲ ಬಾರಿಗೆ ದಯಮಾಡಿ ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನೂ ಕೂಡ ಈ ಸದನದಲ್ಲಿ 32-33 ವರ್ಷಗಳ ಕಾಲ ಶಾಸಕನಾಗಿದ್ದೇನೆ. ಅಲ್ಲಿ ಯಾರೋ ಬೀದಿಯಲ್ಲಿ ಜನ ಮಾತನಾಡಿಕೊಳ್ಳುತ್ತಾರೆ ಎಂದು ಅದನ್ನು ಬಂದು ಇಲ್ಲಿ ಹೇಳುವುದು, ವಿರೋಧಪಕ್ಷದ ನಾಯಕನ ಸ್ಥಾನಕ್ಕೆ, ಭೂಷಣ ತರುತ್ತದೆಯೇ? ಇಲ್ಲವೇ ಎಂಬ ಬಗ್ಗೆ ನಾನೇನೂ ಹೇಳುವುದಿಲ್ಲ. I leave it to the judgment of the peopel. ಅದಕ್ಕೂ ನನಗೂ ಸಂಬಂಧ ಇಲ್ಲ. ಈಗ ಮಾನ್ಯ ಬಿರ್ಗೆಯವರು ಒಳ್ಳೆಯ ಪ್ರಶ್ನೆ ಕೇಳಿದರು. You put a relevant question to pin down the Government. I welcome it. I have no objections. It is my duty to answer. ಮೆಡಿಕಲ್ ಸೀಟಿನ ಹಂಚಿಕೆಯಲ್ಲಿ 120 ಕೋಟಿ ರೂಪಾಯಿ ದುಡ್ಡು ಹೊಡೆದಿದ್ದೇವೆ ಎಂದರೆ, ಏನು ಕೋಟಿಗೇನು ಲೆಕ್ಕಾಚಾರ ಬೇಡವೇ? Does it go to bring credit to any politician? ತಾವು ಕುಳಿತು ಅಲ್ಲಿ ನಿರ್ಣಯ ಮಾಡುತ್ತೀರಿ, ಎರಡು ಸೀಟಿನ ಬಗ್ಗೆ, ಅದು 1992 ರಿಂದ ನಡೆದ ಘಟನೆ ಬಗ್ಗೆ ನಾನು ಇಲ್ಲಿ ಬಂದು ಹೆಚ್ಚಿನ ಹೇಳಿಕೆಯನ್ನು ಕೊಟ್ಟಾಗ I have read it in the Paper. To help the Medical Education Director, unnecessarily. They want to make her scape-goat, but I have not answered all these points. I do not want to create bitter atmosphere unnecessarily and she is one of the best officers. I do not want to say beyond this. Sittting in the place, because the Hon. Leader of Opposition has got certain constitutional responsibilities. ಅಲ್ಲಿ ಬೀದಿಯಲ್ಲಿ ಜನ ಮಾತನಾಡಿಕೊಂಡರೆ, ಅದನ್ನು ಬಂದು ನನಗೆ ಹೇಳುವುದು ಎಂದರೆ, we will leave it to the judgement of the people of the State. ಸರ್ಕಾರ ಭ್ರಷ್ಟಾಚಾರ ನಡೆಸಿದೆ ಎಂದು ಎಲೆಕ್ಷನ್‌ಗಿಂತ ಮೊದಲು ನೀವು ಕರಪತ್ರಗಳನ್ನು ಮುದ್ರಿಸಿ ಊರು ಊರಿಗೆ ಹಂಚಿದ್ದೇ ಹಂಚಿದ್ದುದು. 1990ರ ಚುನಾವಣೆಯಲ್ಲಿ ಬಿ.ಜೆ.ಪಿ.ಯವರು ಶೇಕಡ 27ರಷ್ಟು ಮತಗಳನ್ನು ಗಳಿಸಿದರು. ಈಗ ಶೇಕಡ 7ಕ್ಕೆ ಇಳಿದಿ ಪಾರ್ಲಿಮೆಂಟರಿ ಎಲೆಕ್ಷನ್‌ನಲ್ಲಿ ಶೇಕಡ 29ರಷ್ಟು ಮತಗಳನ್ನು ಗಳಿಸಿದರು. ಈಗ ಶೇಕಡ 7ಕ್ಕೆ ಇಳಿದಿದ್ದಾರೆ. ಮುಂಬರುವ ಪಾರ್ಲಿಮೆಂಟರಿ ಎಲೆಕ್ಷನ್‌ನಲ್ಲಿ ಎಷ್ಟು ಮತ

ಗಳಿಸುತ್ತಾರೆ ಎಂಬುದನ್ನು ಕಾದು ನೋಡೋಣ. ಇನ್ನೇನು 60 ದಿನಗಳಲ್ಲಿ ಪಾರ್ಲಿಮೆಂಟಿನ ಚುನಾವಣೆ ಬರುತ್ತದೆ. ಅವರು ಗಳಿಸುವ ಶೇಕಡಾವಾರು ಮತಗಳ ಪ್ರಮಾಣ ಎಲ್ಲಿದೆ ಬಂದು ನಿಲ್ಲುತ್ತದೆಯೋ ನೋಡೋಣ.

ಅಧ್ಯಕ್ಷರು : ನಮ್ಮದೇನೂ ಇಲ್ಲ. ಒಂದು ವೇಳೆ ಮತ್ತು ಏನಾದರು ಇದ್ದರೆ ನಮಗೆ ಸ್ವಲ್ಪ ಕೊಡಿ. ನಮ್ಮ ಊರಿನಲ್ಲಿ ರಸ್ತೆಗಳನ್ನು ಮಾಡಿಸಬೇಕು.

ಶ್ರೀ ಎಚ್.ಡಿ. ದೇವೇಗೌಡ : ಒಬ್ಬ ಅಧಿಕಾರಿಯನ್ನು ವರ್ಗ ಮಾಡಿದ್ದರ ಬಗ್ಗೆ the former Chief Secretary went before the Committee and he placed all documents. ಹೇಗೆ ಕೇಂದ್ರ ಸರ್ಕಾರಕ್ಕೂ ನಮಗೂ ಪತ್ರ ವ್ಯವಹಾರ ನಡೆದಿದೆ? ಕೇಂದ್ರ ಸರ್ಕಾರ ಆ ಅಧಿಕಾರಿ ಸೇವೆಯನ್ನು ಕೇಂದ್ರಕ್ಕೆ ನೀಡದಿದ್ದಲ್ಲಿ ಅವನನ್ನು ಡಿಬಾರ್ ಮಾಡುತ್ತೇವೆ ಎಂದು ಹೇಳಿದ್ದು, ಆಗ ಆ ಅಧಿಕಾರಿಯೇ ಖುದ್ದಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಿ ನನ್ನನ್ನು ಕೇಂದ್ರ ಸೇವೆಗೆ ಕಳುಹಿಸಿ ಎಂದು ಹೇಳಿದ್ದು, Chief Secreatary has gone with files and placed them before the Committee. ಇಷ್ಟೆಲ್ಲಾ ಆದ ಮೇಲೂ ಹೀಗೆ ಹೇಳಿದರೆ there must be some sense in all this. ಮಾತನಾಡಬೇಕಾದರೆ ಸ್ವಲ್ಪ ಬುದ್ಧಿ ಕಡಿಮೆಯೋ ಹೆಚ್ಚೋ ನನಗೆ ಗೊತ್ತಿಲ್ಲ. I leave it to the people. ಜುರಾಲಾ ಆಣೆಕಟ್ಟಿನ ಎತ್ತರವನ್ನು 524 ಕ್ಕಿಂತ ಹೆಚ್ಚಿಗೆ ಮಾಡಿದರೆ, ನಾವು ಕೋರ್ಟಿಗೆ ಹೋಗುತ್ತೇವೆ, ಚಳುವಳಿ ಮಾಡುತ್ತೇವೆ ಎಂಬುದಾಗಿ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಹೇಳಿದ್ದಾರೆ ಎಂಬ ಪ್ರಶ್ನೆಯನ್ನು ಮಾನ್ಯ ಖರ್ಗೆಯವರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ನಮ್ರತೆಯಿಂದ ಆಂಧ್ರದ ಮುಖ್ಯಮಂತ್ರಿಗಳಿಗೆ ಹೇಳಲಿಕ್ಕೆ ಇಚ್ಛಿಸುತ್ತೇನೆ. ಮಾನ್ಯ ಪ್ರಧಾನ ಮಂತ್ರಿಗಳಿಗೆ ಆಂಧ್ರದವರೇ ಇದ್ದರೂ ಅವರು ಎಂದೂ ಈ ಬಗ್ಗೆ ಅಬ್ಜೆಕ್ಷನ್ ಮಾಡಿದ್ದಾರೆ ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಇಲ್ಲಿ ರಾಜಕೀಯ ಬೆರೆಸುವ ಅವಶ್ಯಕತೆ ನನಗೆ ಇಲ್ಲ. ಆದೇ ಸೆಂಟ್ರಲ್ ವಾಟರ್ ಮಿನಿಸ್ಟ್ರಿಯವರೂ ಏನು ಅಬ್ಜೆಕ್ಷನ್ ಮಾಡಿದ್ದಾರೆ ಎಂದು ನಾನು ಇಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತ್ರ ಹೇಳುತ್ತೇನೆ. ನನ್ನ 729 ಟಿ.ಎಂ. ಸಿ ನೀರನ್ನು ಬಳಕೆ ಮಾಡಿಕೊಳ್ಳಲಿಕ್ಕೆ ಎಷ್ಟು ನೀರನ್ನು ನಾನು ಸಂಗ್ರಹಣೆ ಮಾಡಬೇಕೋ, ಅಷ್ಟು ನೀರನ್ನು ಸಂಗ್ರಹ ಮಾಡಲಿಕ್ಕೆ ಯಾರೂ ಅಡ್ಡಿ ಬರಲಿಕ್ಕೆ ಈ ದೇಶದಲ್ಲಿ ಸಾಧ್ಯವಿಲ್ಲ. It is our right to utilise 729 tmc of water. What exactly is the storage required is only a calculation. ಅಷ್ಟು ನೀರನ್ನು ನಾನು ಶೇಖರಣೆ ಮಾಡಲಿಕ್ಕೆ, ನಾನು ಆಣೆಕಟ್ಟಿನ ಎತ್ತರವನ್ನು 524ರ ಲೆವಲಿಗೆ ಏರಿಸುತ್ತೇನೆಯೋ, 518ಕ್ಕೆ ಗೇಟನ್ನು ಇಡುತ್ತೇನೆಯೋ ಎಂಬುದು ನನಗೆ ಸೇರಿದ್ದುದು. ನನ್ನ ರಾಜ್ಯದ 729 ಟಿ.ಎಂ.ಸಿ. ನೀರನ್ನು ಬಳಕೆ ಮಾಡಿಕೊಳ್ಳಲಿಕ್ಕೆ ಯಾರೂ ನನಗೆ ಅಡ್ಡಿ ಬರಲಿಕ್ಕೆ ಸಾಧ್ಯವಿಲ್ಲ. ಅಷ್ಟು ನೀರನ್ನು ನಾವು ಬಳಕೆ ಮಾಡಬೇಕಾದರೆ ಸ್ವಲ್ಪಮಟ್ಟಿಗೆ ಆಣೆಕಟ್ಟಿನ ಎತ್ತರ ಇನ್ನೂ ಹೆಚ್ಚು ಹೋಗಬೇಕಾಗುತ್ತದೆ. to hold or to store water. 729 ಟಿ.ಎಂ.ಸಿ. ನೀರನ್ನು ಬಳಕೆ ಮಾಡಲಿಕ್ಕೆ 530-540 ಟಿ.ಎಂ.ಸಿ. ನೀರನ್ನು ನಾವು ಸ್ಟೋರ್ ಮಾಡಬೇಕಾಗುತ್ತದೆ. In all reservoirs in Krishna basin. we have not reached that stage.

ಮಾನ್ಯ ಅಧ್ಯಕ್ಷರೇ, ನಾನು 15 ಮೀಟರ್ ಗೇಟ್ ಇಟ್ಟಿರತಕ್ಕಂಥದ್ದರ ಬಗ್ಗೆ ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮ ತೆಗೆದುಕೊಳ್ಳುವುದು ಒಂದು. ಅದು ಅಷ್ಟೇ ಅಲ್ಲ 1997 ಡಿಸೆಂಬರ್ ಒಳಗೆ ಆ ನೀರನ್ನು ಶೇಖರಣೆ ಮಾಡಿ ನನ್ನ ಭಾಗದ ರೈತರಿಗೆ ಆ ನೀರನ್ನು ಒದಗಿಸತಕ್ಕಂಥದ್ದರ ಬಗ್ಗೆ ಕೆಲವರಿಗೆ ಎರಡು ಕ್ರಾಪ್ ಕೊಡಬಹುದು, ಕೆಲವರಿಗೆ ಮೂರು ಕ್ರಾಪ್ ಕೊಡಬಹುದು. Till the distribution sytem is completed, I am going to hold the water. By 1997, I will see that the 15 Metre gate is completed and water is going to be stored. ಇದರಲ್ಲಿ ಯಾವುದೇ ದಾಕ್ಷಿಣ್ಯ ಇಲ್ಲ. ಅದಕ್ಕೋಸ್ಕರ ಒಬ್ಬ ಆಫೀಸರ್ ಹಾಕಿರುವುದು. He is going to complete all R&R works, and the World Bank has given an indication that they are going to release the balance amount and the work will go with all speed. There is no question of any hesitation in this. There should be no doubt in the mind of anybody. ಆದ್ದರಿಂದ ಈ ವಿಷಯ ಕ್ಲಾರಿಫಿಕೇಷನ್ ಮಾಡುತ್ತಿದ್ದೇವೆ. ಇದು ಒಂದು. ಇದರ ಬಗ್ಗೆ ಪ್ರಶ್ನೆ ಇಲ್ಲವೇ ಇಲ್ಲ. ನಮ್ಮ ನೀರು ಅದು, ಅದಕ್ಕೆ ಯಾರೂ ಅಡ್ಡಿ ಬರುವುದಕ್ಕೆ ಸಾಧ್ಯವಿಲ್ಲ. ಎರಡನೆಯದು ಅವರು ಪುರಾಲಾ ಪ್ರಾಜೆಕ್ಟ್ ಬಗ್ಗೆ ಎತ್ತಿದರು. ಆಂಧ್ರ ಚೀಫ್ ಮಿನಿಸ್ಟರ್ ನಾವು ಪೋಲೀನ್ ಮೂರು ಸೇತುವೆಗಳನ್ನು ಮಾಡಬೇಕೆಂದು ಡಿಮಾಂಡ್ ಮಾಡಿದರು. ಅಲ್ಲಿ ಇದುವರೆಗೆ ದೋಣಿಯಲ್ಲಿ ಹೋಗುತ್ತಿದ್ದರು. ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಅಲ್ಲಿ ಎರಡು ಪುಣ್ಯ ಕ್ಷೇತ್ರಗಳಿವೆ, ಅಲ್ಲಿಗೆ ಜನ ದೋಣಿಯಲ್ಲಿ ಹೋಗತಕ್ಕಂತಹ ಪರಿಸ್ಥಿತಿ ಇತ್ತು. ಅದಕ್ಕೆ ಪ್ರತಿಷ್ಠೆ ಕೊಡುವುದಕ್ಕೆ ಸ್ವಲ್ಪ ಹಿಂದೆಮುಂದೆ ಆಯಿತು. ಚರ್ಚೆ ಆಯಿತು. He has given an undertaking. ಅವರು ಒಪ್ಪಿಗೆ ಕೊಟ್ಟಿದ್ದಾರೆ. ಸಿಂಗಲ್ ಲೈನ್ ಮೂರು ಬ್ರಿಡ್ಜ್‌ಗಳನ್ನು ಮಾಡತಕ್ಕಂಥದ್ದರ ಬಗ್ಗೆ 17 ಕೋಟಿ ರೂಪಾಯಿಗಳನ್ನು ಆಂಧ್ರ ಸರ್ಕಾರ ಭರ್ತಿ ಮಾಡಿ ಕೊಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದು ಅಷ್ಟೇ ಅಲ್ಲ, ಇನ್ನು ಮುಳುಗಡೆ ಆಗತಕ್ಕಂತಹ ಭೂಮಿಗೆ ಪೂರ್ಣ ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. ಸರ್ವೇಯಲ್ಲಿ ಇನ್ನು ಅರ್ಧ ಮೀಟರ್ ವ್ಯತ್ಯಾಸ ಇದೆ ಎನ್ನತಕ್ಕಂಥದ್ದು ಇದೆ, ಅದು ಸರ್ವೇ ಆಫ್ ಇಂಡಿಯಾದವರಿಗೆ ಬರೆದು ಪುನಃ ಇನ್ನೊಂದು ಸಾರಿ ನೋಡೋಣ. ನಿಮಗೆ ನಮಗೆ ವ್ಯತ್ಯಾಸ ಇದೆ ಎಂದು ಹೇಳಿದ್ದಾರೆ. ಒಟ್ಟು ನೀರು ಶೇಖರಣೆ ಮೊದಲು ಏನಿತ್ತು ಅದಕ್ಕಿಂತ ಹೆಚ್ಚು ಮಾಡುವುದಿಲ್ಲ ಎಂದು ಹೇಳಿದ್ದಾರೆ. ಮುಳುಗಡೆ ಆಗುವ ಭೂಮಿಗೆ ಪೂರ್ತಿ ಕಾಂಪನ್‌ಸೇಷನ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಮೂರು ಸೇತುವೆಗಳಿಗೆ ಈಗ ನಮಗೂ ಅವರಿಗೂ ಮೀಟಿಂಗ್ ಆಗಿದೆ, ಅಧಿಕಾರಿಗಳಲ್ಲಿ ಮೀಟಿಂಗ್ ಆಗಿದೆ, ಮುಖ್ಯಮಂತ್ರಿಗಳಲ್ಲಿ ಮೀಟಿಂಗ್ ಆಗಿದೆ, 17 ಕೋಟಿ ರೂಪಾಯಿಗಳನ್ನು ಮೂರು ಸೇತುವೆ ಕಟ್ಟುವುದಕ್ಕೆ ಹಣ ಕೊಡುತ್ತೇವೆ ಎನ್ನುವ ಮಾತು ಹೇಳಿದ್ದಾರೆ. ಇದು ಪುರಾಲಾ ಬಗ್ಗೆ. ಮೂರನೆಯದು, ತಾವು ಹೌಸಿಂಗ್ ಬಗ್ಗೆ ಕೇಳಿದಿರಿ, ಇವತ್ತಿನವರೆಗೆ 36,000 ಮನೆಗಳು ಕಂಪ್ಲೀಟ್ ಆಗಿವೆ. ನಾನು ಮೊದಲೇ ಹೇಳಿದ, ಬೆನಿಫಿಷಿಯರೀಸ್ ಸೆಲೆಕ್ಟ್ ಮಾಡುವುದರ ಬಗ್ಗೆ ಸ್ವಲ್ಪ ಜಿಜ್ಞಾಸೆ ಆಯಿತು ಎಂದು ಹೇಳಿದೆ, ನನ್ನ ಸ್ಪೀಚಿನಲ್ಲಿಯೂ ಹೇಳಿದ್ದೇನೆ. ಒಂದು ಕಡೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗೆ ಜಿಜ್ಞಾಸೆ,

ವಿಲೇಜ್ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅವರವರ ಮೇಲೆ ಜವಾಬ್ದಾರಿ, ಎಂ.ಎಲ್.ಎ. ಗಳಲ್ಲಿ ಜವಾಬ್ದಾರಿ ಅಲ್ಲ, ದಯಮಾಡಿ ಪಾಟಾಳ್‌ರವರು ಅದಕ್ಕೆ ಏನಾದರೂ ಮಿಸ್ಟೇಕ್ ಮಾಡಿಕೊಂಡು ಬಿಟ್ಟಾರು.

SRI. M. MALLIKARJUNA KARGE : This is my report upto the end of January 96. So, within one month 36,000 houses are completed. It is wonder.

SRI H.D. DEVEGOWDA : I will give districtwise figure ಕೊಡುತ್ತೇನೆ. ಇನ್ನು ನಾಲ್ಕು ದಿವಸ ಸಭೆ ಇರುತ್ತದೆ. ಅದರ ನಿಮ್ಮ ಮುಂದ. I don't want to make a tall claim. 36,000 houses have already been completed. ನೀವು ಸೈಟ್ ಹಂಚುವುದರ ಬಗ್ಗೆ ಹೇಳಿದಿರಿ, ನಾನು ಹೇಳಿದೆ, ಜಮೀನು ಕೆಲವು ಕಡೆ ಕೊಂಡುಕೊಳ್ಳುವುದಕ್ಕೆ ಆಗಿಲ್ಲ. In urban areas ಏಕೆಂದರೆ ಇವತ್ತು ಈಗ ತಾನೇ ಮೊನ್ನೆ ಮೊನ್ನೆ ಮುನಿಸಿಪಾಲಿಟಿ, ಸಿಟಿ ಮುನಿಸಿಪಾಲಿಟಿ, ಟೌನ್ ಮುನಿಸಿಪಾಲಿಟಿ ಎಲೆಕ್ಷನ್‌ಗಳು ಆಗಿವೆ. ಅಲ್ಲಿ ಸ್ವಲ್ಪ ಮಟ್ಟಿಗೆ ಖಾಸಗಿ ನಮ್ಮ ಮುಖಂಡರು ಯಾರು ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ, ಅವರು ಸೈಟುಗಳನ್ನು ಕೊಂಡುಕೊಳ್ಳುವುದಕ್ಕೆ ದುಡ್ಡು ಬಿಡುಗಡೆ ಮಾಡಿದ್ದೇವೆ. ಆದು ಹಳ್ಳಿಯ ಪ್ರದೇಶದಲ್ಲಿ ನಮಗೆ ಸ್ವಲ್ಪ ಮಟ್ಟಿಗೆ ಪ್ರಗತಿ ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗಿದೆ. ನಾನು ಹೇಳುತ್ತಿದ್ದೇನೆ, ಮೂರು ಲಕ್ಷ 38.000 ಸೈಟುಗಳನ್ನು ಕೊಡತಕ್ಕಂಥದ್ದು ಬೇರೇ ಬೇರೆ ಕ್ಯಾಟಗರಿಯಲ್ಲಿ ಒಂದು ಲಕ್ಷ 75.000 ಮನೆಗಳನ್ನು ಕಟ್ಟಿಸತಕ್ಕಾಂಥದ್ದು ನಮ್ಮ ಗುರಿ. ಅದಕ್ಕೆ 518 ಕೋಟಿ ರೂಪಾಯಿಗಳನ್ನು ಜೋಡಿಸಿಕೊಂಡಿದ್ದೇವೆ. ಹುಡ್ಕೋದಲ್ಲಿ ಸುಮಾರು 240 ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದೇವೆ. Otherwise, where was the need for me to create a separate department? ದುಡ್ಡು ಹಿಡಿದು ನಾನು ಮಾಡಬೇಕಾಗಿಲ್ಲ. ಅಂದರೆ ಈ ಗುರಿ ಮುಟ್ಟಬೇಕಾದರೆ, ಮಾರ್ಚ್ 31ರ ಒಳಗೆ ಪೂರ್ತಿಯಾಗುವುದಿಲ್ಲ. ಜೂನ ಜುಲೈನಲ್ಲಿ we are going to achieve this object.

ಶ್ರೀ ಕಾಗೋಡು ತಿಮ್ಮಪ್ಪ : ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ಒಂದು ಸರ್ಕಾರದಿಂದ ಸುತ್ತೋಲೆ ಬಂದಿತ್ತು. ಶ್ರೀಮಾನ್ ಪಟೇಲರವರು 20 ಅಂಶಗಳ ಕಾರ್ಯಕ್ರಮ ಪರಿಶೀಲನೆ ಮಾಡುವಾಗ ಇದು ಪ್ರಶ್ನೆ ಬಂದಿತ್ತು. ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥವರು ಯಾರು. ಇದು ಅನೇಕ ಕಡೆಗಳಲ್ಲಿ ಮನೆ ಕಟ್ಟುವಾಗ ತಾಲ್ಲೂಕು ಪಂಚಾಯಿತಿಯವರು ಫಲಾನುಭವಿಗಳನ್ನು ಆಯ್ಕೆ ಮಾಡಿ ಕೆಲವು ಕಡೆ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅನೇಕ ಹಂತದಲ್ಲಿ ಜಿಲ್ಲಾ ಪಂಚಾಯಿತಿಯಲ್ಲಿ ದುಡ್ಡು ಕೂಡ ಇದೆ. ಆದರೆ ಪಾವತಿ ಮಾಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ತಮ್ಮಿಂದ, ಸರ್ಕಾರದಿಂದ ಒಂದು ಸುತ್ತೋಲೆ ಬಂದಿದೆ. ಏನೆಂದರೆ ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಬೇಕೆಂದು ಮಾಡಿದ್ದೀರಿ. ಗ್ರಾಮ ಸಭೆಯಲ್ಲಿ ಆಯ್ಕೆ ಮಾಡುವುದಕ್ಕೆ ಹೋದರೆ....

ಶ್ರೀ ಹೆಚ್. ಡಿ. ದೇವೇಗೌಡ : ನೀವೇ ಮಾಡಿದ್ದುದು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಗ್ರಾಮ ಸಭೆಗಳಲ್ಲಿ ಕೂಡ ಸೆಲೆಕ್ಟ್ ಮಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮೊದಲು ನೀವು ಕಳುಹಿಸಿದ್ದುದು ಏನೆಂದರೆ, ತಾಲ್ಲೂಕು ಪಂಚಾಯಿತಿಯವರು ಮಾಡಲಿ ಎಂದು ಹೇಳಿ, ತಾಲ್ಲೂಕು ಪಂಚಾಯಿತಿಯಿಂದ....

ಡಾ: ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ನೀವು ಗ್ರಾಮ ಸಭೆಯಲ್ಲಿ ನಿರ್ಣಯ ಮಾಡಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಒಂದು ವೇಳೆ ನವೆಂಬರ್ 30ನೇ ತಾರೀಖಿನ ಒಳಗೆ ಪಟ್ಟಿಯನ್ನು ಕೊಡದ ಹೋದರ ಸರ್ವೇ ಮಾಡಿರತಕ್ಕಂಥದ್ದರಲ್ಲಿ ಇರತಕ್ಕಂತಹ ಫಲಾನುಭವಿಗಳನ್ನು ತಾಲ್ಲೂಕು ಪಂಚಾಯಿತಿಯವರು ಆಯ್ಕೆ ಮಾಡಬೇಕೆಂದು ಸುತ್ತೋಲೆ ಕಳುಹಿಸಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮೊನ್ನೆ ಏನು ರಿವ್ಯೂ ಮಾಡಿದಾಗ ಬಂದಿದೆ, ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿದರ ಹಿಂದ ಮಾಡಿದ ಆಯ್ಕೆ ಪಟ್ಟಿಯನ್ನು ರದ್ದು ಮಾಡಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ : ರದ್ದು ಮಾಡತಕ್ಕಂತಹ ಅವಶ್ಯಕತೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಏಕೆ ಅದನ್ನು ಹೇಳಿದಿರಿ?

ಶ್ರೀ ಬಸವರಾಜ ರಾಯರೆಡ್ಡಿ : ಫಲಾನುಭವಿಗಳನ್ನು ಗುರುತಿಸುವ ಕೆಲಸ ಗ್ರಾಮ ಸಭೆಗ ಸೇರಿದ್ದುದು. In Panchayat Raj Act 1993, it is very clear.

ಶ್ರೀ ಕಾಗೋಡು ತಿಮ್ಮಪ್ಪ : ತಾಲ್ಲೂಕು ಪಂಚಾಯಿತಿಯವರಿಗೆ ಏಕೆ ಕೊಟ್ಟಿದ್ದೀರಿ ನೀವು?

ಶ್ರೀ ಟಿ.ಬಿ. ಜಯಚಂದ್ರ : ಗ್ರಾಮ ಸಭೆಗಳು ನಡೆಯುವುದೇ ಇಲ್ಲ.

ಡಾ : ಎಂ.ಪಿ. ಪ್ರಕಾಶ್ : ಪಂಚಾಯತ್ ಆಕ್ಟಿನ ಶೆಡ್ಯೂಲ್ ಎರಡರಲ್ಲಿ ರೂರಲ್ Housing -No.8 implementation of housing schemes and distribution of sites in villages outside the grama-thana limits. it is there. ಇದು ಒಂದು ತಾಲ್ಲೂಕು ಪಂಚಾಯಿತಿಯವರು ಮಾಡಬೇಕಾಗಿರತಕ್ಕಂತಹ ಕರ್ತವ್ಯ. ಗ್ರಾಮಸಭೆಯಲ್ಲಿ ಅವರು ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಫಲಾನುಭವಿಗಳನ್ನು ಆಯ್ಕೆ ಮಾಡಿ ಅದರ ಪಟ್ಟಿಯನ್ನು ಕಳುಹಿಸಿಕೊಟ್ಟಿರುತ್ತಾರೆ. ತಾಲ್ಲೂಕು ಪಂಚಾಯಿತಿಯವರು ಆ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಆದರೆ ಒಂದು ವಿಚಾರ ಏನಾಗಿದೆ, ಅನೇಕ ಸಂದರ್ಭಗಳಲ್ಲಿ ಗ್ರಾಮ ಸಭೆಗಳನ್ನು ಮಾಡದೆ, ತಾಲ್ಲೂಕು ಪಂಚಾಯಿತಿಗಳಲ್ಲಿರ ತಕ್ಕಂತಹ ಸದಸ್ಯರು ತಮ್ಮ ತಮ್ಮಲ್ಲಿ ಹಂಚಿಕೆ ಮಾಡಿಕೊಂಡಿದ್ದಾರೆ. ಅದು ವಾಸ್ತವವಾಗಿ ಕೆಲವು ಕಡೆ ಆಗಿರತಕ್ಕಂಥದ್ದು. ಆದರೆ ಅದು ಬೇ ಕಾಯಿದೆ ಬಿರ. ಅದು ಮಾಡಿರತಕ್ಕಂಥದ್ದು ಗ್ರಾಮ ಸಭೆಗಳು ಅಲ್ಲ. ತಾವು ಏನು ಮಾಡಿದ್ದೀರಿ, ಗ್ರಾಮ ಸಭೆಗಳು ನಡೆಯದೆ ಇರತಕ್ಕಂತಹ ಸಂದರ್ಭದಲ್ಲಿ ನವೆಂಬರ್ 30ನೇ ತಾರೀಖಿನ ಒಳಗೆ ನೀವು ಫಲಾನುಭವಿಗಳ ಯಾದಿಯನ್ನು ತಯಾರು ಮಾಡದೆ ಇದ್ದರೆ, ಅಲ್ಲಿರತಕ್ಕಂತಹ ಮುಖ್ಯ ಕಾರ್ಯನಿರ್ವಾಹಕ ಅಧಿಕಾರ ಆ ಪಟ್ಟಿಯನ್ನು ಆಯ್ಕೆ ಮಾಡಿ ಮನೆಗಳನ್ನು ಕಟ್ಟಬೇಕೆಂದು ನಾವು ಆದೇಶ ಕೊಟ್ಟಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ : ಆಯ್ಕೆ ಮಾಡಿ ಕೊಟ್ಟಿದ್ದರು, ಗ್ರಾಮ ಸಭೆಗಳೇ ಮಾಡಬೇಕೆಂದು ಆದೇಶ ಇದ್ದಾಗ....

ಶ್ರೀ ಬಸವರಾಜ ರಾಯರೆಡ್ಡಿ : ಗ್ರಾಮ ಸಭೆ ಈಗಾಗಲೇ ಗುರುತಿಸಿವೆ. ಗುರುತಿಸಿರುವವನ್ನು ಆಯ್ಕೆ ಮಾಡುವುದು ಒಂದೇ ಕೆಲಸ ಉಳಿದಿರುವುದು.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಸರ್ಕಾರದ್ದು ಹೇಳಿ ಸಾಕು.

ಶ್ರೀ ಜೆ. ಪಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಗ್ರಾಮ ಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿಲ್ಲ. ಇದು ಸ್ಪಷ್ಟ. ಅದರ ಜೊತೆ ನಾನು ಮಾತನಾಡುವಾಗ ಒಂದು ವಿಷಯ ಪ್ರಸ್ತಾಪ ಮಾಡಿದೆ. ಗ್ರಾಮ ಸಭೆಗಳಲ್ಲಿರತಕ್ಕಂತಹ ಎಲ್ಲಾ ಅಧಿಕಾರ, ಗ್ರಾಮ ಪಂಚಾಯಿತಿಗಳಲ್ಲಿರತಕ್ಕಂತಹ ಅಧಿಕಾರಿಯನ್ನು ತಾಲ್ಲೂಕು ಪಂಚಾಯಿತಿಗೆ ವರ್ಗಾವಣೆ ಮಾಡಿದ್ದೀರಿ. ಈ ಗ್ರಾಮ ಪಂಚಾಯಿತಿಗಳಿಗೆ ಇರತಕ್ಕಂತಹ ಎಲ್ಲಾ ಅಧಿಕಾರವನ್ನು ಇವತ್ತು ಭಾಗ್ಯಜ್ಯೋತಿ ಫಲಾನುಭವಿಗಳು ಯಾರು ಎಂದು ಗುರುತಿಸತಕ್ಕಂಥದ್ದು ತಾಲ್ಲೂಕು ಪಂಚಾಯಿತಿಗೆ ಕೊಟ್ಟಿದ್ದೀರಿ ಮನೆಗಳನ್ನು ಗುರುತಿಸತಕ್ಕಂಥದ್ದು ತಾಲ್ಲೂಕು ಪಂಚಾಯಿತಿಗೆ ಕೊಟ್ಟಿದ್ದೀರಿ. ಇನ್ನು ಒಂದು ಕಡೆ ಪಂಚಾಯಿತಿಯ, ಆಕ್ಟನಲ್ಲಿ ಇನ್ನು ಯಾವುದೇ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂತಹ ಅಧಿಕಾರ ಗ್ರಾಮ ಪಂಚಾಯಿತಿ ಮತ್ತು ಗ್ರಾಮ ಸಭೆಗಳ ಮುಖಾಂತರ ಎಂದು ಹೇಳಿದ್ದೀರಿ. ಆದರೆ ಇಲ್ಲಿ ಮನೆಗಳನ್ನು ಪಡೆಯತಕ್ಕಂತಹ ಫಲಾನುಭವಿಗಳನ್ನು ಗುರುತಿಸತಕ್ಕಂಥದ್ದಕ್ಕೆ ಒಂದು ಸರ್ಕ್ಯುಲರ್‌ನಲ್ಲಿ ನೀವು ತಾಲ್ಲೂಕು ಪಂಚಾಯಿತಿ ಕೊಟ್ಟರೆ, ಇನ್ನೊಂದು ಸರ್ಕ್ಯುಲರ್‌ನಲ್ಲಿ ನವೆಂಬರ್‌ನಲ್ಲಿ ಸರ್ವೇ ಮಾಡಿದಂತಹ ಪಟ್ಟಿಯನ್ನು ಆಯ್ಕೆ ಮಾಡಬೇಕೆಂದು ಹೇಳಿದಿರಿ. ಆ ಪಟ್ಟಿಯಿಂದಲೂ ಆಯ್ಕೆ ಮಾಡಲಿಲ್ಲ. ಗ್ರಾಮ ಸಭೆಯಿಂದಲೂ ಆಯ್ಕೆ ಮಾಡಲಿಲ್ಲ. ಗ್ರಾಮ ಪಂಚಾಯಿತಿಯಿಂದಲೂ ಆಯ್ಕೆ ಮಾಡಲಿಲ್ಲ.

ಅಧ್ಯಕ್ಷರು : ತಾವು ಆ ವಿಚಾರವನ್ನು ಎರಡು ಮೂರು ಸಲ ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಜೆ.ಪಿ. ಶ್ರೀರಾಮರೆಡ್ಡಿ : ಅದಕ್ಕೆ ಸ್ಪಷ್ಟವಾದ ಉತ್ತರ ಸರ್ಕಾರದಿಂದ ಬೇಕು. ಗ್ರಾಮ ಪಂಚಾಯಿತಿಗೆ ನಿಮ್ಮ ಆಕ್ಟನಲ್ಲಿ ಇರತಕ್ಕಂತಹ ಅಧಿಕಾರಗಳು, ಎರಡನೆಯದಾಗಿ ಗ್ರಾಮ ಪಂಚಾಯಿತಿ ಆಕ್ಟ್‌ನಲ್ಲಿ ಇರತಕ್ಕಂಥದ್ದು ಬಿಟ್ಟು ಬೇರೆಯವರಿಗೆ ಕೊಡುತ್ತೀರಿ ಎಂದು ಹೇಳತಕ್ಕಂಥದ್ದು ಸ್ಪಷ್ಟವಾಗಿ ಸರ್ಕಾರ ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಮೂರು ಗಂಟೆಗಳ ಕಾಲ ಪಸನ್ನಮುಖಿಯಾಗಿ ಬಹಳ ಬಹಳ ನಿರರ್ಗಳವಾಗಿ ಉತ್ತರ ಕೊಟ್ಟರು. ಸಧ್ಯ ಇದೇ ರೀತಿ ಇವರು ಸಭೆಗೆ ಉತ್ತರ ಕೊಟ್ಟರೆ, ಉತ್ತರ ಏನೇ ಆಗಿರಲಿ ನಮಗೆ ಖುಷಿಯಾಗುತ್ತದೆ ಅಷ್ಟೆ. ನನಗೆ ಇವತ್ತು ಬಹಳ ಸಂತೋಷವಾಯಿತು. ಅದು ಕೊನೆಯಲ್ಲಿ ತಪ್ಪಿಸಿಕೊಂಡರು. ಯಡಿಯೂರಪ್ಪನವರು ಎದ್ದಾಗ ಅಲ್ಲೂ ತಪ್ಪಿಸಿಕೊಳ್ಳಬಾರದಾಗಿತ್ತು. ಯಡಿಯೂರಪ್ಪನವರಿಗೆ ಏನು ಅಂದು ಬಿಟ್ಟರು ತಲೆ ಇಲ್ಲವೇನೋ ಅನ್ನುವ ತರಹ ಹೇಳಿ ಬಿಟ್ಟರು. ಆ ತರಹ ಕೇಳಿ ಬಿಟ್ಟರೆ ನಮ್ಮ ಗತಿ ಏನು?

ಅಧ್ಯಕ್ಷರು : ನಿಮ್ಮ ವಿಚಾರದಲ್ಲಿ ಹಾಗೆ ಹೇಳುವುದಕ್ಕಾಗುವುದಿಲ್ಲ. ನೀವು ಟೋಪಿ ಹಾಕಿಕೊಂಡಿರುವುದರಿಂದ ತಲೆ ಇದೆ ಎಂದು ಆಗುತ್ತದೆ.

2.40 ಪಿ.ಎಂ.

ಏನಾಗುತ್ತದೆ ಎಂದರೆ ಯಾವ ಗಳಿಗೆಯಲ್ಲಿ ಅವರು ಸಿಟ್ಟಿಗೇಳುತ್ತಾರೋ, ಯಾವ ಗಳಿಗೆಯಲ್ಲಿ ಅವರು ನಗುತ್ತಾರೋ ಒಂದೂ ಗೊತ್ತಾಗುವುದಿಲ್ಲ. ಆದಕಾರಣ ಸ್ವಲ್ಪ ಭಯ ಬರುತ್ತದೆ. ಅವರ ಇವೊತ್ತು ಅವರು ಯಾವುದೇ ರೀತಿಯ ಸಿಟ್ಟಿಗೇಳದೇ ಮೂರು ಗಂಟೆಗಳ ಕಾಲ ಉತ್ತರಿಸಿದ್ದಾರೆ. ಅವರು ಹೇಳಿರುವಂಥ ಕಾರ್ಯಕ್ರಮಗಳನ್ನು ಸರ್ಕಾರ ಮಾಡುತ್ತದೆಯೋ ಬಿಡುತ್ತದೆಯೋ ಅದು ಬೇರೆ ವಿಚಾರ ಅದನ್ನು ಮುಂದೆ ನೋಡಿಕೊಳ್ಳೋಣ. ಆದಕ್ಕಾದರೂ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಅದರ ಬಗ್ಗೆ ದೀರ್ಘವಾದ ಚರ್ಚೆಗೆ ನಾನು ಹೋಗುವುದಿಲ್ಲ. ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಡೀ ರಾಜ್ಯಾದ್ಯಂತ ತಾವು ನಮಗೆ ನೀರು ಇಲ್ಲವೆಂದು ಹೇಳಿದ್ದೀರಿ. ಒಂದು ಹನಿ ನೀರನ್ನು ಕೊಡುವುದಿಲ್ಲವೆಂದು ತಾವು ವಿರೋಧಪಕ್ಷಗಳ ಸಭೆಯಲ್ಲಿ ಹೇಳಿದಿರಿ ನಮ್ಮಲ್ಲಿಯೇ ನೀರು ಇಲ್ಲದಿರುವಾಗ, ನೀವು ಆರು. ಟಿ.ಎಂ.ಸಿ. ನೀರನ್ನು ಬಿಡುವುದಕ್ಕೆ ಒಪ್ಪಿಕೊಳ್ಳುವಂಥ ನಿರ್ಧಾರ ಏನು? ಇದು ಅತ್ಯಂತ ಪ್ರಾಮುಖ್ಯವಾದದ್ದು. ಎರಡನೆಯದು ನ್ಯಾಯ ಮಂಡಳಿ ತೀವ್ರವಾದಂಥ ಹೋರಾಟವನ್ನು ಮಾಡಿದಿರಿ. ಮುಖ್ಯಮಂತ್ರಿಗಳಾಗಿ ಬಂದ ಮೇಲೂ ಅದರ ಬಗ್ಗೆ ವಿಶ್ವಾಸ ಇಟ್ಟುಕೊಂಡಿದ್ದೇನೆ ಎಂದು ಅನ್ನದೇ ಇದ್ದರೂ, ಈ ಸದನದಲ್ಲಿ ತಾವು ಮತ್ತೇ ಆ ನ್ಯಾಯಮಂಡಲಿಗೆ ಹೊಂದಿಕೊಂಡಿರತಕ್ಕಂಥ, ರೀತಿ ಏನು? ನ್ಯಾಯಮಂಡಳಿಯನ್ನು ನೇರವಾಗಿ ಬಹಿಷ್ಕಾರ ಮಾಡುವುದಕ್ಕೆ ತಮ್ಮ ಸರ್ಕಾರ ಸಿದ್ಧ ಇದೆಯೋ ಇಲ್ಲವೋ ಎನ್ನತಕ್ಕಂಥ ಪ್ರಶ್ನೆ ಎರಡನೆಯದು. ತಾವು ದಯಮಾಡಿ ಹೇಳಬೇಕು ಸ್ವಾಮೀ.

ಶ್ರೀ ಕಾಗೋಡು ತಿಮ್ಮಪ್ಪ : ನಾವು ಕೇಳಿದ್ದಕ್ಕೆ ಉತ್ತರ ಬರಲೇ ಇಲ್ಲ. ಬೇರೆ ವಿಷಯ ತೆಗೆದುಕೊಂಡಿಲ್ಲ.

ಅಧ್ಯಕ್ಷರು : ಈಗ ಹಸಿವಾಗಿದೆ. ಶಿವಪ್ಪನವರೇ ಈಗ ಬೇಡ, ಸಭಾಪತಿಯವರೇ ನಿಮ್ಮದೂ ಕೇಳಿಬಿಡಿ, ಒಟ್ಟಿಗೆ ಉತ್ತರ ಕೊಡುತ್ತಾರೆ.

ಶ್ರೀ ಹೆಚ್. ಶಿವಪ್ಪ : ನಾನು ಅದೇ ಹೇಳುತ್ತಿರುವುದು. ಊಟಕ್ಕೆ ಹೋಗೋಣ ಎಂದು.

ಶ್ರೀ ಯು.ಆರ್. ಸಭಾಪತಿ : ಸನ್ಮಾನ್ಯ ಸಭಾಧ್ಯಕ್ಷರೇ, ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಮೊನ್ನೆ ನಾನು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಿದ ಬಗ್ಗೆ ಅವರು ಗಮನಹರಿಸಿದ್ದರೋ ಇಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಾದರು ಪೂರ್ತಿ ಆಗಲೀ ಅಧ್ಯಕ್ಷರೇ, ಇದರ ಉತ್ತರ ಮೊದಲು ಹೇಳಲಿ ಮೇಲೆ ಬೇಕಾದರೆ ಸೆಕಟ್ಟು ತೆಗೆದುಕೊಳ್ಳಿ. ಅದಾದರೂ ಪೂರ್ತಿ ಮುಗಿಸಿಬಿಡಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಒಟ್ಟಿಗೆ ಹೇಳಿಬಿಡಿ.

ಅಧ್ಯಕ್ಷರು : ಆಯಿತು ಆ ಮೇಲೆ ಹೇಳುತ್ತೇನೆ.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಕಾಗೋಡು ತಿಮ್ಮಪ್ಪನವರು ಸ್ವಲ್ಪಮಟ್ಟಿಗೆ ಈ ಮೂರು ಸಂಸ್ಥೆಗಳಲ್ಲಿ ಗೊಂದಲ ಉಂಟಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಅದನ್ನು ನಾನು ಬಗೆಹರಿಸುವುದಕ್ಕೆ ಅತೀ ಶೀಘ್ರವಾಗಿ ಸಂಬಂಧಪಟ್ಟಂಥ ಇಲಾಖಾ ಅಧಿಕಾರಿಗಳನ್ನು ಕರೆಯಿಸಿ, ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಆಶ್ವಾಸನೆ ಕೊಡುತ್ತೇನೆ. Barge-mounted power ಬಗ್ಗೆ ಒಂದು ಮಾತನ್ನು ಹೇಳಿದರು. ಐದೂವರೆ ಕೋಟಿ ನಾವು ಸೆಕ್ಯೂರಿಟಿ ಡಿಪಾಸಿಟ್ ತೆಗೆದುಕೊಂಡಿದ್ದೇವೆ. ಬರೀ ಪೆನಾಲ್ಟಿ ಹಾಕಿ ಕಳುಹಿಸೋದಲ್ಲ, ಈಗ ನಮ್ಮಲ್ಲಿ ಐದೂವರೆ ಕೋಟಿ ಸೆಕ್ಯೂರಿಟಿ ಡಿಪಾಸಿಟ್ ಕೊಟ್ಟಿದ್ದಾರೆ. ಅದರಲ್ಲಿ ಒಂದೊಂದು ದಿನ ಡಿಲೇ ಅದರು ಅವರಿಗೆ ಪೆನಾಲ್ಟಿ ಹಾಕುತ್ತೇವೆ ಎಂದು ಏನು ಹೇಳಿದ್ದೇವೆ. ಅದು ಬಹಳ ಪ್ರಾಮುಖ್ಯವಾದದ್ದು. ಆ ವಿಷಯವನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇನ್ನು ಎರಡನೆಯದು, ಯಡಿಯೂರಪ್ಪನವರು ಬಗ್ಗೆ, ನಾನು ಅವರ ಬಗ್ಗೆ ಬೇರೆ ಏನೂ ತರಹ ಅಲ್ಲ, ಜನ ಬೀದಿಯಲ್ಲಿ ದುಡ್ಡಿನ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಹೇಳಿದಾಗ ನಾನು ಹೇಳಿದ ಹೊರತಾಗಿ ನಾನು ಬೇರೆ ಕಾರಣದಿಂದ ಏನೂ ಹೇಳಿರಲಿಲ್ಲ. ಏಕೆಂದರೆ ಬೀದಿಯಲ್ಲಿ ಜನ ಮಾತನಾಡಿಕೊಳ್ಳುತ್ತಾರೆ, 180 ಕೋಟಿ ತಿಂದು ಹಾಕಿದರು 250 ಕೋಟಿ ತಿಂದು ಹಾಕಿದರು, 75 ಕೋಟಿ ತಿಂದು ಹಾಕಿದರು ಬೀದಿಯಲ್ಲಿ ಮಾತನಾಡಿಕೊಳ್ಳುವುದು ನಾವು ಇಲ್ಲಿ ಮಾತನಾಡೋದಕ್ಕೆ ಹೋದರೆ ಬೀದಿಯಲ್ಲೇ ಉತ್ತರ ಕೊಡಬೇಕಾಗುತ್ತದೆ ಎಂದು ಆ ಕಾಂಟೆಕ್ಸ್ಟ್‌ನಲ್ಲಿ ನಾನು ಹೇಳಿದೆ. ಆದರೆ ವಾಟಾಳ್ ನಾಗರಾಜ್ ರವರು ಅದಕ್ಕೆ ವ್ಯಾಖ್ಯಾನ ಬೇರೆ ತರಹ ಮಾಡಿಬಿಟ್ಟರು.

ಶ್ರೀ ವಾಟಾಳ್ ನಾಗರಾಜ್ : ನಮಗೆ ಭಯ ಬರುತ್ತದೆ ಎಂದು ಹೇಳಿದೆ ಅಷ್ಟೆ.

ಶ್ರೀ ಹೆಚ್. ಡಿ. ದೇವೇಗೌಡ : ಇಲ್ಲ ಇಲ್ಲ. ಅವರು ಹೇಳಿದ್ದು ನಿಮಗೆ ಜ್ಞಾಪಕ ಇರಬಹುದು. 125 ಕೋಟಿ, 75 ಕೋಟಿ ಎಂದು ಬೀದಿಯಲ್ಲಿ ಮಾತನಾಡುತ್ತಿದ್ದಾರೆ ಎಂದು ಹೇಳಿದರು. ಅದಕ್ಕೆ ಹೇಳಿದ ಬೀದಿಯಲ್ಲಿ ಉತ್ತರ ಕೊಡೋಣ ಎಂದು, ಆ ಕಾಂಟೆಕ್ಸ್ಟನಲ್ಲಿ ಹೇಳಿದೆ ನಾನು. ಈಗ ತಾವ್ಯಾರದು ಏನು ಮಾತು ಹೇಳಿದಿರಿ, ಅದು ಟಿ.ಎಂ.ಸಿ. ನೀರನ್ನು ಬಿಟ್ಟಿರಲ್ಲ ಎಂದು. ನಾನು ವಿನಯವಾಗಿ ತಮ್ಮಲ್ಲಿ ಈ ವಿಷಯದ ಬಗ್ಗೆ ವಿನಂತಿ ಮಾಡುತ್ತೇನೆ. ಈಗಾಗಲೇ ಎಲ್ಲರೂ ಸಹಕರಿಸಿದ್ದಾರೆ. ಇದರ ಬಗ್ಗೆ ನಾನು ಹೆಚ್ಚಿಗೆ ವ್ಯಾಖ್ಯಾನ ಮಾಡುವುದಿಲ್ಲ. ಸ್ವಲ್ಪ ಮಟ್ಟಿಗೆ ನಮಗೊಂದು ಹೊಸ ವಾತಾವರಣ ನಿರ್ಮಾಣ ಆಗಿದೆ. ನೀವು ಕೂಡ ಸಹಕರಿಸಿ. ರಾಜ್ಯಕ್ಕೆ ಆಗಿರುವ ಅನ್ಯಾಯ, ನೀವು ಹುಟ್ಟುವುದಕ್ಕಿಂತ ಮುಂಚೆ, ನಾವು ಹುಟ್ಟುವುದಕ್ಕಿಂತ ಮುಂಚೆ, ಬಹುಶಃ ಈ ಸದನದಲ್ಲಿರುವ ಬಹುತೇಕ ಸದಸ್ಯರು ಹುಟ್ಟುವುದಕ್ಕಿಂತ ಮುಂಚೆ ಅಂಥ ಅನ್ಯಾಯ ಏನು ಇದೆ, ಅದನ್ನು ನಮ್ಮ

ಕಾಲದಲ್ಲಾದರೂ ಸರಿಪಡಿಸಲಿಕ್ಕೆ ಒಂದು ಹೊಸ ವಾತಾವರಣವನ್ನು ಈಗ ನಾವೇನು ನಿರ್ಮಾಣ ಮಾಡಿದ್ದೇವೆ, ನಾವು ಅನ್ನುವುದಲ್ಲ ಎಲ್ಲರೂ ಕಲೆಕ್ಟಿವ್ ಆಗಿ, because the Supreme Court has given a historic decision. ದಯಮಾಡಿ ಈ ಸಂದರ್ಭದಲ್ಲಿ 11 ಟಿ.ಎಂ.ಸಿ.ಗೆ ಬದಲಾಗಿ ಆರು ಟಿ.ಎಂ.ಸಿ., ಆಗಿದೆ ಅಷ್ಟೇ ಬಿಡೋಣ ನಾವು ಅದರ ಬಗ್ಗೆ ವ್ಯಾಖ್ಯಾನ ಮಾಡುವುದು ಬೇಡ. It is a new development. ತಾವು ದಯಮಾಡಿ ಸಹಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಸಭಾಧ್ಯಕ್ಷರೇ, ಒಂದೇ ಪ್ರಾಮುಖ್ಯವಾದಂಥ ಪ್ರಶ್ನೆಯನ್ನು ನಾನು ಮುಖ್ಯಮಂತ್ರಿಯವರಲ್ಲಿ ಕೇಳಬಯಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆಯಾಗಿರತಕ್ಕಂಥ ಉಷ್ಣ ವಿದ್ಯುತ್ ಸ್ಥಾವರಗಳೇ, ವಿದ್ಯುತ್ ಸ್ಥಾವರ ಆಗಲಿ ಹೊಸ ತಂತ್ರಜ್ಞಾನ ಅಳವಡಿಸುವ ಬಗ್ಗೆ ನನ್ನದೇನೂ ಆಕ್ಷೇಪ ಇಲ್ಲ. ನನ್ನನ್ನು ಪರದೇಶಕ್ಕೆ ಕಳುಹಿಸುತ್ತೇನೆ ನೀವು ಹೋಗಿ ಅಧ್ಯಯನ ಮಾಡಿಕೊಂಡು ಬನ್ನಿ ಎಂದು ಕೇಳಿದ್ದಾರೆ. ಆ ಪ್ರಶ್ನೆ ಇಲ್ಲ. ಅಲ್ಲಿಯ ಪರಿಸರವಾದಿಗಳು, ಸೈಂಟಿಸ್ಟ್ ಅಲ್ಲಿ ಇದ್ದಾರೆ, ಅವರು ಕೇಳುವ ಪ್ರಶ್ನೆಗೆ ಈ ಕೈಗಾರಿಕೆಗಳು ಉತ್ತರಿಸಿದರೆ, ಅವರು ತೃಪ್ತರಾದರೆ ನಮ್ಮದೇನು ಅಡ್ಡಿ ಇಲ್ಲ. ಮತ್ತು ನಾವು ಇಲ್ಲಿ ರಾಜಕೀಯ ಮಾಡುವ ಪ್ರಶ್ನೆ ಇಲ್ಲ. ಮತ್ತೆ ನಾನೇನು ಬಿಜೆಪಿಯವರೊಟ್ಟಿಗೆ ಒಂದು ಗೂಡಿ....

ಅಧ್ಯಕ್ಷರು : ಆಯಿತು. ಈಗ ಟೈಮ್ ಆಯಿತು. ಬೇಗ ಮುಗಿಸಿ.

ಶ್ರೀ ಯು.ಆರ್. ಸಭಾಪತಿ : ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕಾಗಿ ನಾನು ಹೇಳಿದ್ದೇನೆ ನನ್ನೊಟ್ಟಿಗೆ ಬಿ.ಜೆ.ಪಿ ಯವರು ಸೇರಿದ್ದಾರೆ ವಿನಹ ನಾನು ಬಿ.ಜೆ.ಪಿಯವರೊಂದಿಗೆ ಹೋಗುವ ಪ್ರಶ್ನೆಯೇ ಇಲ್ಲ. ಮೊನ್ನೆ 29.12.1995ಕ್ಕೆ ಒಂದು ಸರ್ಕಾರಿ ಆದೇಶವಾಗಿದೆ. According to the G.O.. a study on carrying capacity of the environment in the region wil be made before clearing projects in the district.

ಇದು ಆದಮೇಲೆ ಮತ್ತೆ ಎರಡು ಕೈಗಾರಿಕೆಗಳಿಗೆ ನೀವು ಅನುಮತಿಯನ್ನು ಕೊಟ್ಟಿದ್ದೀರಿ, ಇದು ಸರಿಯಲ್ಲವೆಂದು ಹೇಳುವುದು ನನ್ನ ಪ್ರಶ್ನೆ. ಇನ್ನೊಂದು ಪ್ರಾಮುಖ್ಯವಾದ ಪ್ರಶ್ನೆ ಏನೆಂದು ಹೇಳಿದರೆ ಮೊನ್ನೆ ನಾನು ಮಾತನಾಡುವಾಗ ತೋಟಗಾರಿಕಾ ಇಲಾಖೆಯ ಬಿಡ್ಡಿಯಲ್ಲಿ ಸುಮಾರು ಐವತ್ತು ಕೋಟಿಯ ಹಗರಣದ ಬಗ್ಗೆ ನಾನು ವ್ಯಾಖ್ಯಾನ ಮಾಡಿದ್ದೇನೆ. ಅದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಯಾವುದೇ ವಿಚಾರವನ್ನು ಮಾಡಿಲ್ಲ. ಆ ಅಧಿಕಾರಿಗಳ ಮೇಲೆ ನೀವು ತೆಗೆದುಕೊಂಡ ಕ್ರಮವೇನು ? ಈ ಹಗರಣ ನಡೆದಿದೆಯೇ? ಇದರಲ್ಲಿ ಸರ್ಕಾರದ ಬೊಕ್ಕಸದಿಂದ ಎಷ್ಟು ಹಣ ಲೂಟಿಯಾಗಿದೆ. ಮತ್ತಷ್ಟು ಸರ್ಕಾರದ ಬೊಕ್ಕಸದಿಂದ ಲೂಟಿಯಾಗುವಂಥ ಪರಿಸ್ಥಿತಿ ಉದ್ಭವವಾಗಿದೆ. ಇದನ್ನು ಮುಖ್ಯಮಂತ್ರಿಗಳು ದಯವಿಟ್ಟು ಸ್ಪಷ್ಟವಾಗಿ ಹೇಳಬೇಕೆಂದು ಕೇಳಬಯಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆ ಈ ಸಭೆಯಲ್ಲಿ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟನ್ನು ಕುರಿತು ಪ್ರಸ್ತಾಪದ ಬಗ್ಗೆ ಹೇಳಿದ್ದಾರೆ. ಅದರ ವಿವರ ಕೊಡುವೆ. 1990ಕ್ಕಿಂತ

ಮುಂಚೆ ನಾಲ್ಕು ಜನಕ್ಕೆ ಕೊಟ್ಟಿದ್ದಾರೆ. ನೀವು ಹೇಳಿದ ವಿವರ ಕೊಡುತ್ತೇನೆ. 1990ಕ್ಕಿಂತ ಮುಂಚೆ 1984ರಲ್ಲಿ ಇಬ್ಬರಿಗೆ ಕೊಟ್ಟಿದ್ದಾರೆ. Upto 1990 four people have been given promotion. 1990ರಲ್ಲಿ ಎಂಟು ಜನಕ್ಕೆ ಕೊಟ್ಟಿದ್ದಾರೆ. 1991ರಲ್ಲಿ ಹದಿಮೂರು ಜನ ಮಿನಿಸ್ಟ್ರಿಯಲ್ ಕೇಡರ್, ಎರಡು ಜನ ಟೆಕ್ನಿಕಲ್ ಕೇಡರ್‌ಗೆ ಕೊಟ್ಟಿದ್ದಾರೆ. 1992ರಲ್ಲಿ ಎಂಟು ಜನ ಮಿನಿಸ್ಟ್ರಿಯಲ್ ಕೇಡರ್ ಎರಡು ಜನ ಟೆಕ್ನಿಕಲ್ ಕೇಡರ್, 1993ರಲ್ಲಿ ಎರಡು ಜನ ಮಿನಿಸ್ಟ್ರಿಯಲ್ ಕೇಡರ್ ಒಂದು ಟೆಕ್ನಿಕಲ್ ಕೇಡರ್, 1994ರಲ್ಲಿ ಐದು ಮಿನಿಸ್ಟ್ರಿಯಲ್ ಕೇಡರ್, ಒಂದು ಟೆಕ್ನಿಕಲ್ ಕೇಡರ್. 1995ರಲ್ಲಿ ಮೂರು ಮಿನಿಸ್ಟ್ರಿಯಲ್ ಕೇಡರ್, 18 ಟೆಕ್ನಿಕಲ್ ಕೇಡರ್, ಒಟ್ಟು 42 ಜನ ಮಿನಿಸ್ಟ್ರಿಯಲ್ ಕೇಡರ್, 28 ಜನ ಟೆಕ್ನಿಕಲ್ ಕೇಡರ್, ಇದು 1984 ರಿಂದ ಪ್ರಾರಂಭವಾಗಿದೆ. ನೀವು ಹೇಳಿದ್ದ ಎಲ್ಲಾ ದಾಖಲಾತಿಗಳನ್ನು ತರಿಸಿದ್ದೇನೆ. ಇದು ಇನ್ನೂ ಸರ್ಕಾರದ ಗಮನಕ್ಕೆ ಬಂದಿಲ್ಲ, ಇದು ಇಲಾಖೆಯ ಗಮನಕ್ಕೆ ಬಂದಿದೆ. ನನ್ನ ಗಮನಕ್ಕೆ ಬಂದಿದ್ದು ನೀವು ಹೇಳಿದ ಮೇಲೆ, ನಾನು ಇದನ್ನು ತರಿಸಿದ್ದೇನೆ. ಆ ಇಲಾಖೆಯವರು ಎಕ್ಸಾಮಿನ್ ಮಾಡುತ್ತಿದ್ದಾರೆ. During July 1995 the Director of Horticulture received compiaints about irregularities on promotions. The Director of Horticulture set up a committee consisting of Joint Director (Administration): Headquarters Assistant to the Director of Horticulture. Accounts Officer and Deputy Director (Fruits & vegetables) to go into all such cases on 4.7.95. This committee submitted its confirmed that November 1995. Based on its finding, it is confirmed that the payment of arrears in some cases were irregular. Show-cause notices were issued to the concerned asking them why the arrears paid to them should not be recovered. The director of Horticulture has passed recovery orders in about 41 cases. ನಾನು ಹೇಳಿದ್ದೇನೆ 45 ಪ್ಲಸ್ 25, ಮಿನಿಸ್ಟ್ರಿಯಲ್ ಕೇಡರ್ 45, ಟೆಕ್ನಿಕಲ್ ಕೇಡರ್ ಒಟ್ಟು 67 ಜನಕ್ಕೆ ಕೊಟ್ಟಿರುವುದು. ಅದರಲ್ಲಿ the Director of Horticulture has passed recovery orders in 41 cases so far involving Rs.35 lakhs. ಒಟ್ಟು ಇದರಲ್ಲಿ ಇನವಾಲ್ವ ಆಗಿದ್ದುದು ಐವತ್ತು ಲಕ್ಷ ರೂಪಾಯಿಗಳು. ಐವತ್ತು ಕೋಟಿಯಲ್ಲ.

ಶ್ರೀ ಯು.ಆರ್. ಸಭಾಪತಿ : ಇದರಲ್ಲಿ ಆರ್ಡರ್ ಪಾಸು ಮಾಡಿದವರು ಯಾರು? ಇವತ್ತು ನೀವು ಡೈರೆಕ್ಟರ್ ಎಂದು ಹೇಳುತ್ತಿದ್ದೀರಿ. ಡೈರೆಕ್ಟರ್ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದರು ಎಂದು ಹೇಳಿದ್ದೀರಿ. ಪ್ರೊಮೋಷನ್ನು ಪಡೆಗೊಳಿಸುವಂತೆ ಬಡ್ತಿ ಮಾಡಿದ ಒಂದು ರೆಸ್ಪಾನ್ಸಿಬಲ್ ಪರ್ಸನ್ ಯಾರು? ಅವರು ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಅಧ್ಯಕ್ಷರು : ಕೋಟಿಗಳೇ? ಲಕ್ಷಗಳೆ? ಏಕೆಂದರೆ ನೀವು ಲಕ್ಷಗಳಲ್ಲಿದ್ದೀರಿ, ಅವರು ಕೋಟಿಗಳಲ್ಲಿದ್ದಾರೆ. ನಮಗೆ ಲೆಕ್ಕವೇ ಸಿಗುತ್ತಿಲ್ಲ.

ಶ್ರೀ ಯು.ಆರ್. ಸಭಾಪತಿ : ನಾನು ಪುರಾವೆ ಕೊಟ್ಟಿದ್ದೇನೆ. ಒಂದೇ ದಿವಸ ಭಡ್ತಿಯಾದಂಥ ಪ್ರಕರಣದ ಬಗ್ಗೆ ಕೂಡ ನಾನು ಪುರಾವೆ ಕೊಟ್ಟಿದ್ದೇನೆ. ಅದರ ಬಗ್ಗೆ ಸಂಪೂರ್ಣ ಮಾಹಿತಿ ಕೊಟ್ಟಿದ್ದೇನೆ ಆದರೆ ಅವರು ಕೊಟ್ಟ ಮಾಹಿತಿ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್.ಡಿ.ದೇವೇಗೌಡ : ಇದನ್ನು ಕೊಟ್ಟಿರತಕ್ಕಂಥದ್ದು ಡೈರೆಕ್ಟರ್ The Director is the promoting authority for these categories of employees.

SRI U.R. SABHAPATHY : Is he not responsible for that?

ಶ್ರೀ ಹೆಚ್.ಡಿ. ದೇವೇಗೌಡ : ಒಬ್ಬ ಡೈರೆಕ್ಟರನ್ನು ಹೇಗೆ ರೆಸ್ಪಾನ್ಸಿಬಲ್ ಮಾಡುತ್ತೀರಿ? 1984ರಲ್ಲಿ ಏನಾಗಿದೆ ಎಂದರೆ ಪಾರ್ಟಿಕ್ಯುಲರ್ ಡಿಪಾರ್ಟ್‌ಮೆಂಟಿನಲ್ಲಿ ಸಿನಿಯಾರಿಟಿ ಲಿಸ್ಟ್ ಹಾಗೂ ಗ್ರೇಡೇಶನ್ ಲೀಸ್ಟ್ ಬಗ್ಗೆ ದೊಡ್ಡ ವಿವಾದ ಇದೆ. ಸರಿಯಾದ ರೀತಿಯಲ್ಲಿ ಸಮಸ್ಯೆ ಬಗೆಹರಿದಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಅದನ್ನೇ ಹೇಳಿದ ನಾನು ಸಿನಿಯಾರಿಟಿ ಲೀಸ್ಟ್ ಬಗ್ಗೆ ದೊಡ್ಡ ವ್ಯಾಖ್ಯಾನಗಳು, ತರ್ಕ ವಿತರ್ಕಗಳು ಕೋರ್ಟ್ ಇದೆಲ್ಲಾ ಹತ್ತಿ ಗಲಾಟೆಯಾಗಿದೆ. ಈ ಒಬ್ಬ ಡೈರೆಕ್ಟರ್‌ರನ್ನು ನಾವು ಇದರಲ್ಲಿ ಭಾಗಿ ಮಾಡಲಿಕ್ಕೆ ಬರುವುದಿಲ್ಲ. Since 1984, what they have adopted was wrong, ಇದನ್ನು ಟ್ರೇಸ್ ಔಟ್ ಮಾಡಿ the Director himself has constituted a committee and the process is on and. 41 ಜನರ ಮೇಲೆ ರಿಕವರಿಗೆ ಆರ್ಡರ್ ಮಾಡಿದ್ದಾರೆ. ಇನ್ನು ಉಳಿದವರ ಮೇಲೆ ಅವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಒಬ್ಬ ಡೈರೆಕ್ಟರನ್ನು ನಾವು ಹೊಣೆಗಾರಿಕೆ ಮಾಡುವುದಕ್ಕಾಗುವುದಿಲ್ಲ ಹಿಂದಿನ ಸರ್ವಿಸ್ ಮ್ಯಾಟರ್‌ನಲ್ಲಿ ತಪ್ಪು ಗ್ರಹಿಕೆಯಿಂದಾಗಿ, ಈಗ ಒಬ್ಬನಿಗೆ ಪ್ರಮೋಶನ್ ಸಿಕ್ಕಿದ ತಕ್ಷಣ ಸಕಟ್ಟಿ ಮ್ಯಾನ್ ಇನ್ನೊಬ್ಬ ಹೋಗಬೇಕು.

SRI U.R. SABAPATI : What about the retrospective effect? ಅವರು ಪೂರ್ವಾನ್ವಯದ ಮೂಲಕ ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ.ದೇವೇಗೌಡ : ಆ ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಟ್ಟಿರುವುದೇ ತಪ್ಪು ಎನ್ನತಕ್ಕಂಥದ್ದು ಈಗ ಗೊತ್ತಾದ್ದರಿಂದ, ಅವರ ಮೇಲೆಯೇ ಇವೊತ್ತು ರಿಕವರಿಗೆ ಆರ್ಡರ್ ಮಾಡಿರುವುದು.

ಶ್ರೀ ಯು.ಆರ್. ಸಭಾಪತಿ : ಪರಿಸರದ ಬಗ್ಗೆ ನಾನು ಕೇಳಿದ ಪ್ರಶ್ನೆಗೆ ಉತ್ತರ ಹೇಳಲಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಪರಿಸರದ ಬಗ್ಗೆ ನೀವು ಏನು ಕೇಳಿದಿರಿ, ನೀವು ಬಿ.ಜೆ.ಪಿ .ಪರವಾಗಿ ವಾದ ಮಾಡುತ್ತಿದ್ದೀರಿ ಅಥವಾ ನೀವು ವಿದೇಶಕ್ಕೆ ಹೋಗುವುದಕ್ಕೆ ಆಸಕ್ತಿ ಇಟ್ಟುಕೊಂಡಿದ್ದೀರಿ ಎಂದು ನಾನು ಎಲ್ಲಿಯೂ ಹೇಳಲಿಲ್ಲ. ನಾನು ಬಂದಂಥ ನಿಯೋಗಕ್ಕೆ ನಿಮ್ಮ ಸಮ್ಮುಖದಲ್ಲಿ ರಿಕ್ವೆಸ್ಟ್ ಮಾಡಿಕೊಂಡೆ, ನಿಮ್ಮನ್ನು ಹೋಗಿ ಎಂದು ನಾನು ಹೇಳಿದೆ ಎಂದು ನಿಯೋಗ ತಿಳಿದುಕೊಳ್ಳಬೇಡ, ಆ ರೀತಿಯ ಮಾತನ್ನು ನಾನು ಹೇಳಿಲ್ಲ. ಏನು ನಿಯೋಗ ಅವೊತ್ತು ಬಂದಿತ್ತು ಅದರಲ್ಲಿ ನೀವೂ ಕೂಡ ಇದ್ದಿರಿ. ನೀವು ಇದ್ದಾಗ ನಾನು ಆ ರಿಕ್ವೆಸ್ಟ್ ಮಾಡಿದೆ. ಈಗ ಅದರೊಳಗೆ.....

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಒಂದು ಪಕ್ಷ ನೀವೂ ಕೂಡ ಹೋಗಿ ಬಂದರೆ ಅದರಲ್ಲಿ ತಪ್ಪೇನಿದೆ ನನಗೇನೂ ಅರ್ಥವಾಗುತ್ತಿಲ್ಲ, ನಿಮ್ಮಂಥ ಮಾತುಗಾರರು, ಬುದ್ಧಿವಂತರು ಅಲ್ಲಿಗೆ ಹೋಗಿ ಬಂದರೆ ನಮಗೆ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ಪರಿಸರದ ಬಗ್ಗೆ ಒಂದು ಕಮಿಟಿಯ ರೆಕಮೆಂಡೇಶನ್ ಬಂದಿದೆ. ಅದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ, ಇದು ಸರ್ಕಾರದ ಪರಿಶೀಲನೆಯಲ್ಲಿದೆ ಎನ್ನತಕ್ಕಂಥದ್ದನ್ನು ಗೌವರ್ನರ್‌ರವರು ಹೇಳಿದ್ದಾರೆ, ಸರ್ಕಾರವು ಕೈಗಾರಿಕೆಗೆ ಸಂಬಂಧಪಟ್ಟಂತೆ ಕರಾವಳಿ ಪ್ರದೇಶದ ಕೈಗಾರಿಕೆಗಳನ್ನೊಳಗೊಂಡಂತೆ, ಜೀವಿ ಪರಿಸ್ಥಿತಿ ವಿಷಯದಲ್ಲಿ ಸೂಕ್ಷ್ಮಗಮನ, ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಡ್ಯಾನಿಡೋ ನೆರವಿನ ಪರಿಸರ ಸಂಬಂಧಿ ಬೃಹತ್ ಯೋಜನೆಯ ಅಧ್ಯಯನ ವರದಿಯು ಪೂರ್ಣಗೊಂಡಿದೆಯೆಂದು ಮತ್ತು ಅದು ಮಾಡಿರುವ ಶಿಫಾರಸ್ಸುಗಳನ್ನು ತೀವ್ರವಾಗಿ ಪರಿಶೀಲಿಸಲಾಗುತ್ತದೆಂದು ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಡ್ಯಾನಿಡೋ ನೆರವಿನಿಂದ ಎಕ್ಸಪರ್ಟ್ಸ್ ಈ ಪರಿಸರದ ಬಗ್ಗೆ ಕೊಟ್ಟಿರುತಕ್ಕಂಥ ವರದಿ, ಅದೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯ ಪರಿಸರದ ಬಗ್ಗೆ that is under the serious consideration of the Government ಎನ್ನುವ ಒಂದು ಮಾತನ್ನು ಹೇಳಿದ್ದೇನೆ. ಬಹುಶಃ ....

ಶ್ರೀ ಯು.ಆರ್. ಸಭಾಪತಿ : ಆ ವರದಿ ಇನ್ನೂ ಬಂದಿಲ್ಲ,

ಶ್ರೀ ಹೆಚ್. ಡಿ. ದೇವೇಗೌಡ : ಈಗ ಗೌವರ್ನರ್ ಹೇಳಿದ ಮೇಲೆ that is an official document ಅಲ್ಲವೇ?

ಶ್ರೀ ಯು.ಆರ್. ಸಭಾಪತಿ : ಅಧ್ಯಕ್ಷರೇ, planning capacity ಬಗ್ಗೆ ಡ್ಯಾನಿಡೋದಲ್ಲಿ ಯಾವುದೇ ಅಂಶವಿಲ್ಲ, what about the planning capacity?

SRI R.V. DESHPANDE : We have got the report.

SRI U.R. SABAPATHI : What about the planning capacity?

ಅಧ್ಯಕ್ಷರು : ಆಯಿತು, ಪುಟ್ಟಣ್ಣಯ್ಯನವರೇ ತಾವು ಕ್ಲಾರಿಫಿಕೇಶನ್ ಬೇಗ ಕೇಳಿ,

(INTERRUPTIONS)

ಆಯಿತು ಬೇರೆ ಅವಕಾಶ ಸಿಕ್ಕಿದಾಗ ಸಭಾಪತಿಯವರೇ ಆಗ ನೀವು ಮಾತನಾಡಬಹುದು, ಪುಟ್ಟಣ್ಣಯ್ಯನವರೇ ನೀವು ಮಾತನಾಡಿ.

ಶ್ರೀ ಯು.ಆರ್. ಸಭಾಪತಿ : ನನಗೆ ಉತ್ತರ ಬರಲಿಲ್ಲ, ಇದು ಬಹಳ ಮಹತ್ವದ ಪ್ರಶ್ನೆ.

ಅಧ್ಯಕ್ಷರು : ಹೌದು ಎಲ್ಲಾ ಮಹತ್ವದ್ದೇ...

ಶ್ರೀ ಯು.ಆರ್. ಸಭಾಪತಿ : ಎಲ್ಲಾ ಮಹತ್ವದ್ದು ಅಂದ ಮೇಲೆ ನನಗೆ ಉತ್ತರ ಹೇಳಬೇಕು.

MR. SPEAKER : You please ask clarification. ಪುಟ್ಟಣ್ಣಯ್ಯನವರೇ ತಾವು ಸ್ಪಷ್ಟೀಕರಣ ಕೇಳಿ.

ಶ್ರೀ ಯು.ಆರ್. ಸಭಾಪತಿ : ಈ ರೀತಿಯಾದರೆ ನಾನು ಇದನ್ನು ಒಪ್ಪುವುದಿಲ್ಲ ಅಧ್ಯಕ್ಷರೇ,

ಅಧ್ಯಕ್ಷರು : ನೀವು ಒಪ್ಪದೇ ಇದ್ದರೆ ಇಲ್ಲಿ ನಡೆಯುವುದಿಲ್ಲವೋ. ನೀವು ಒಬ್ಬರೇ ಅಲ್ಲ ಸದಸ್ಯರು. ಪುಟ್ಟಣ್ಣಯ್ಯನವರೇ ನೀವು ಸ್ಪಷ್ಟೀಕರಣ ಕೇಳಿ.

ಶ್ರೀ ಯು.ಆರ್. ಸಭಾಪತಿ : ನನಗೆ ಬೇಕಾಗಿರುವುದು ಇಲ್ಲಿರುವ ರೀತಿಯಲ್ಲಿ "..region will be made before clearing the new project in the district". ಎಂದು ಹೇಳುವಂಥದ್ದು ಮ್ಯಾನಿಫೆಸ್ಟೋದಲ್ಲಿ ಇಲ್ಲ planning capacity ಎಲ್ಲಾಗಿದೆ ಸದನಕ್ಕೆ ಅದನ್ನು ಪ್ರೊಡ್ಯೂಸ್ ಮಾಡಿ, ಏಕೆ ಸುಳ್ಳು ಹೇಳುತ್ತೀರಿ? ಇದಕ್ಕೆ ನೀವು ಉತ್ತರ ಕೊಡದಿದ್ದರೆ ನಾನು ಸಭಾತ್ಯಾಗ ಮಾಡುತ್ತೇನೆ. ನನಗೆ ಸ್ಪಷ್ಟವಾದ ಉತ್ತರ ಬೇಕು.

ಶ್ರೀ ಹೆಚ್. ಡಿ. ದೇವೇಗೌಡ : ಗೌವರ್ನರ್ ಸ್ಪೀಚಿನಲ್ಲಿ ಹೇಳಿದ್ದಾರೆ.....

(ಈ ಹಂತದಲ್ಲಿ ಯು.ಆರ್. ಸಭಾಪತಿಯವರು ಮುಖ್ಯಮಂತ್ರಿಗಳ ಉತ್ತರಕ್ಕೆ ಅತೃಪ್ತರಾಗಿ ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೇ, ಬಹಳ ಕಾಳಜಿಯಲ್ಲಿ ಕೃಷಿ ಕ್ಷೇತ್ರದ ಬಗ್ಗೆ ಮಾನ್ಯ ಸಭಾ ನಾಯಕರು ಹೊಸದಾದ ಬದಲಾವಣೆ ಬಗ್ಗೆ ಮಾತನಾಡಿದರು. ಬದಲಾವಣೆ ಏನಾದರೂ ಮಾಡಲಿ, ಈಗ ಹತ್ತಿ ಬೆಳೆಗಾರರಿಗೆ ಕರ್ನಾಟಕ ರಾಜ್ಯದಲ್ಲಿ ಬಹಳ ಅನಾನುಕೂಲವಾಗುವ ರೀತಿಯ ಪರಿಸ್ಥಿತಿ ಸೃಷ್ಟಿಯಾಗಿದೆ. ರೂ. 3,800 ಇದ್ದಂಥ ಹತ್ತಿಯ ಬೆಲೆ ಈಗ ರೂ. 1,600 ರೂ. ಆಗಿದೆ. ರೂ. 1,600 ಗಳಿಗೆ ಹತ್ತಿಯನ್ನು ಮಾರಿದರೆ ಅದಕ್ಕೆ ಸಂಬಂಧಪಟ್ಟ ಹತ್ತಿ ಬಟ್ಟೆಯ ಬೆಲೆ ಒಂದರಿಂದ 4 ಪಟ್ಟು ಜಾಸ್ತಿಯಾಗಿದೆ. ಇನ್ನೊಂದು ಹೇಳಬೇಕೆಂದರೆ ಇವೊತ್ತಿನ ದಿವಸ ಈರುಳ್ಳಿ ಬೆಲೆ 600-700 ರೂ.ಗಳಿಂದ 150-200 ರೂಗಳಿಗೆ ಇಳಿದಿದೆ. ಏನೋ 40 ವರ್ಷದಿಂದ ಮಾಡದೇ ಇರತಕ್ಕಂಥ ಕೃಷಿ ಬೆಳೆ ಬೆಲೆ ಬಗ್ಗೆ ನೀತಿ ಮಾಡುವುದಕ್ಕೆ ಈ ಸರ್ಕಾರದ ಕೈಯಲ್ಲಿ ಆಗುತ್ತದೆ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಕಡೇ ಪಕ್ಷ ಆ ದಿಕ್ಕಿನಲ್ಲಿ ಪ್ರಯತ್ನವನ್ನಾದರೂ ಮಾಡಬೇಕು. ಆಯಾಯಾ ಬೆಳೆಯನ್ನು ಬೆಳೆಯತಕ್ಕಂಥ ರೈತರ ಒಂದು ಸಮಿತಿಯನ್ನು ಮಾಡಿ, ರಾಜ್ಯ ಸರ್ಕಾರ ಏನಾದರೂ ಒಂದು ಮಾಡಬಹುದು ಎನ್ನತಕ್ಕಂಥ ಒಂದು ಸಣ್ಣ ತೀರ್ಮಾನ, ಕನಿಷ್ಟ ಒಂದು ರೇಷ್ಮೆ ಬೆಳೆ ಆಗಬಹುದು, ಯಾವುದೇ ಬೆಳೆ ಆಗಬಹುದು, ಅದರ ಯಾವುದೇ ಬೆಳೆ ಬಗ್ಗೆ ಇದುವರೆಗೂ ಕೂಡ ಆ ಯೋಚನೆ ಸರ್ಕಾರ ಮಾಡಲಿಲ್ಲ. ಆದರೆ ಕೃಷಿ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆ ಮಾಡುತ್ತೇವೆ, 26826 ಹಳ್ಳಿಗಳಲ್ಲಿರತಕ್ಕಂಥ ಗ್ರಾಮೀಣ ಜನರು ಕೃಷಿಯಲ್ಲಿ ಏನು ಬದುಕುತ್ತಿದ್ದಾರೆ, ಅವರ ಜೀವನದ ಬಗ್ಗೆ ಆಲೋಚನೆಯನ್ನು ಮಾಡುತ್ತೇವೆ ಎಂದು ಹೇಳುವಂಥ ಒಂದು ಸರ್ಕಾರ ಆ ದಿಕ್ಕಿನಲ್ಲಿ ಒಂದು ಯಾವುದಾದರೂ ಕೆಲಸ ಮಾಡಿದ್ದರೆ ಈ ಸರ್ಕಾರಕ್ಕೆ ಅವರ ಬಗ್ಗೆ ಕಾಳಜಿ ಇದೆ ಎಂದು

ಒಪ್ಪಿಕೊಳ್ಳಬಹುದಾಗಿತ್ತು. ಇಷ್ಟೊತ್ತು ಈ ಬೆಳೆಯನ್ನು ಬೆಳೆದಿರತಕ್ಕಂಥ ರೈತರು ಬೀದಿ ಪಾಲಾಗಿದ್ದಾರೆ. ಕನಿಷ್ಟ ಇದರ ಬಗ್ಗೆ ಏನು ಮಾಡುತ್ತಾರೆ ಎಂಬ ಬಗ್ಗೆ ಸರ್ಕಾರದವರು ಜವಾಬ್ದಾರಿಯುತ ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಪುಟ್ಟಣ್ಣಯ್ಯನವರು ಹೇಳಿದಂಥ ಕೆಲವು ವಿಷಯಗಳಲ್ಲಿ ಬೆಲೆ ಬಿದ್ದುಹೋದಂಥ ಕಾಲದಲ್ಲಿ ಸರ್ಕಾರದವರು ಏನು ಮಾಡುತ್ತಿದ್ದರು ಎನ್ನುವುದು it is one of the major issues. ಇದೇನು ಅವರು ಎತ್ತಿದಂಥ ಪ್ರಶ್ನೆ ಲಘುವಾದಂಥದ್ದು ಎಂದು ನಾನು ಭಾವಿಸಿ ಕೊಳ್ಳುವುದಿಲ್ಲ. ನಾವು ಬೆಂಬಲ ಬೆಲೆ ಎಂದು ಹೇಳಿದ್ದೇವೆ, ಆದರೆ, ಆ ಬೆಂಬಲ ಬೆಲೆಯನ್ನು ಕೊಟ್ಟುಕೊಂಡುಕೊಳ್ಳತಕ್ಕಂಥ ವ್ಯವಸ್ಥೆ ನಮ್ಮಲ್ಲಿಲ್ಲ. ಭಾರತ ಸರ್ಕಾರದವರು ಬೆಂಬಲ ಬೆಲೆಯನ್ನು ಏನು ಡಿಕ್ಲೇರ್ ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಾಗಿಲ್ಲ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಒಂದು ವಿಷಯವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು, ಕೇಂದ್ರ ಸರ್ಕಾರದವರು ಕೆಲವು ರಾಜ್ಯಗಳಿಗೆ ಈ ಶಕ್ತಿಯನ್ನು ತುಂಬುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮಾರ್ಕೆಟ್ ಮೆಕ್ಯಾನಿಸಮ್ ಎನ್ನತಕ್ಕಂಥ ಒಂದು ಆರ್ಗನೈಸೇಶನ್‌ನ್ನು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಇಷ್ಟೊತ್ತು ಏನು ಅನುಷ್ಠಾನಕ್ಕೆ ತಂದಿದ್ದಾರೋ ಅದು ಕೆಲವೇ ಕೆಲವು ರಾಜ್ಯಗಳಲ್ಲಿ ಇಂಥ ಸನ್ನಿವೇಶ ಬಂದಾಗ, ರವರು ಹೋಗಿ ಕೊಂಡುಕೊಳ್ಳತಕ್ಕಂಥ ವ್ಯವಸ್ಥೆ ನಡೆಯುತ್ತಿದೆ. ನಾನು ಇದನ್ನು ಈ ಸದನದಲ್ಲೇ ಹೇಳಿದ್ದೇನೆ, ಇದು ಹರಿಯಾಣದಲ್ಲಿರಬಹುದು, ಪಂಜಾಬನಲ್ಲಿರಬಹುದು, ಈ ರೀತಿಯ ಸನ್ನಿವೇಶ ಬಂದಂಥ ಕಾಲದಲ್ಲಿ ಸರ್ಕಾರವೇ ಮಧ್ಯ ಪ್ರವೇಶ ಮಾಡಿ, ಆ ಆರ್ಗನೈಸೇಶನ್ ಮುಖಾಂತರ ಕೊಂಡುಕೊಳ್ಳತಕ್ಕಂಥ ವ್ಯವಸ್ಥೆ ಸ್ವಲ್ಪ ಮಟ್ಟಿಗೆ ಅಲ್ಲಿ ಸುಧಾರಿಸಿದೆ, ಸ್ವಲ್ಪ ಗುಜರಾತ್‌ನಲ್ಲೂ ಕೂಡ ಇದೆ. ನಾನು ಪಾರ್ಲಿಮೆಂಟಿನಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇನೆ. ಎರಡನೆಯದಾಗಿ ಅವರು ಈರುಳ್ಳಿ ಬೆಲೆಯ ವಿಷಯದ ಬಗ್ಗೆಯೂ ಹೇಳಿದರು, ಪೆರಿಶಬಲ್ ಆರ್ಟಿಕಲ್ಸ್‌ನ್ನು ನಾವು ಕೊಂಡುಕೊಂಡು ಇಟ್ಟುಕೊಳ್ಳುವುದಕ್ಕೆ ಆಗುವುದಲ್ಲ. ಶ್ರೀಮಾನ್ ಪುಟ್ಟಣ್ಣಯ್ಯನವರೇ, ನೀವು ಪ್ರಾಮಾಣಿಕವಾಗಿ ಯೋಚನೆ ಮಾಡಬೇಕಾಗುತ್ತದೆ, ಇಷ್ಟೊತ್ತಾದರೂ ಮೊದಲನೆಯದಾಗಿ ನಾಲ್ಕಾರು ಕೋಲ್ಡ್ ಸ್ಟೋರೇಜ್ ಮಾಡಬೇಕು ಎನ್ನುವುದರ ಕಡೆ ತೀರ್ಮಾನ ಮಾಡಿ ಈಗಾಗಲೇ 2 ಕೋಲ್ಡ್ ಸ್ಟೋರೇಜಗಳಲ್ಲಿ ಒಂದು ಕೋಲಾರದಲ್ಲಿ ಕಂಪ್ಲೀಟ್ ಆಗಿದೆ, ಇತ್ತೀಚೆಗೆ ನಾಲ್ಕೋ -ಐದೋ ಕೋಲ್ಡ್ ಸ್ಟೋರೇಜ್‌ಗಳನ್ನು ಮಾಡಿದ್ದೇವೆ. ಹರಿಯಾಣದಂಥ ಒಂದು ಸಣ್ಣ ರಾಜ್ಯದಲ್ಲಿ 192 ಕೋಲ್ಡ್‌ಸ್ಟೋರೇಜ್‌ಗಳು ಇವೆ. ಇವುಗಳನ್ನೆಲ್ಲಾ ಮಾಡಬೇಕು ಎಂಬುದೇ ನನ್ನ ಉದ್ದೇಶ. ನಮ್ಮ ಕೃಷಿ ನೀತಿಯೊಳಗೆ ಖಾಸಗೀ ಬಂಡವಾಳವನ್ನು ಹಾಕದೇ ಇದ್ದರೆ, ಸಾಧ್ಯವಾಗುವುದಲ್ಲ. ಈ ದೇಶಕ್ಕೆ ಸ್ವಾತಂತ್ರ್ಯ ಬಂದು 47 ವರ್ಷವಾಯಿತು, ಇನ್ನು 47 ವರ್ಷವೂ ಭಾಷಣ ಮಾಡಿದರೆ ಆಗುವುದಿಲ್ಲ, ಪ್ರೈವೇಟ್ ಕ್ಯಾಪಿಟಲ್‌ಗೆ ಹೆಚ್ಚು ಆಧ್ಯತೆಯನ್ನು ಕೊಡಬೇಕು ಎಂದು, ಇಷ್ಟೊತ್ತು ನಾನು ಅವರು ಒಪ್ಪಿಕೊಂಡೇ ಕೃಷಿ ನೀತಿಯನ್ನು ಅಳವಡಿಸಿರತಕ್ಕಂಥದ್ದು.

ಹಿಂದೆ ಬರೀ ಈರುಳ್ಳಿ ಬೆಲೆ 8 ರೂಪಾಯಿ ಆಯಿತು ಎಂದು ಚರಣ್ ಸಿಂಗರವರ ಸರ್ಕಾರ ಹೊರಟು ಹೋಯಿತು. ಪರಿಸ್ಥಿತಿ ಹೇಗಿದೆ ಈ ದೇಶದಲ್ಲಿ ಎಂದರೆ, ಅದರ ಬಗ್ಗೆ ಹೆಚ್ಚು ಚರ್ಚೆ ಬೇಡ.

ಹೊರಗಡೆಗೆ ರಫ್ತು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ಇಲ್ಲಿ ಈರುಳ್ಳಿ ಬೆಲೆ ಜಾಸ್ತಿಯಾಯಿತು ಎಂದು ಮಾನ್ಯ ಚರಣಸಿಂಗರವರು ಸರ್ಕಾರ ಕಳೆದುಕೊಳ್ಳುವಂತಹ ಪರಿಸ್ಥಿತಿ ಬಂತು. ನೀವು ಹೇಳುವಂತಹ ವಿಚಾರದಲ್ಲಿ ನನಗೆ ಗಮನ ಇದೆ. ಮೊದಲು ಇಂತಹ perishable goods ಗಳಿಗೆ ಸರ್ಕಾರ ಸ್ಟೋರೇಜ್ ಮಾಡತಕ್ಕಂಥ ವ್ಯವಸ್ಥೆಯನ್ನು ಪ್ರತಿ ಜಿಲ್ಲೆಗಳಲ್ಲಿ ಮಾಡಬೇಕಾಗಿದೆ. ಅದಾದಮೇಲೆ ಇವತ್ತು ಕೋಲ್ಡ್ ಸ್ಟೋರೇಜ್ ಒಂದೇ ಅಲ್ಲ ಪ್ಯಾಕೇಜ್, ಗ್ರೇಡಿಂಗ್ ಹಾಗೂ ಟ್ರಾನ್ಸ್‌ಪೋರ್ಟ್ ಮಾಡತಕ್ಕಂಥ ಕೂಡ ಕೋಲ್ಡ್ ಸ್ಟೋರೇಜ್ ಇರಬೇಕಾಗುತ್ತದೆ. ಅದನ್ನು ನಾವು ಯಾವುದೇ ಹೊರರಾಷ್ಟ್ರಕ್ಕೆ ಕಳುಹಿಸುವುದಕ್ಕೆ ಆಗಲಿ ಇವೆಲ್ಲವನ್ನು ಮಾಡಬೇಕು ಎನ್ನುವುದಕ್ಕೋಸ್ಕರ ನಾವು ಎಷ್ಟೊಂದು ದೂರ ಹೋಗಿದ್ದೇವೆ. ಒಂದು ವರ್ಷದಲ್ಲಿ ಬಹಳ ದೂರ ಓಡುವುದಕ್ಕೆ ಆಗುವುದಿಲ್ಲ. ಎಷ್ಟು ದೂರ ನಾನು ಓಡುವುದಕ್ಕೆ ಸಾಧ್ಯ ಅಷ್ಟನ್ನು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೇನೆ. ಇನ್ನೊಂದು ವಿಚಾರ ಎಂದರೆ ಕಾಟನ್ ಬಗ್ಗೆ ಹೇಳಿದಿರಿ. ಕಾಟನ್ ಕಾರ್ಪೋರೇಷನ್ ಆಫ್ ಇಂಡಿಯಾ ಜೀವಂತವಾಗಿದೆಯೋ ಇಲ್ಲವೋ ಎನ್ನುವುದರ ಬಗ್ಗೆ ನಿಮ್ಮ ಪರವಾಗಿ ಆ ಕಡೆ ಗಮನಹರಿಸಿ ಅದು ಮಧ್ಯ ಪ್ರವೇಶ ಮಾಡಿ, ಇಲ್ಲಿ ಏನು ಬಿದ್ದುಹೋಗಿದೆ ಮಾರ್ಕೆಟನಲ್ಲಿ, ಕೆಲವಾರು ಕೊಂಡುಕೊಳ್ಳುವುದಕ್ಕಾದರೂ The Cotton Corporation of India should involve itself ಎಂದು ಹೇಳಿ ಕೇಂದ್ರ ಸರ್ಕಾರದ ಮೇಲೆ, ಒತ್ತಡ ತರುತ್ತೇವೆ. ಇಷ್ಟನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ"

1996ನೇ ಫೆಬ್ರವರಿ, 19ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಈಗ ಸಭೆ ಮುಂದೂಡಲ್ಪಟ್ಟು ಮತ್ತೆ 4.00 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು ತನ್ನ ಕಾರ್ಯಕಲಾಪವನ್ನು 3 ಗಂಟೆ 1 ನಿಮಿಷಕ್ಕೆ ಮುಕ್ತಾಯಗೊಳಿಸಿ ಮತ್ತೆ 4.00 ಗಂಟೆಗೆ ಸೇರುವುದೆಂದು ನಿಶ್ಚಯಿಸಿತು)

(ಸಭೆಯು ಸಂಜೆ 4.10 ಗಂಟೆಗೆ ಮತ್ತೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)